ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಮಕ್ಕಳಿಗೆ ಕೆಲವು ಮೋಜಿನ ಚಟುವಟಿಕೆಗಳ ಮೂಲಕ ಭೂಗೋಳವನ್ನು ಸುಲಭವಾಗಿ ಮನೆಯಲ್ಲಿಯೇ ಕಲಿಸಬಹುದು.

ಆಳ-ಅಗಲ
ಮಲೇರಿಯಾ ಲಸಿಕೆಗೆ ಅನುಮೋದನೆ

ಮತಾಂತರಕ್ಕೆ ಪ್ರಚೋದನೆ ಆರೋಪ: ರಸ್ತೆ ತಡೆ 4

ಕಾವೇರಿಯ ದರ್ಶನ: ಭಕ್ತರ ಹರ್ಷ 4

ಸೋನಿಯಾಗೆ ಸಿಧು ಪತ್ರ: ಭೇಟಿಗೆ ಅವಕಾಶ ಕೋರಿಕೆ

‘ಪುನಶ್ಚೇತನಕ್ಕೆ ಕೊನೇ ಅವಕಾಶ’ 9

ಗಡಿಕೇಶ್ವಾರಕ್ಕೆ ವಿಜ್ಞಾನಿಗಳ ಭೇಟಿ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮಕ್ಕೆ ಭಾನುವಾರ ವಿಜ್ಞಾನಿಗಳು ಭೇಟಿ ನೀಡಿ, ಭೂಕಂಪನದ ಸ್ಥಿತಿಗತಿ ಪರಿಶೀಲಿಸುತ್ತಿರುವಾಗಲೇ ಭೂಮಿ ಕಂಪಿಸಿತು. 4

ಬೆಂಗಳೂರಿನಲ್ಲಿ ₹ 100 ಗಡಿ ದಾಟಿದ ಡೀಸೆಲ್

ನವದೆಹಲಿ: ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಭಾನುವಾರ ಲೀಟರಿಗೆ 35 ಪೈಸೆಯಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಡೀಸೆಲ್ ದರವು ಲೀಟರಿಗೆ 100ರ ಗಡಿ ದಾಟಿರುವ ನಗರಗಳ ಸಾಲಿಗೆ ಬೆಂಗಳೂರು ಸಹ ಸೇರಿಕೊಂಡಿದೆ. 8

21 ರಿಂದ ಮಧ್ಯಾಹ್ನದ ಬಿಸಿಯೂಟ

ಬೆಂಗಳೂರು: ನ. 1 ರಿಂದ ಪ್ರಾಥಮಿಕ ಹಂತದಿಂದಲೇ (1ರಿಂದ 5ರವರೆಗಿನ ತರಗತಿ) ಶಾಲೆಗಳನ್ನು ತೆರೆಯಲು ರಾಜ್ಯ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇದೇ 21ರಿಂದ ಮಧ್ಯಾಹ್ನದ ಬಿಸಿಯೂಟ ವಿತರಿಸಲು ನಿರ್ಧರಿಸಿದೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆಯುಧ ಪೂಜೆ ವೇಳೆ ಖಾಕಿ ಪಡೆಯ ವರ್ತನೆಗೆ ತೀವ್ರ ವಿರೋಧ

ಕೇಸರಿ ದಿರಿಸಿನಲ್ಲಿ ಪೊಲೀಸರು!

ಪ್ರಜಾವಾಣಿ ವಾರ್ತೆ

ವಿಜಯಪುರ/ಉಡುಪಿ/ಬೆಂಗಳೂರು: ವಿಜಯಪುರ ಗ್ರಾಮೀಣ ಹಾಗೂ ಉಡುಪಿ ಜಿಲ್ಲೆಯ ಕಾಪು ಪೊಲೀಸ್ ಠಾಣೆಗಳಲ್ಲಿ ಪೊಲೀಸರು ಕೇಸರಿ ದಿರಿಸು ಧರಿಸಿ ಆಯುಧ ಪೂಜೆ ನೆರವೇರಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಈ ಫೋಟೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಖಾಕಿ ಪಡೆಯ ವರ್ತನೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

ವಿಜಯಪುರ ಗ್ರಾಮೀಣ ಠಾಣೆಯಲ್ಲಿ ನಡೆದ ಆಯುಧ ಪೂಜೆಯಲ್ಲಿ ಪಾಲ್ಗೊಂಡಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ. ಆನಂದಕುಮಾರ್ ಸೇರಿದಂತೆ ಎಲ್ಲರೂ ಕೇಸರಿ ಶಾಲು, ಬಿಳಿ ಟೊಪ್ಪಿ, ಬಿಳಿ ಕುರ್ತಾ ಮತ್ತು ಪೈಜಾಮಾ ಧರಿಸಿದ್ದರು. ಕೇಸರಿ ಶಾಲು ಧರಿಸಿರುವುದನ್ನು ಎಸ್‌ಪಿ ಸಮರ್ಥಿಸಿಕೊಂಡಿದ್ದಾರೆ.

ಕಾಪು ಪೊಲೀಸ್ ಠಾಣೆಯಲ್ಲಿನ ಆಯುಧ ಪೂಜೆ ವೇಳೆ ಅಲ್ಲಿನ ಪುರುಷ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕೇಸರಿ ಅಂಗಿ ಹಾಗೂ ಬಿಳಿ ಪಂಚೆ ಧರಿಸಿದ್ದರು. ಮಹಿಳಾ ಸಿಬ್ಬಂದಿಯಲ್ಲಿ ಹಲವರು ಕೇಸರಿ ಸೀರೆ ಧರಿಸಿದ್ದರು. ಇದು ತಮ್ಮ ಗಮನಕ್ಕೆ ಬಂದಿಲ್ಲ ಎಂದಿರುವ ಉಡುಪಿ ಎಸ್‌ಪಿ ಎನ್.ವಿಷ್ಣುವರ್ಧನ್, ಮಾಹಿತಿ ಪಡೆಯುವುದಾಗಿ ತಿಳಿಸಿದ್ದಾರೆ.

ಭಾರಿ ವಿರೋಧ: ಎರಡೂ ಪೊಲೀಸ್ ಠಾಣೆಗಳಲ್ಲಿ ನಡೆದ ಆಯುಧ ಪೂಜೆಯ ಫೋಟೊಗಳು ಭಾನುವಾರ ಬೆಳಿಗ್ಗೆ ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್, ಇನ್‌ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದವು.

9ನೇ ಪುಟ ನೋಡಿ

ಕಾಪು ಠಾಣೆಯ ಪೊಲೀಸರು ಕೇಸರಿ ದಿರಿಸು ಧರಿಸಿ, ಆಯುಧ ಪೂಜೆಯಲ್ಲಿ ಪಾಲ್ಗೊಂಡಿರುವ ಚಿತ್ರ

‘ಕಾಮಾಲೆ ಕಣ್ಣಿನಿಂದ ನೋಡಬೇಡಿ’

ಸಿದ್ದರಾಮಯ್ಯ ಅವರೇ, ಶ್ವೇತವರ್ಣದ ದಿರಿಸು, ಅದಕ್ಕೊಂದು ಕೇಸರಿ ಬಣ್ಣದ ಶಲ್ಯ, ತಲೆಗೊಂದು ಗಾಂಧಿ ಟೋಪಿ ಇವು ನಿಮಗೆ ಜಂಗಲ್ ರಾಜ್, ಕೋಮುವಾದ ಅನಿಸಿದರೆ ದಯವಿಟ್ಟು ವೈದ್ಯರನ್ನು ಸಂಪರ್ಕಿಸಿ. ಅದು ಮನೋರೋಗ ಆಗಿರಬಹುದು. ನಿಮ್ಮ ರಾಜಕೀಯ ಚಪಲಕ್ಕೆ ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡಿ ಪೊಲೀಸರನ್ನು ಅವಮಾನಿಸಬೇಡಿ.

- ಬಿಜೆಪಿ ರಾಜ್ಯ ಘಟಕ

‘ತ್ರಿಶೂಲ, ಹಿಂಸೆಯ ದೀಕ್ಷೆ ಕೊಟ್ಟುಬಿಡಿ’

ಪೊಲೀಸರು ಕೇಸರಿ ದಿರಿಸು ಧರಿಸಿ ಆಯುಧ ಪೂಜೆ ನೆರವೇರಿಸಿರುವ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಪೊಲೀಸರ ದಿರಿಸು ಮಾತ್ರ ಏಕೆ ಬದಲಿಸಿದ್ದೀರಿ ಮುಖ್ಯಮಂತ್ರಿಗಳೇ? ಅವರ ಕೈಗೆ ತ್ರಿಶೂಲಗಳನ್ನೂ ಕೊಟ್ಟು, ಹಿಂಸೆಯ ದೀಕ್ಷೆ ಕೊಟ್ಟು ಬಿಡಿ. ಅಲ್ಲಿಗೆ ನಿಮ್ಮ ಜಂಗಲ್ ರಾಜ್ ಸ್ಥಾಪನೆಯ ಕನಸು ನನಸಾಗಬಹುದು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

9ನೇ ಪುಟ ನೋಡಿ

ಪ್ರವಾಹ–ಭೂಕುಸಿತ: ಮೃತರ ಸಂಖ್ಯೆ 22ಕ್ಕೆ ಏರಿಕೆ

ಕೋಟಯಂ/ಇಡುಕ್ಕಿ (ಪಿಟಿಐ): ಕೇರಳದಲ್ಲಿ ಶನಿವಾರ ಸುರಿದ ಭಾರಿ ಮಳೆ, ಪ್ರವಾಹ ಹಾಗೂ ಭೂಕುಸಿತದಿಂದಾಗಿ ಮೃತಪಟ್ಟವರ ಸಂಖ್ಯೆ ಭಾನುವಾರ 22ಕ್ಕೆ ಏರಿದೆ. ಹಲವು ಜನರು ನಾಪತ್ತೆಯಾಗಿದ್ದು, ಶೋಧ ಕಾರ್ಯ ಮುಂದುವರಿದಿದೆ.

ಇಡುಕ್ಕಿ ಹಾಗೂ ಕೋಟಯಂ ಜಿಲ್ಲೆಗಳ ವಿವಿಧೆಡೆ ಭೂಕುಸಿತವಾಗಿದ್ದು, ಅವಶೇಷಗಳ ಅಡಿ ಸಿಲುಕಿದ್ದ 22 ಜನರ ಮೃತದೇಹಗಳನ್ನು ರಕ್ಷಣಾ ಸಿಬ್ಬಂದಿ ಹೊರತೆಗೆದಿದ್ದಾರೆ. ಈ ಪೈಕಿ, 13 ಮಂದಿ ಕೋಟಯಂ ಜಿಲ್ಲೆಯ ಕೂಟ್ಟಿಕಲ್‌ಗೆ ಸೇರಿದವರಾಗಿದ್ದಾರೆ ಎಂದು ರಾಜ್ಯ ಕಂದಾಯ ಸಚಿವ ಕೆ. ರಾಜನ್ ತಿಳಿಸಿದ್ದಾರೆ.

ಕೂಟ್ಟಿಕಲ್‌ನಲ್ಲಿ ಮನೆಯೊಂದು ಕೊಚ್ಚಿಹೋಗಿದ್ದು, ಮೂವರು ಬಾಲಕಿಯರು ಸೇರಿದಂತೆ ಒಂದೇ ಕುಟುಂಬದ ಆರು ಜನರು ಮೃತಪಟ್ಟಿದ್ದಾರೆ. ಆ ಪೈಕಿ ಮೂವರ ಮೃತದೇಹಗಳು ಶನಿವಾರ ಸಿಕ್ಕಿದ್ದರೆ, ಉಳಿದವರ ಮೃತದೇಹಗಳು ಪತ್ತೆಯಾಗಿವೆ.

ಇಡುಕ್ಕಿ ಜಿಲ್ಲೆಯ ಕೊಕ್ಕಯಾರ್‌ನಲ್ಲಿ ಭೂಕುಸಿತದಿಂದ ಕೆಸರಿನಲ್ಲಿ ಹೂತು ಹೋಗಿದ್ದ ವಾಹನವನ್ನು ಭಾನುವಾರ ಹೊರತೆಗೆಯಲಾಯಿತು –ಎಎಫ್‌ಪಿ ಚಿತ್ರ

ಇಡುಕ್ಕಿ ಜಿಲ್ಲೆಯ ಕೊಕ್ಕಯಾರ್‌ನಲ್ಲಿ, ಕೆಸರಿನಲ್ಲಿ ಹುದುಗಿ ಹೋಗಿದ್ದ ಮೂರು ಮಕ್ಕಳ ಮೃತದೇಹಗಳು ಪರಸ್ಪರ ಕೈ ಹಿಡಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿವೆ. ಕಾಣೆಯಾದ ಐವರಿಗೆ ಹುಡುಕಾಟ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರಬ್ಬೀ ಸಮುದ್ರದಲ್ಲಿನ ವಾಯುಭಾರ ಕುಸಿತದಿಂದಾಗಿ ಕೇರಳದಲ್ಲಿ ಶನಿವಾರ ಭಾರಿ ಮಳೆಯಾಗಿತ್ತು. ಅ.20ರಂದು ಮತ್ತೆ ಭಾರಿ ಮಳೆಯಾಗಲಿದ್ದು, ಮೂರ್ನಾಲ್ಕು ದಿನಗಳವರೆಗೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ರಾಜ್ಯ ಸರ್ಕಾರವು, ಮೃತರ ಕುಟುಂಬದವರಿಗೆ ₹4 ಲಕ್ಷ ಪರಿಹಾರ ಘೋಷಿಸಿದೆ

ಇನ್ನಷ್ಟು ಸುದ್ದಿಗಳು 9

ಪೊಲೀಸ್ ಕುಟುಂಬಗಳ ಸ್ಥಳಾಂತರಕ್ಕೆ ಸಿದ್ಧತೆ ● 'ಬಿ' ಬ್ಲಾಕ್ ಕಟ್ಟಡದ ಅರ್ಧ ಭಾಗದಲ್ಲಿ ಬಿರುಕು

ವಾಲಿದ ವಸತಿ ಸಮುಚ್ಚಯ; ಪಾಯದಲ್ಲಿ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿನ್ನಿ ಮಿಲ್ ಬಳಿ ನಿರ್ಮಿಸಲಾಗಿರುವ ಏಳು ಮಹಡಿಯ ಪೊಲೀಸ್ ವಸತಿ ಸಮುಚ್ಚಯದ 'ಬಿ' ಬ್ಲಾಕ್ ಕಟ್ಟಡದ ಅರ್ಧ ಭಾಗ ವಾಲಿದ್ದು, ಪಾಯದಲ್ಲಿ ಉಂಟಾಗಿರುವ ಸಮಸ್ಯೆಯೇ ಇದಕ್ಕೆ ಕಾರಣವೆಂದು ತಜ್ಞರು ಅನುಮಾನಪಟ್ಟಿದ್ದಾರೆ.

ಏಳು ಮಹಡಿ ಕಟ್ಟಡವನ್ನು ಎ, ಬಿ ಹಾಗೂ ಸಿ ಬ್ಲಾಕ್ ಎಂಬುದಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಬ್ಲಾಕ್ ಕಟ್ಟಡಗಳ ನಡುವೆ ಅಂತರ ಬಿಡಲಾಗಿದೆ. ಈ ಪೈಕಿ ಬಿ ಬ್ಲಾಕ್ ಕಟ್ಟಡದ ಅರ್ಧ ಭಾಗದಲ್ಲಿ ಮಾತ್ರ ಬಿರುಕು ಕಾಣಿಸಿಕೊಂಡಿದ್ದು, 6 ಇಂಚಿನಷ್ಟು ಕಟ್ಟಡ ವಾಲಿದೆ.

ಬಿನ್ನಿ ಮಿಲ್ ಬಳಿ ಇರುವ ಪೊಲೀಸ್ ವಸತಿ ಸಮುಚ್ಚಯ – ಪ್ರಜಾವಾಣಿ ಚಿತ್ರ

ಪೊಲೀಸ್ ಗೃಹ ಮಂಡಳಿಯ ತಾಂತ್ರಿಕ ಸಮಿತಿ ತಜ್ಞರು ನೀಡಿದ್ದ ವರದಿಯಂತೆ 32 ಪೊಲೀಸ್ ಕುಟುಂಬಗಳ ಸ್ಥಳಾಂತರಕ್ಕೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ. ಪ್ರತಿಯೊಂದು ಕುಟುಂಬಕ್ಕೆ ಅನ್ನಪೂರ್ಣೇಶ್ವರಿನಗರ ಬಳಿಯ ವಸತಿ ಸಮುಚ್ಚಯದಲ್ಲಿ ಮನೆಗಳ ಹಂಚಿಕೆ ಮಾಡಿ ಶನಿವಾರ ರಾತ್ರಿಯೇ ಆದೇಶ ಪ್ರತಿ ಸಹ ನೀಡಲಾಗಿದೆ. ತ್ವರಿತವಾಗಿ ಮನೆ ಖಾಲಿ ಮಾಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಆದರೆ, ಈ ಆದೇಶ ಪೊಲೀಸ್ ಕುಟುಂಬದವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಮಕ್ಕಳು, ವೃದ್ಧರನ್ನು ಕರೆದುಕೊಂಡು ತ್ವರಿತವಾಗಿ ಮನೆ ಖಾಲಿ ಮಾಡುವುದು ಹೇಗೆ ಎಂದು ನಿವಾಸಿಗಳು ಪ್ರಶ್ನಿಸುತ್ತಿದ್ದಾರೆ.

'2020ರಿಂದಲೇ ಕಟ್ಟಡದಲ್ಲಿ ಬಿರುಕು ನೋಡುತ್ತಿದ್ದೇವೆ. ಕಟ್ಟಡದ ತುದಿಯಲ್ಲಿ ಬಿರುಕು ಇದ್ದು, ಒಂದೂ ಮನೆಗೂ ಹಾನಿಯಾಗಿಲ್ಲ. ದೊಡ್ಡ ಅನಾಹುತವೇ ಸಂಭವಿಸಿದ ರೀತಿಯಲ್ಲಿ ಬಿಂಬಿಸಲಾಗುತ್ತಿದ್ದು, ದಿಢೀರ್ ಮನೆ ಖಾಲಿ ಮಾಡುವುದು ಹೇಗೆ?' ಎಂದು ಕುಟುಂಬದವರು ಹೇಳಿದರು.

'ನಮ್ಮಲ್ಲಿ ಶಾಲಾ ಮಕ್ಕಳು ಹೆಚ್ಚಿದ್ದಾರೆ. ಅ. 21ರಿಂದ ಶಾಲೆಗಳು ಶುರುವಾಗಲಿವೆ. ಸದ್ಯ 10 ಕಿ.ಮೀ ದೂರದ ಶಾಲೆಗೆ ಹೋಗಬೇಕಿದೆ. ಅನ್ನಪೂರ್ಣೇಶ್ವರಿನಗರಕ್ಕೆ ಸ್ಥಳಾಂತರವಾದರೆ, ಅಲ್ಲಿಂದ 25 ಕಿ.ಮೀ ಶಾಲೆಗೆ ಹೋಗಬೇಕು. ಸಂದಿಗ್ಧ ಸ್ಥಿತಿಯಲ್ಲಿ ನಾವಿದ್ದೇವೆ. ಅನಿವಾರ್ಯವಾಗಿ ಮನೆ ಖಾಲಿ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ' ಎಂದೂ ಅಳಲು ತೋಡಿಕೊಂಡರು.

ಎಂಜಿನಿಯರ್‌ಗಳ ಭೇಟಿ: ಬೆಂಗಳೂರು ಸಿವಿಲ್ ಎಂಜಿನಿಯರ್ಸ್ ಕನ್ಸ್‌ಲ್ಟಂಟ್ ಒಕ್ಕೂಟದ ಚೇರ್ಮನ್ ಶ್ರೀಕಾಂತ್ ಚನ್ನಾಳ ಹಾಗೂ ಸದಸ್ಯರು, ವಸತಿ ಸಮುಚ್ಚಯ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು.

'ಬಿರುಕು ಕಾಣಿಸಿಕೊಂಡು ಕಟ್ಟಡ ವಾಲಿರುವುದಕ್ಕೆ ಪಾಯದಲ್ಲಿರುವ ಸಮಸ್ಯೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಈ ಬಗ್ಗೆ ಮತ್ತಷ್ಟು ಅಧ್ಯಯನ ಅಗತ್ಯವಿದೆ. ಐಐಎಸ್ಸಿ ತಜ್ಞರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ' ಎಂದೂ ಹೇಳಿದರು.

ಸಿವಿಲ್ ಎಂಜಿನಿಯರ್ ಗಿರೀಶ್, 'ಪಾಯವನ್ನು ವೈಜ್ಞಾನಿಕವಾಗಿ ಸರಿಪಡಿಸುವ ಹಾಗೂ ಕಟ್ಟಡದ ಒಂದು ಭಾಗವನ್ನು ಜಾಕ್ ಮೂಲಕ ಮೇಲಕ್ಕೆತ್ತಬಹುದು. ಇದನ್ನು ಹೊರತುಪಡಿಸಿಯೂ ಸಮಸ್ಯೆ ಇತ್ಯರ್ಥಕ್ಕೆ ಹಲವು ಅವಕಾಶಗಳಿವೆ' ಎಂದರು.

ಸಾಮಾಜಿಕ ಕಾರ್ಯಕ್ಕೆ ದಂಪತಿಯ ಸಾಹಸ

ಬೆಂಗಳೂರು: ಸಾಮಾಜಿಕ ಕಾರ್ಯದ ಉದ್ದೇಶಕ್ಕಾಗಿ ಅಭಿಷೇಕ್ ಮತ್ತು ರಂಜನಾ ಭಟ್ಟ ದಂಪತಿ, ಪ್ರವಾಸ ಮತ್ತು ಸಾಹಸ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ವಿಭಿನ್ನ ಪ್ರಯತ್ನದಲ್ಲಿ ಸಾಗಿದ್ದಾರೆ.

ಸದ್ಯ ಬ್ರಿಟನ್‌ನಲ್ಲಿ ನೆಲೆಸಿರುವ ಅವರು ತಮ್ಮ ಹವ್ಯಾಸಕ್ಕೆ ಮಾನವೀಯತೆಯ ಸ್ಪರ್ಶ ನೀಡಿದ್ದಾರೆ. ತಾವು ಕೈಗೊಳ್ಳುವ ಸಾಹಸ ಕಾರ್ಯಕ್ಕೆ ಹಣ ಸಂಗ್ರಹಿಸಿ ಸಂಕಷ್ಟದಲ್ಲಿರುವವರಿಗೆ ಮತ್ತು ಬಡವರಿಗೆ ನೀಡುತ್ತಿದ್ದಾರೆ.

ಬಿಡುವಿನ ವೇಳೆಯಲ್ಲಿ ಈ ದಂಪತಿ ಸದಾ ವೈವಿಧ್ಯಮಯ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ಜತೆಗೆ, ಗುಡ್ಡ, ಬೆಟ್ಟಗಳನ್ನು ಏರುವುದು ಇವರ ನೆಚ್ಚಿನ ಹವ್ಯಾಸ.

ಕಳೆದ ಆಗಸ್ಟ್ 8ರಿಂದ ಮೂರು ಶಿಖರಗಳನ್ನೇರುವ ಸಾಹಸ ಕಾರ್ಯವನ್ನು ಇವರು ಕೈಗೊಂಡಿದ್ದರು. ಸ್ಕಾಟ್‌ಲೆಂಡ್‌ನ ಬೆನ್ ನೆವಿಸ್, ಇಂಗ್ಲೆಂಡ್‌ನ ಸ್ಕಾಫೆಲ್ ಪೈಕ್ ಹಾಗೂ ವೇಲ್ಸ್‌ನಲ್ಲಿರುವ ಸ್ನೊಡಾನ್ ಶಿಖರಗಳನ್ನು ಏರಿದ್ದರು. ಒಟ್ಟು 37 ಕಿಲೋ ಮೀಟರ್ ಸಾಹಸ ಪ್ರಯಾಣ ಇದಾಗಿತ್ತು. ಒಟ್ಟು 10,052 ಅಡಿಗಳಷ್ಟು ಎತ್ತರ ಏರುವ ಸಾಹಸ ಮಾಡಿದ್ದಾರೆ.

ರಂಜನಾ ಭಟ್ಟ ಮತ್ತು ಅಭಿಷೇಕ್

ಬೆಂಗಳೂರು ಮೂಲದ ಸರ್ಕಾರೇತರ ಸಂಸ್ಥೆ 'ಮಾರ್ಗ'ಕ್ಕಾಗಿ ಹಣ ಸಂಗ್ರಹಿಸಲು ಅವರು ಈ ಸಾಹಸ ಕಾರ್ಯಕೈಗೊಂಡಿದ್ದರು. ಅಭಿಷೇಕ್ ಮತ್ತು ರಂಜನಾ ಭಟ್ಟ ದಂಪತಿ ಈ ಸಾಹಸ ಕಾರ್ಯದಿಂದ 2,000 ಪೌಂಡ್ (ಸುಮಾರು ₹2ಲಕ್ಷ) ಸಂಗ್ರಹಿಸಿದ್ದರು.

ಕೋವಿಡ್–19ನಿಂದ ಸಂಕಷ್ಟಕ್ಕೆ ಸಿಲುಕಿದ ಕೊಳೆಗೇರಿ ಪ್ರದೇಶದಲ್ಲಿ ಬಡವರಿಗೆ ನೆರವು ನೀಡುವುದಕ್ಕೆ ಈ ಹಣವನ್ನು ಬಳಸಲಾಗುತ್ತಿದೆ.

ನಗರ ಪ್ರದೇಶದ ಕೊಳೆಗೇರಿ ಪ್ರದೇಶ ಮತ್ತು ಬೀದಿಗಳಲ್ಲಿ ವಾಸಿಸುವವರಿಗೆ 'ಮಾರ್ಗ' ನೆರವು ನೀಡುತ್ತದೆ. ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯಿಂದ ಸಂಕಷ್ಟಕ್ಕೆ ಸಿಲುಕಿದ 20 ಕೊಳೆಗೇರಿ ಪ್ರದೇಶದಲ್ಲಿನ 1 ಲಕ್ಷಕ್ಕೂ ಹೆಚ್ಚು ಜನರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯದಲ್ಲಿ 'ಮಾರ್ಗ ಸಂಸ್ಥೆ' ತೊಡಗಿದೆ.

'ದೇಶ ಸುತ್ತಬೇಕು, ಕೋಶ ಓದಬೇಕು. ಪ್ರವಾಸದಿಂದ ಸಾಕಷ್ಟು ಕಲಿಯಬಹುದು. ಅಮೆರಿಕ ಮತ್ತು ಬ್ರಿಟನ್ ಸೇರಿದಂತೆ 25 ದೇಶಗಳಲ್ಲಿ ಸುತ್ತಾಡಿದ್ದೇವೆ' ಎಂದು ರಂಜನಾ ಭಟ್ಟ ಹೇಳಿದ್ದಾರೆ.

ಬಸವನಗುಡಿಯ ಎಪಿಎಸ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರ ಚುನಾವಣಾ ಪೂರ್ವಭಾವಿ ಪ್ರಚಾರ ಸಭೆಯಲ್ಲಿ ಅಭ್ಯರ್ಥಿ ಅಶೋಕ ಹಾರನಹಳ್ಳಿ ಮಾತನಾಡಿದರು.ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಸತ್ಯಧ್ಯಾನಾಚಾರ್, ಶಾಸಕರಾದ ಎಲ್.ಎ.ರವಿ ಸುಬ್ರಹ್ಮಣ್ಯ, ಉದಯ್ ಬಿ.ಗರುಡಾಚಾರ್, ಕಟ್ಟೆ ಸತ್ಯನಾರಾಯಣ ಹಾಗೂ ಇತರರು ಇದ್ದರು.

ನಿರಂತರ ಮಳೆ; ರಾಜಾಜಿನಗರದಲ್ಲಿ ಕುಸಿದ ಮನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ದಿನಗಳಿಂದ ಬಿಡುವು ಕೊಡುತ್ತಲೇ ನಿರಂತರವಾಗಿ ಮಳೆ ಆಗಿದ್ದು, ಇದರಿಂದಾಗಿ ಕಟ್ಟಡಗಳು ಶಿಥಿಲಗೊಳ್ಳುತ್ತಿವೆ. ಕೆಲ ಕಟ್ಟಡಗಳು ಕುಸಿದು ಬೀಳುತ್ತಿವೆ.

ಮೋಡ ಕವಿದ ವಾತಾವರಣ

ನಗರದಲ್ಲಿ ಭಾನುವಾರ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಹಲವೆಡೆ ಜಿಟಿ ಜಿಟಿ ಮಳೆಯಾಯಿತು. ಕೆಲ ದಿನಗಳಿಂದ ಜೋರಾಗಿ ಸುರಿಯುತ್ತಿದ್ದ ಮಳೆಯ ಅಬ್ಬರ ಭಾನುವಾರ ಸ್ವಲ್ಪ ಕಡಿಮೆಯಾಗಿತ್ತು.

ನಿರಂತರ ಮಳೆಯಿಂದಾಗಿ ನಗರದ ಬಹುತೇಕ ಕಡೆ ಕಟ್ಟಡಗಳು ಶಿಥಿಲಗೊಂಡಿದ್ದು, ಕುಸಿದು ಬೀಳುವ ಆತಂಕ ನಿವಾಸಿಗಳನ್ನು ಕಾಡುತ್ತಿದೆ.

ಕಮರ್ಷಿಯಲ್ ಸ್ಟ್ರೀಟ್ ಮುಖ್ಯರಸ್ತೆಯಲ್ಲಿ 100 ವರ್ಷ ಹಳೇ ಕಟ್ಟಡ ಶನಿವಾರ ಮಧ್ಯಾಹ್ನ ಕುಸಿದು ಬಿದ್ದಿತ್ತು. ಅದರ ಅವಶೇಷಗಳ ತೆರವು ಕಾರ್ಯಾಚರಣೆ ಭಾನುವಾರವೂ ನಡೆಯಿತು.

ರಾಜಾಜಿನಗರ ಬಳಿಯ ದಯಾನಂದನಗರದ ರಾಜೀವ್ ಗಾಂಧಿ ಕಾಲೊನಿಯಲ್ಲಿ ಮನೆಯೊಂದು ಕುಸಿದು ಬಿದ್ದಿದೆ. ಸುಮಾರು 60 ವರ್ಷಗಳ ಹಳೇ ಮಳೆ, ಕೆಲ ದಿನಗಳ ಹಿಂದೆಯೇ ಬಿರುಕು ಬಿಟ್ಟಿತ್ತು. ಅಪಾಯದ ಮುನ್ಸೂಚನೆ ನೀಡುತ್ತಿತ್ತು. ಮನೆಯಲ್ಲಿ ವಾಸವಿದ್ದ ನಿವಾಸಿಗಳು ಹಾಗೂ ಅಕ್ಕ–ಪಕ್ಕದ ಮನೆಗಳ ನಿವಾಸಿಗಳು ಶನಿವಾರ ಬೆಳಿಗ್ಗೆ ಬೇರೆಡೆ ಸ್ಥಳಾಂತರಗೊಂಡಿದ್ದರು.

ಬಿರುಕು ಬಿಟ್ಟು ವಾಲಿದ್ದ ಕಟ್ಟಡ ಭಾನುವಾರ ಸಂಪೂರ್ಣ ಕುಸಿದು ಬಿತ್ತು. ಮನೆಯೊಳಗೆ ಹಾಗೂ ಅಕ್ಕ–ಪಕ್ಕದಲ್ಲಿ ಯಾರೂ ಇರಲಿಲ್ಲ. ಕಟ್ಟಡದ ಕುಸಿದ ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರು, ಬಿಬಿಎಂಪಿ ಸಿಬ್ಬಂದಿ ಸ್ಥಳಕ್ಕೆ ಬಂದು ಕಾರ್ಯಾಚರಣೆ ನಡೆಸಿದರು. ಅವಶೇಷಗಳ ತೆರವು ಕೆಲಸದಲ್ಲಿ ನಿರತರಾಗಿದ್ದರು.

ಸ್ಪಂದಿಸದ ಅಧಿಕಾರಿಗಳು: ವಾರ್ಡ್ ನಂಬರ್ 97ರ ವ್ಯಾಪ್ತಿಯಲ್ಲಿರುವ ಕಟ್ಟಡದಲ್ಲಿ ಬಿರುಕು ಕಾಣಿಸುತ್ತಿದ್ದಂತೆ ನಿವಾಸಿಗಳು ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಆದರೆ, ಅಧಿಕಾರಿಗಳು ಯಾವುದೇ ಸ್ಪಂದನೆ ನೀಡಿರಲಿಲ್ಲವೆಂದು ನಿವಾಸಿಗಳು ಆರೋಪಿಸಿದರು.

ಅಧಿಕಾರಿ, 'ಮನೆ ಶಿಥಿಲಗೊಂಡಿದ್ದರಿಂದ ಹೊಸ ಮನೆ ನಿರ್ಮಾಣಕ್ಕಾಗಿ ಪ್ರಧಾನಮಂತ್ರಿ ನಿವಾಸ್ ಯೋಜನೆಯಡಿ ಹಣ ಮಂಜೂರಾಗಿತ್ತು. ಆದರೆ, ಕುಟುಂಬದವರ ನಡುವಿನ ವ್ಯಾಜ್ಯದಿಂದ ಹಣ ಬಿಡುಗಡೆ ಆಗಿರಲಿಲ್ಲ. ಹಳೇ ಮನೆಯಲ್ಲೇ ಎರಡು ಕುಟುಂಬದವರು ವಾಸವಿದ್ದರು' ಎಂದರು.

'ಧರ್ಮಕ್ಕೆ ಜಮೀರ್ ಕಳಂಕ ತರುತ್ತಿದ್ದಾರೆ'

ಬೆಂಗಳೂರು: ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರನ್ನು ಬಳಸಿಕೊಂಡು ಕೆಲಸ ಮಾಡಿಸಿಕೊಂಡ ಜಮೀರ್ ಅಹಮ್ಮದ್ ಖಾನ್ ಈಗ ಅವರ ವಿರುದ್ಧವೇ ಮಾತನಾಡುವ ಮೂಲಕ ಇಸ್ಲಾಂ ಧರ್ಮಕ್ಕೆ ಕಳಂಕ ತರುತ್ತಿದ್ದಾರೆ ಎಂದು ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ಆರೋಪಿಸಿದರು.

ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ನೀಡಿದ್ದ ಹೇಳಿಕೆ ಕುರಿತು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಜಫ್ರುಲ್ಲಾ, 'ಕುಮಾರಸ್ವಾಮಿ ಒಂದು ಸಂದರ್ಭದಲ್ಲಿ ದಾರಿ ತಪ್ಪಲು ಇವರೇ ಕಾರಣ. ಬಿಜೆಪಿ ಜತೆ ಸೇರಿ ಸರ್ಕಾರ ಮಾಡಿದಾಗ ಮುತ್ತು ಕೊಟ್ಟು ಸಂಭ್ರಮಿಸಿದ್ದು ಯಾರು' ಎಂದು ಹೆಸರನ್ನು ಉಲ್ಲೇಖಿಸದೇ ಪ್ರಶ್ನಿಸಿದರು.

ಸಿದ್ದರಾಮಯ್ಯ ಒಬ್ಬರೇ ಅಲ್ಪಸಂಖ್ಯಾತರ ನಾಯಕ ಎಂದು ಅವರು ಹೇಳುತ್ತಾರೆ. ಹಾಗಾದರೆ ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಅವರೆಲ್ಲರೂ ಯಾರು? ಅವರ ಪಾತ್ರ ಏನು? ಕುಮಾರಸ್ವಾಮಿ ಅವರನ್ನು ಚರ್ಚೆಗೆ ಕರೆಯುವ ಯೋಗ್ಯತೆ ಇವರಿಗೆ ಇದೆಯಾ ಎಂದು ಕೇಳಿದರು.

ಹಾಸನದಲ್ಲಿ ಮುಸ್ಲಿಮರಿಗೆ ಜೆಡಿಎಸ್ ಟಿಕೆಟ್ ನೀಡುವಂತೆ ಸವಾಲು ಹಾಕಿದ್ದಾರೆ. ವರುಣಾ, ಕನಕಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಮುಸ್ಲಿಮರಿಗೆ ಟಿಕೆಟ್ ನೀಡಿ, ಗೆಲ್ಲಿಸಲಿ. ಆಗ ಇವರ ಜಾತ್ಯತೀತ ತತ್ವವನ್ನು ಮೆಚ್ಚಬಹುದು ಎಂದರು.

'ಸರ್ಕಾರಿ ಬಂಗಲೆಗಾಗಿ ಪ್ರತಿಪಕ್ಷ ನಾಯಕನ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಸಿದ್ದರಾಮಯ್ಯ ಸರ್ಕಾರಿ ಬಂಗಲೆಯಲ್ಲೇ ಉಳಿಯಬೇಕೆಂಬ ಹಟದಿಂದ ಪ್ರತಿಪಕ್ಷ ನಾಯಕನ ಸ್ಥಾನವನ್ನು ಪಟ್ಟು ಹಿಡಿದು ಪಡೆದಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕ ಟೀಕಿಸಿದೆ.

ಉಪ ಚುನಾವಣೆ ಪ್ರಚಾರದ ವೇಳೆ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಕುರಿತು ಏಕವಚನದಲ್ಲಿ ಮಾತನಾಡಿರುವುದಕ್ಕೆ ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯ ಘಟಕ, 'ನಾನು ಗ್ರಾಮೀಣ ಹಿನ್ನೆಲೆಯವನು ಎಂದು ಹೇಳುತ್ತೀರಿ. ದೇಶದ ಪ್ರಧಾನಿಯ ಕುರಿತು ಏಕವಚನದಲ್ಲಿ ಮಾತನಾಡುತ್ತೀರಿ. ಏಕವಚನ ಪ್ರಯೋಗ ಗ್ರಾಮೀಣ ಸಂಸ್ಕಾರವೆ? ಸರ್ಕಾರಿ ಬಂಗಲೆಗಾಗಿ ಪ್ರತಿಪಕ್ಷ ನಾಯಕನ ಸ್ಥಾನ ಉಳಿಸಿಕೊಂಡ ನಿಮ್ಮಂತವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?' ಎಂದಿದೆ.

ಸಿದ್ದರಾಮಯ್ಯ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುರಿತೂ ಪರೋಕ್ಷವಾಗಿ ಟೀಕಿಸಿರುವ ಬಿಜೆಪಿ, 'ಅಪ್ಪ, ಅಜ್ಜಿ, ಮುತ್ತಾತ ಪ್ರಧಾನಿ ಆಗಿದ್ದರು ಎಂಬ ಕಾರಣಕ್ಕೆ ತಾನೂ ಪ್ರಧಾನಿ ಆಗಬೇಕೆಂದು ಒಬ್ಬ ಹೆಬ್ಬೆಟ್ಟು ಗಿರಾಕಿ ಕನಸು ಕಾಣುತ್ತಿದ್ದಾನೆ. ಆತನ ಯೋಗ್ಯತೆ, ಅರ್ಹತೆ ಏನು ಎಂಬುದನ್ನು ವಿಚಾರಿಸಿ. ನಿಮ್ಮ ಶಾಶ್ವತ ಪ್ರಧಾನಿ ಅಭ್ಯರ್ಥಿ ಬಗ್ಗೆಯೂ ಹೀಗೆಯೇ ಮಾತನಾಡುತ್ತೀರಾ' ಎಂದು ಪ್ರಶ್ನಿಸಿದೆ.

ಜಲ ಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆ ಕಾಮಗಾರಿಗಳ ಗುತ್ತಿಗೆದಾರರ ಮೇಲೆ ಇತ್ತೀಚೆಗೆ ನಡೆದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ಕುರಿತು ಕಾಂಗ್ರೆಸ್ ಪಕ್ಷದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಮಾಡಿದ್ದ ಟ್ವೀಟ್‌ಗೂ ಬಿಜೆಪಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಶಾಸಕ ಕೆ.ಜೆ. ಜಾರ್ಜ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದೆ.

23ರಿಂದ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯಚಿತ್ರ ಪ್ರದರ್ಶನ

ಬೆಂಗಳೂರು: ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು 'ಆರ್.ಕೆ.ಲಕ್ಷ್ಮಣ್@100' ಶೀರ್ಷಿಕೆಯಡಿ ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಅ.23ರಿಂದ ನ.16ರವರೆಗೆ ನಗರದ ಟ್ರಿನಿಟಿ ವೃತ್ತದಲ್ಲಿರುವ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ಆಯೋಜಿಸಿದೆ.

'ಪ್ರದರ್ಶನದಲ್ಲಿ ಆರ್.ಕೆ.ಲಕ್ಷ್ಮಣ್ ಅವರ ಅವರ ರಾಜಕೀಯ ವ್ಯಂಗ್ಯಚಿತ್ರಗಳು, ಕ್ಯಾರಿಕೇಚರ್ಸ್, ಅಪ್ರಕಟಿತ ಡೂಡಲ್‌ಗಳು, ಮುಖಪುಟಗಳು, ಕೊರವಂಜಿ ವ್ಯಂಗ್ಯಚಿತ್ರಗಳು, ತೆನಾಲಿ ರಾಮನ್ ಹಾಗೂ ಅಪರೂಪದ 50 ಛಾಯಾಚಿತ್ರಗಳೂ ಇರಲಿವೆ. ಸಾರ್ವಜನಿಕರು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಪ್ರದರ್ಶನ ವೀಕ್ಷಿಸಬಹುದು' ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ:9980091428

27ರಿಂದ ರಂಗ ಶಂಕರ ನಾಟಕೋತ್ಸವ

ಬೆಂಗಳೂರು: ರಂಗ ಶಂಕರವು ಇದೇ 27ರಿಂದ 31ರವರೆಗೆ ಜೆ.ಪಿ. ನಗರದಲ್ಲಿರುವ ತನ್ನ ಕೇಂದ್ರದಲ್ಲಿ ನಾಟಕೋತ್ಸವ ಹಮ್ಮಿಕೊಂಡಿದೆ.

'ಜೀವಂತವಾಗಿ ಉಳಿಯುವುದು'ಈ ಬಾರಿಯ ನಾಟಕೋತ್ಸವದ ವಿಷಯ ವಸ್ತುವಾಗಿದೆ. ಐದು ದಿನಗಳ ಉತ್ಸವದಲ್ಲಿ ಐದು ನಾಟಕಗಳು ಪ್ರದರ್ಶನ ಕಾಣಲಿವೆ. ಸುರೇಂದ್ರನಾಥ್ ಎಸ್. ನಿರ್ದೇಶಿಸಿರುವ 'ಕಾಂತಾ ಮತ್ತು ಕಾಂತಾ' ಕನ್ನಡ ನಾಟಕವನ್ನು ಸಂಕೇತ್ ತಂಡ ಪ್ರದರ್ಶಿಸಲಿದೆ. ಅಭಿಷೇಕ್ ಅಯ್ಯಂಗಾರ್ ನಿರ್ದೇಶಿಸಿರುವ 'ಲಾಕ್‌ಡೌನ್' ನಾಟಕವನ್ನು ವೀ ಮೂವ್ ಥಿಯೇಟರ್‌ನ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ. ಚಾಣಕ್ಯ ವ್ಯಾಸ್ ನಿರ್ದೇಶನದ ಹಿಂದಿ ನಾಟಕ 'ಜುಂಡ್', ಗಣೇಶ್ ಮಂದಾರ್ತಿ ನಿರ್ದೇಶನದ ಕನ್ನಡ ನಾಟಕ 'ಕಾಮರೂಪಿಗಳು' ,ಮೋಹಿತ್ ಟಾಕಲ್ಕರ್ ನಿರ್ದೇಶನದ ಹಿಂದಿ ನಾಟಕ 'ಹುಂಕರೋ' ಪ್ರದರ್ಶನ ಕಾಣಲಿದೆ.

ಪ್ರತಿ ನಿತ್ಯ ಸಂಜೆ 7 ಗಂಟೆಗೆ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಒಬ್ಬರಿಗೆ ₹ 200 ಟಿಕೆಟ್ ದರವನ್ನು ನಿಗದಿ ಮಾಡಲಾಗಿದ್ದು, ಟಿಕೆಟ್‌ಗಳು www.bookmyshow.com ಹಾಗೂ ರಂಗ ಶಂಕರದ ಕಚೇರಿಯಲ್ಲಿ ಸಿಗಲಿವೆ ಎಂದು ಪ್ರಕಟಣೆ ತಿಳಿಸಿದೆ.

SUZUKI at your Doorstep NOW WITH BS 6

• ಚಿತ್ರಗಳನ್ನು ಪ್ರಾತಿನಿಧಿಕ ಉದ್ದೇಶಕ್ಕಾಗಿ ಮಾತ್ರವೇ ಬಳಸಲಾಗಿದೆ. • ತೋರಿಸಲಾದ ಬಿಡಿಭಾಗಗಳು ಸಾಮಾನ್ಯ ಉತ್ಪನ್ನದ ಭಾಗವಾಗಿಲ್ಲ ಮತ್ತು ವೇರಿಯಂಟ್‌ನಿಂದ ವೇರಿಯಂಟ್‌ಗೆ ಬದಲಾಗಬಹುದು. • **ಹಣಕಾಸು ಯೋಜನೆ, ಬಡ್ಡಿದರ ಮತ್ತು ಸಾಲಕ್ಕೆ ಒಪ್ಪಿಗೆ ಪಡೆಯುವುದು ಅದ್ಯತೆ ನೀಡಲಾದ ಹಣಕಾಸು ಸಹಭಾಗಿಗಳ ವಿವೇಚನೆಯನ್ನು ಅನುಸರಿಸಿದೆ. ಹಣಕಾಸು ಸಂಸ್ಥೆಗಳು ಯೋಜನೆಯನ್ನು ಪೂರ್ವ ಮಾಹಿತಿ ನೀಡದೆ ಯಾವಾಗ ಬೇಕಾದರೂ ಹಿಂತೆಗೆದುಕೊಳ್ಳಬಹುದು. ಮೇಲಿನ ಯೋಜನೆಗಳನ್ನು ಆದ್ಯತೆ ನೀಡಲಾದ ಸಹಭಾಗಿಗಳಿಂದ ಮಾತ್ರ ಪಡೆಯಬಹುದು. • ಮೋಟಾರ್‌ಸೈಕಲ್ ಮೇಲೆ ಉಚಿತ ವಿಮೆ (150 cc: ₹9000 & 250 cc : ₹10100 ವರೆಗೆ). • ^ರೂ. 5000 ವರೆಗೆ 5% ತಕ್ಷಣ ರಿಯಾಯಿತಿಯನ್ನು ICICI ಬ್ಯಾಂಕ್ ಡೆಬಿಟ್ ಕಾರ್ಡ್ (ಮಾಸಿಕ ಕಂತು) ಮೇಲೆ ಮತ್ತು ಕ್ರೆಡಿಟ್ ಕಾರ್ಡ್ (ಮಾಸಿಕ ಕಂತು & ಮಾಸಿಕ ಕಂತಿಲ್ಲದೆ) ಕನಿಷ್ಠ ರೂ. 30000/– ಬುಕಿಂಗ್ ಮೊತ್ತದ ಮೇಲೆ (ರೂ. 3000 ರಿಯಾಯಿತಿಯನ್ನು ಸ್ಕೂಟರ್‌ಗಳ ಮೇಲೆ ಮತ್ತು ರೂ. 5000ವರೆಗೆ ರಿಯಾಯಿತಿ ಮೋಟಾರ್‌ಸೈಕಲ್ ಮೇಲೆ) ನೀಡಲಾಗಿದೆ. ಇದನ್ನು Pinelabs ಮತ್ತು Paytm POS ಟರ್ಮಿನಲ್‌ಗಳಲ್ಲಿ ಆಯ್ದ ಡೀಲರ್‌ಶಿಪ್‌ನಲ್ಲಿ ಮಾತ್ರ ಪಡೆಯಬಹುದು. • SMIPL ಯಾವುದೇ ಕೊಡುಗೆಯನ್ನು ಪೂರ್ವ ಮಾಹಿತಿ ನೀಡದೆ ಬದಲಿಸುವುದು ಮತ್ತು ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿದೆ. • ಎಲ್ಲಾ ಕೊಡುಗೆಗಳು ಸರಕು ಇರುವವರೆಗೆ ಮಾತ್ರ ಮಾನ್ಯತೆ ಹೊಂದಿದೆ. 2021 ಅಕ್ಟೋಬರ್ 31ರವರೆಗೆ ಕೊಡುಗೆಗಳು ಲಭ್ಯವಿರುತ್ತವೆ ಮತ್ತು ಒಂದು ಕೊಡುಗೆಯನ್ನು ಮತ್ತೊಂದರ ಜೊತೆಗೆ ಸೇರಿಸಿ ಪಡೆಯುವಂತಿಲ್ಲ. • ಇತ್ತೀಚಗಿನ ಅಧಿಕೃತ ಮಾಹಿತಿಗಾಗಿ ದಯವಿಟ್ಟು ನಿಮ್ಮ ಸಮೀಪದ ಅಧಿಕೃತ ಡೀಲರ್‌ರನ್ನು ಸಂಪರ್ಕಿಸಿ. GIXXER SF 250ಯು ಸುಜುಕಿ ಪ್ರೀಮಿಯಂ ಡೀಲರ್‌ಶಿಪ್‌ನಲ್ಲಿ ಮಾತ್ರ ಲಭ್ಯವಿದೆ.

Ride safe. Wear a helmet.

For further information, call Suzuki Motorcycle India Private Limited (toll-free): 1800-121-7996 (Mon-Sat from 9:00 am to 6:00 pm), or write to us at: customer.queries@suzukimotorcycle.in, visit website: www.suzukimotorcycle.in for T&C or visit nearest Suzuki dealership for more.

BANGALORE: Basavanagudi: ADVAITH SUZUKI – Ph: 9880741841, 9742214466, K H Road, AEROLEX SUZUKI – Ph: 9901090000, 080-40114300, Kathriguppe: APPLE SUZUKI, Ph: 080-26697070/8080, 8884446504/08/02, BTM Layout: APPLE SUZUKI, Ph: 8884444982, Kanakapura Road: APPLE SUZUKI, Ph: 8884446503, RR Nagar: APPLE SUZUKI – Ph: 8884446502, Old Airport Road (Domlur): ARYAN SUZUKI, Ph: 080-4059 1000 / 9916663015, Whitefield: ARYAN SUZUKI, Ph: 080-4908 1000 / 8095620537, K. R. Puram: ARYAN SUZUKI, Ph: 9741406067, Mahadevpura: ARYAN SUZUKI, Ph: 7997605289, Vijaynagar: AVANISH SUZUKI, Ph: 8971900111, 8197800222, Kengerk AVANISH SUZUKI, Ph: 8197900111, 9108945333, Nagarbhavi: AVANISH SUZUKI, Ph: 9606988444 /080-23188444, Banaswadi: BHOJANNA SUZUKI, Ph: 080-25429991, 9148656565, Bellary Road: MEGHAVATH SUZUKI, Ph: 9632899459, M G Road: MEGHDOOTH SUZUKI, Ph: 9481171971, HBR Layout: MEGHDOOTH SUZUKI, 9019052444, Hosur Road: NINESTAR SUZUKI, Ph: 080-44554447, 9900040355/9900073002, Kaikondanahalli: NINESTAR SUZUKI, Ph: 080-44554447, 9900040355, Bannerghatta Road: NINESTAR SUZUKI, Ph: 080-44554447, 9900779446, Koramangala: ORION SUZUKI, Ph: 080-25524747, 9535081055, JP NAGAR: ORION SUZUKI, Ph: 96060 37441 Rajaji Nagar: SAPTAGIRI SUZUKI, Ph: 080-41218511 - 41218516, 098450 29331, Mathikere: SAPTAGIRI SUZUKI, Ph: 080-48149191, 9620152020, Basaweshwara Nagar: SAPTAGIRI SUZUKI, Ph: 080 23223929/9844417737, Sheshadripuram: SAPTAGIRI SUZUKI, Ph: 080-23143929, 9740820224, Kottigepalya: SAPTAGIRI SUZUKI, Ph: 080-23183700, 7899739267, Peenya, Tumkur Road: SAPTAGIRI SUZUKI, Ph: 9986466659, Nelamangala: SAPTAGIRI SUZUKI, Ph: 9686576355 / 9686988557, Vasanthnagar: VALUE SUZUKI, Ph: 080-49396777, 7090700777, Yelhanka: Honnasiri Suzuki, Ph: 9945004047, Tumkur: Pramod Suzuki, Ph: 0816-4252224,8050202244, 8050202266, Smayanashree Suzuki, Ph: 8971726503, Tiptur: Smayanashree Suzuki, Ph: 9900596996/9900546996, Hoskote: Daivik Suzuki, Ph: 9591208777, 8296169984, 9141019114, Chikballapur: Bhawnit Suzuki, Ph: 8088137199.

ಆಮೆ ವೇಗದ ಕಾಮಗಾರಿ: ಕೊಂಕಣ ಸುತ್ತಿ ಮೈಲಾರ ಸೇರುವ ಕಿರಿಕಿರಿ • ಪರ್ಯಾಯ ಮಾರ್ಗಗಳ ಮೇಲೆ ಹೆಚ್ಚುತ್ತಿರುವ ಸಂಚಾರ ಒತ್ತಡ

ಸುತ್ತು ಬಳಸು ಹಾದಿ– ಸವಾರರ ಜೇಬಿಗೆ ಕತ್ತರಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಒಂದೆಡೆ ಪೆಟ್ರೋಲ್ ಮತ್ತು ಡೀಸೆಲ್ ದರ ಶರವೇಗದಲ್ಲಿ ಏರುತ್ತಿದ್ದರೆ, ಅದಕ್ಕೆ ತದ್ವಿರುದ್ಧವಾಗಿ ನಗರದ ಅಭಿವೃದ್ಧಿ ಕಾಮಗಾರಿಗಳು ಆಮೆ ವೇಗದಲ್ಲಿ ನಡೆಯುತ್ತಿವೆ.

ಕಾಮಗಾರಿಗಳ ಸಲುವಾಗಿ ವರ್ಷಾನುಗಟ್ಟಲೆಯಿಂದ ರಸ್ತೆಗಳನ್ನು ಬಂದ್ ಮಾಡಿರುವುದರಿಂದ ಕೊಂಕಣ ಸುತ್ತಿ ಮೈಲಾರ ಸೇರಬೇಕಾದ ಪಾಡು ವಾಹನ ಸವಾರರದ್ದು. ಸುತ್ತಿ ಬಳಸಿ ಸಂಚರಿಸಬೇಕಾದ ಅನಿವಾರ್ಯ ಸ್ಥಿತಿ ವಾಹನ ಸವಾರರ ಕಿಸೆಗೂ ಕತ್ತರಿ ಬೀಳುವಂತೆ ಮಾಡುತ್ತಿದೆ.

ಶಿವಾನಂದ ವೃತ್ತ, ಅರಮನೆ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಗೂಡ್ಸ್‌ಶೆಡ್ ರಸ್ತೆಗಳಲ್ಲಿ ವಾಹನ ಸವಾರರು ಅನುಭವಿಸುತ್ತಿರುವ ಸಮಸ್ಯೆಗಳು ಇದಕ್ಕೆ ಉದಾಹರಣೆಗಳು.

ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹109 ದಾಟಿದ್ದರೆ, ಡೀಸೆಲ್ ದರ ಪ್ರತಿ ಲೀಟರ್‌ಗೆ ₹100ರ ಗಡಿ ದಾಟಿದೆ. ತಮ್ಮದಲ್ಲದ ತಪ್ಪಿಗೆ ವಾಹನ ಸವಾರರು ದಿನವೂ ಪೆಟ್ರೋಲ್ ಮತ್ತು ಡೀಸೆಲ್‌ಗಾಗಿ ಹೆಚ್ಚುವರಿ ವೆಚ್ಚ ಮಾಡುವ ಮೂಲಕ ದಂಡ ತೆರುತ್ತಿದ್ದಾರೆ.

ಶಿವಾನಂದ ವೃತ್ತದಲ್ಲಿ ಉಕ್ಕಿನ ಸೇತುವೆ ಕಾಮಗಾರಿ ಆರಂಭವಾಗಿ ಐದು ವರ್ಷಗಳೇ ಕಳೆದಿವೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೇ ಶಿವಾನಂದ ವೃತ್ತದಲ್ಲಿ ಕಾಮಗಾರಿ ಆರಂಭವಾಗಿತ್ತು.

ಇದಾದ ನಂತರ ಮೂರು ಸರ್ಕಾರಗಳು ಬದಲಾದರೂ ಶಿವಾನಂದ ವೃತ್ತದ ಮೇಲ್ಸೇತುವೆ ಕಾಮಗಾರಿಗೆ ಮುಕ್ತಿ ಸಿಗುವ ಲಕ್ಷಣಗಳು ಕಾಣಿಸುತ್ತಿಲ್ಲ.

ರೇಸ್ ಕೋರ್ಸ್ ಪ್ರವೇಶ ದ್ವಾರದ ರಸ್ತೆ ಕಡೆಯಿಂದ ಶಿವಾನಂದ ವೃತ್ತಕ್ಕೆ ಬರುವ ಮಾರ್ಗವನ್ನು ಬಂದ್ ಮಾಡಲಾಗಿದೆ.

ಹಾಗಾಗಿ ಬಸವೇಶ್ವರ ವೃತ್ತದ ಕಡೆಯಿಂದ ಬರುವ ವಾಹನಗಳು ರೇಸ್‌ಕೋರ್ಸ್ ರಸ್ತೆಯಲ್ಲೇ ಮುಂದುವರಿದು ಕುಮಾರಕೃಪಾ ರಸ್ತೆಯ ಕಡೆ ತಿರುವು ಪಡೆದುಕೊಂಡು ಶಿವಾನಂದ ವೃತ್ತಕ್ಕೆ ಬರಬೇಕು.

ಬಸವೇಶ್ವರ ವೃತ್ತದಿಂದ ನೇರವಾಗಿ ಶಿವಾನಂದ ವೃತ್ತಕ್ಕೆ 950 ಮೀಟರ್ ದೂರವಿದೆ. ಆದರೆ, ಕಾಮಗಾರಿ ನಡೆಯುತ್ತಿರುವುದರಿಂದ ಒಂದೂವರೆ ಕಿಲೊಮೀಟರ್ ಸುತ್ತಾಡಿ ಬರಬೇಕಿದೆ.

ಶಿವಾನಂದ ವೃತ್ತದಿಂದ ಬಸವೇಶ್ವರ ವೃತ್ತಕ್ಕೆ ಕುಮಾರಕೃಪಾ ರಸ್ತೆ ಮತ್ತು ಸ್ಯಾಂಕಿ ಟ್ಯಾಂಕ್ ರಸ್ತೆ ಮೂಲಕ ಸಾಗಲು 2.2 ಕಿ.ಮೀ. ಕ್ರಮಿಸಬೇಕು.

ಹೆಚ್ಚಿನ ದೂರ ಕ್ರಮಿಸುವ ಪರ್ಯಾಯ ಮಾರ್ಗಗಳ ಮೇಲೆ ಹೆಚ್ಚುವರಿ ಸಂಚಾರ ಒತ್ತಡ ಹೇರಲಾಗುತ್ತಿದೆ. ಅದರಿಂದ ಉಂಟಾಗುವ ದಟ್ಟಣೆಯಿಂದಲೂ ನಿಧಾನ ವಾಗಿ ಸಂಚರಿಸಬೇಕು. ಅದಕ್ಕೆ ಖರ್ಚಾಗುವ ಹೆಚ್ಚುವರಿ ಇಂಧನದ ಹೊರೆಯನ್ನೂ ಸವಾರ ಹೊರಬೇಕು.

‘ನಮ್ಮದೇ ತೆರಿಗೆ ಹಣದಲ್ಲಿ ನಡೆಯುವ ಅಭಿವೃದ್ಧಿ ಕಾಮಗಾರಿಗಳು ಅಧಿಕಾರ ನಡೆಸುವವರ ಬೇಜವಾಬ್ದಾರಿತನದಿಂದ ವಿಳಂಬ ಆಗುತ್ತಿವೆ. ವಿಪರ್ಯಾಸವೆಂದರೆ ಇದಕ್ಕೂ ನಾವೇ ದಂಡ ತೆರಬೇಕಾಗಿದೆ. ಇಂಧನ ದರದ ಮೇಲೆ ಹಿಡಿತ ಸಾಧಿಸದ ಸರ್ಕಾರ, ಮಧ್ಯಮ ವರ್ಗದ ಜನರ ಜೇಬಿಗೆ ಈ ರೀತಿಯಾಗಿ ಪರೋಕ್ಷ ಕತ್ತರಿಯನ್ನೂ ಹಾಕುತ್ತಿದೆ’ ಎಂದು ವಾಹನ ಸವಾರ ಸುಧೀಂದ್ರ ಹಿಡಿಶಾಪ ಹಾಕಿದರು.

‘ರಸ್ತೆ ಬಂದ್ ಮಾಡಿ ನಿರ್ವಹಿಸುತ್ತಿರುವ ಕಾಮಗಾರಿಗಳಿಂದ ವಾಹನ ಸವಾರರಿಗೆ ಸಮಸ್ಯೆ ಆಗುತ್ತಿರುವುದು ಒಂದು ಕಡೆಯಾದರೆ, ಕಾಮಗಾರಿ ಸಲುವಾಗಿ ರಸ್ತೆ ಕಿರಿದು ಮಾಡಿದ್ದರಿಂದ ಸವಾರರು ವರ್ಷಗಟ್ಟಲೆಯಿಂದ ಸಂಚಾರ ದಟ್ಟಣೆಯ ಕಿರಿಕಿರಿ ಅನುಭವಿಸಬೇಕಾದ ಪ್ರಮೇಯಗಳು ಅನೇಕ ಕಡೆ ಎದುರಾಗುತ್ತಿವೆ. ದಟ್ಟಣೆ ಸೀಳಲು ಜನ ತಮ್ಮ ಸಮಯದ ಜೊತೆಗೆ ಹೆಚ್ಚುವರಿ ಇಂಧನವನ್ನೂ ಖರ್ಚು ಮಾಡಬೇಕಾದ ಅನಿವಾರ್ಯ ಸೃಷ್ಟಿಸಲಾಗಿದೆ’ ಎಂದು ಸವಾರ ರಾಘವೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ರೇಸ್ ಕೋರ್ಸ್ ವೃತ್ತದಿಂದ ಶಿವಾನಂದ ವೃತ್ತ ಹಾದುಹೋಗುವ ಕಬ್ಬಿಣದ ಮೇಲ್ಸೇತುವೆಯ ಕೆಲಸ ನಡೆಯುತ್ತಿರುವ ದೃಶ್ಯ —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಎಂ.ಜಿ. ರಸ್ತೆ–ಕಮರ್ಷಿಯಲ್ ಸ್ಟ್ರೀಟ್ ತಪ್ಪಿದ ಕೊಂಡಿ

ಎಂ.ಜಿ. ರಸ್ತೆಗೆ ಹೊಂದಿಕೊಂಡಂತೆ ಕಾಮರಾಜ ರಸ್ತೆಯಲ್ಲಿ ಮೆಟ್ರೊ ರೈಲು ನಿಲ್ದಾಣದ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಕಬ್ಬನ್ ರಸ್ತೆಯಿಂದ ಎಂ.ಜಿ. ರಸ್ತೆ ತನಕ ಸಂಚಾರ ಬಂದ್ ಮಾಡಿ ಮೂರು ವರ್ಷಗಳೇ ಕಳೆದಿವೆ.

ಕಮರ್ಷಿಯಲ್ ಸ್ಟ್ರೀಟ್ ವೃತ್ತಕ್ಕೂ ಬ್ರಿಗೇಡ್ ರಸ್ತೆಗೂ ಕೇವಲ 700 ಮೀಟರ್ ದೂರವಿದೆ. ಈ ಎರಡೂ ಪ್ರಮುಖ ರಸ್ತೆಗಳ ಸಂಪರ್ಕವೇ ಕಡಿತಗೊಂಡಿದೆ. ಕಮರ್ಷಿಯಲ್ ಸ್ಟ್ರೀಟ್ ಕಡೆಯಿಂದ ಕಾಮರಾಜ ರಸ್ತೆ ಮೂಲಕ ಕಬ್ಬನ್ ರಸ್ತೆಗೆ ಬಂದು ಡಿಕೆನ್ಸನ್ ರಸ್ತೆ ಮೂಲಕ ಎಂ.ಜಿ. ರಸ್ತೆ ಮತ್ತು ಬ್ರಿಗೇಡ್ ರಸ್ತೆಗೆ ತಲುಪಲು 2 ಕಿಲೋ ಮೀಟರ್ ಕ್ರಮಿಸಬೇಕು.

ಎಂ.ಜಿ. ರಸ್ತೆಯಿಂದ ಕಬ್ಬನ್ ರಸ್ತೆಗೆ ಹೋಗಿ, ಕಮರ್ಷಿಯಲ್ ಸ್ಟ್ರೀಟ್ ವೃತ್ತದ ಕಾಮರಾಜ ರಸ್ತೆಯ ತುದಿಗೆ ತಲುಪಲು 2.1 ಕಿ.ಮೀ ಕ್ರಮಿಸುವುದು ಅನಿವಾರ್ಯ.

ಮೈಸೂರು ಬ್ಯಾಂಕ್ ವೃತ್ತ ಬಲುದೂರ

ಮೆಜೆಸ್ಟಿಕ್, ಬಸವೇಶ್ವರ ವೃತ್ತದ ಕಡೆಯಿಂದ ಮೈಸೂರು ಬ್ಯಾಂಕ್ ವೃತ್ತ ತಲುಪಲು ಈಗ ಹಿಂದಿಗಿಂತ ಹೆಚ್ಚು ದೂರ ಕ್ರಮಿಸಬೇಕಾಗಿದೆ. ಅರಮನೆ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿ ವರ್ಷಗಳೇ ಕಳೆದಿವೆ. ಬಸವೇಶ್ವರ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತಕ್ಕೆ ಬರುವ ಮಾರ್ಗದಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ.

ಸ್ವಾತಂತ್ರ್ಯ ಉದ್ಯಾನದಿಂದ ಮೈಸೂರು ಬ್ಯಾಂಕ್ ವೃತ್ತಕ್ಕೆ 1 ಕಿ.ಮೀ. ದೂರವಿದೆ. ಈಗ ಕೆ.ಆರ್. ವೃತ್ತದವರೆಗೆ ಸಾಗಿ ಸಿಟಿ ಸಿವಿಲ್ ಕೋರ್ಟ್ ಮುಂದಿನ ರಸ್ತೆಯಲ್ಲಿ (ಪೋಸ್ಟ್ ಆಫೀಸ್ ರಸ್ತೆ) ಮೈಸೂರು ಬ್ಯಾಂಕ್ ವೃತ್ತಕ್ಕೆ ಬರಬೇಕಿದೆ. ಇದಕ್ಕೆ 1.5 ಕಿ.ಮೀ ಕ್ರಮಿಸಬೇಕು. ನೃಪತುಂಗ ರಸ್ತೆ, ಕೆ.ಜಿ.ರಸ್ತೆ ಮಾರ್ಗದಲ್ಲಿ ಬಂದರೆ 2.5 ಕಿಲೋ ಮೀಟರ್ ದೂರವಾಗುತ್ತದೆ.

ಕಾಳಿದಾಸ ಮಾರ್ಗದಲ್ಲಿ ಸಾಗಿ ಬಿವಿಕೆ ಅಯ್ಯಂಗಾರ್ ರಸ್ತೆಗೆ ತಲುಪಿ, ಅಲ್ಲಿಂದ ಚಿಕ್ಕಪೇಟೆಯ ಹಾಸ್ಪಿಟಲ್ ರಸ್ತೆಗೆ ಎಡ ತಿರುವು ಪಡೆದು ಅವೆನ್ಯೂ ರಸ್ತೆ ಮೂಲಕ ಮೈಸೂರು ಬ್ಯಾಂಕ್ ವೃತ್ತಕ್ಕೆ ಬರಲು 1.3 ಕಿ.ಮೀ ಕ್ರಮಿಸಬೇಕು. ಈ ಮಾರ್ಗ ಕಿರಿದಾದ ರಸ್ತೆಗಳನ್ನು ಹೊಂದಿದ್ದು, ದ್ವಿಚಕ್ರ ವಾಹನ ಸವಾರರಿಗಷ್ಟೇ ಅನುಕೂಲ. ಬೇರೆ ವಾಹನ ಸವಾರರು ಬೇರೆ ರಸ್ತೆಗಳನ್ನೇ ಹುಡುಕಿಕೊಳ್ಳಬೇಕು.

ಇನ್ನು ಗಾಂಧಿನಗರದ ಕಾಳಿದಾಸ ವೃತ್ತದಿಂದ ಅರಮನೆ ರಸ್ತೆಗೆ ಬರಲು ಇರುವ ರಸ್ತೆಯನ್ನೂ ಬಂದ್ ಮಾಡಲಾಗಿದೆ. ಅವರು ಶೇಷಾದ್ರಿ ರಸ್ತೆಗೆ ಹೋದರೆ ಮೌರ್ಯ ವೃತ್ತಕ್ಕೆ ಹೋಗಿ ಯೂ–ಟರ್ನ್ ಪಡೆದುಕೊಂಡು ಕೆ.ಆರ್. ವೃತ್ತಕ್ಕೆ ಬರಬೇಕಾದ ಅನಿವಾರ್ಯ ಇದೆ.

ಎಂ.ಜಿ. ರಸ್ತೆಯಲ್ಲಿ ನಡೆಯುತ್ತಿರುವ ಮೆಟ್ರೊ ರೈಲು ನಿಲ್ದಾಣ ಕಾಮಗಾರಿ

ಸಂಚಾರದ ಸಂಕಟ ಹೇಳಿಕೊಳ್ಳಿ

ಆಮಗತಿಯ ಕಾಮಗಾರಿಯಿಂದಾಗಿ ಸುತ್ತಿ ಬಳಸಿ ಸಂಚರಿಸುವ ಪರಿಸ್ಥಿತಿ ಎದುರಿಸುತ್ತಿದ್ದೀರಾ? ನಿಮ್ಮ ಸಂಚಾರದ ಸಂಕಟವನ್ನು ನಮಗೆ ವಾಟ್ಸ್ ಆ್ಯಪ್ ಮಾಡಿ. ನಿಮ್ಮ ಅಳಲುಗಳನ್ನು ನಮ್ಮನ್ನು ಆಳುವವರ ಗಮನಕ್ಕೆ ತರಲು ‘ಪ್ರಜಾವಾಣಿ’ ನೆರವಾಗಲಿದೆ.

ವಾಟ್ಸ್ ಆ್ಯಪ್ ಸಂಖ್ಯೆ: **9606038256**

ಕಾಳಿದಾಸ ವೃತ್ತದಿಂದ ಅರಮನೆ ರಸ್ತೆಗೆ ಬರುವ ಮಾರ್ಗದಲ್ಲಿ ಸಂಚಾರ ಬಂದ್ ಮಾಡಿರುವುದು

ಬಾಲಗಂಗಾಧರನಾಥ ಮೇಲ್ಸೇತುವೆಯಿಂದ ಗೂಡ್ಸ್‌ಶೆಡ್ ರಸ್ತೆಗೆ ಇಳಿಯಲು ಇದ್ದ ಸಂಪರ್ಕ ಬಂದ್ ಮಾಡಿರುವುದು

ಗೂಡ್ಸ್‌ಶೆಡ್ ರಸ್ತೆಯಲ್ಲೂ ಪಡಿಪಾಟಲು

ಸಿಮೆಂಟ್ ರಸ್ತೆ ನಿರ್ಮಾಣಕ್ಕಾಗಿ ಗೂಡ್ಸ್‌ಶೆಡ್ ರಸ್ತೆಯಲ್ಲಿ (ಟಿಸಿಎಂ ರಾಯನ್ ರಸ್ತೆ) ಸಂಚಾರ ಬಂದ್ ಮಾಡಲಾಗಿದೆ. ಮೈಸೂರು ರಸ್ತೆಯಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆ ಹತ್ತಿದರೆ ಗೂಡ್ಸ್‌ಶೆಡ್ ರಸ್ತೆಗೆ ಇಳಿದು ಮೆಜೆಸ್ಟಿಕ್ ತಲುಪಲು 2 ಕಿಲೋ ಮೀಟರ್ ದೂರದ ಸುಲಭವಾದ ಮಾರ್ಗ. ಈಗ ರಸ್ತೆಯಲ್ಲಿ ಕಾಮಗಾರಿ ನಿರ್ವಹಿಸಲು ಇದನ್ನು ಬಂದ್ ಮಾಡಲಾಗಿದೆ.

ಮೇಲ್ಸೇತುವೆ ಹತ್ತುವ ಮುನ್ನವೇ ಸರ್ವೀಸ್ ರಸ್ತೆಯಲ್ಲಿ ಸಾಗಿ ಟ್ಯಾಂಕ್ ಬಂಡ್ ರಸ್ತೆಗೆ ಎಡತಿರುವು ಪಡೆದು ಬಿನ್ನಿಮಿಲ್ ದಾಟಿದ ಬಳಿಕ ಬಲ ತಿರುವು ಪಡೆದು ಮತ್ತೆ ಗೂಡ್ಸ್‌ಶೆಡ್ ರಸ್ತೆ ಮೂಲಕ ಹಾದು ಮೆಜೆಸ್ಟಿಕ್ ತಲುಪಲು 3 ಕಿ.ಮೀ. ಕ್ರಮಿಸಬೇಕು.

ಗೂಡ್ಸ್‌ಶೆಡ್ ರಸ್ತೆ ಬಂದ್ ಆಗಿರುವ ಅರಿವಿಲ್ಲದವರು ಮೇಲ್ಸೇತುವೆ ಹತ್ತಿದರೆ ಪುರಭವನ, ಕೆ.ಜಿ. ರಸ್ತೆ ಮೂಲಕ 5.8 ಕಿ.ಮೀ. ಕ್ರಮಿಸಿ ಮೆಜೆಸ್ಟಿಕ್ ತಲುಪಬೇಕಾಗುತ್ತದೆ.

ಮೈಸೂರು ಬ್ಯಾಂಕ್ ವೃತ್ತದಿಂದ ಅರಮನೆ ರಸ್ತೆ ಕಡೆಗೆ ಕಾಮಗಾರಿ ನಡೆಯುತ್ತಿರುವುದು

ಗೂಡ್ಸ್‌ಶೆಡ್ ರಸ್ತೆಯಲ್ಲಿ ಸಂಚಾರ ಬಂದ್ ಮಾಡಿರುವುದು

‘ಉತ್ತರದಾಯಿತ್ವವೂ ಇಲ್ಲ, ಕಾಳಜಿಯೂ ಇಲ್ಲ’

ಕಾಮಗಾರಿ ವಿಳಂಬ ಆದರೆ ಗುತ್ತಿಗೆ ನಿರ್ವಹಿಸುತ್ತಿರುವ ಕಂಪನಿಗಳು ನಿಗದಿಗಿಂತ ಹೆಚ್ಚುವರಿ ಮೊತ್ತಕ್ಕೆ ಬೇಡಿಕೆ ಇಡುತ್ತವೆ. ಅದನ್ನು ಅನುಮೋದಿಸುವ ಮೂಲಕ ಸಾರ್ವಜನಿಕರ ಹಣ ಪೋಲು ಮಾಡಲಾಗುತ್ತದೆ. ಉತ್ತರದಾಯಿತ್ವ ಮತ್ತು ಕಾಳಜಿ ಇಲ್ಲದಿರುವುದು ಇದಕ್ಕೆ ಕಾರಣ ಎಂದು ಬೆಂಗಳೂರು ಪ್ರಜಾ ವೇದಿಕೆಯ ಡಿ.ಎಸ್. ರಾಜಶೇಖರ್ ಹೇಳಿದರು.

‘ಕಾಮಗಾರಿಗೆ ನಿಗದಿ ಮಾಡಿದ್ದ ಮೊತ್ತ ಹೆಚ್ಚಿಸಿದರೆ ಅದಕ್ಕೆ ತಕ್ಕಂತೆ ಲಂಚವೂ ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ತಲುಪುತ್ತದೆ. ಕಾಮಗಾರಿ ವಿಳಂಬ ಆಗುವುದು ಜನರಿಗೆ ಹೊರೆಯಾಗುವ ಜೊತೆಗೆ ಸರ್ಕಾರದ ಬೊಕ್ಕಸವನ್ನೂ ನುಂಗುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ರಸ್ತೆ ಬಂದ್ ಮಾಡಿರುವ ಕಡೆಯಷ್ಟೇ ಅಲ್ಲ. ಮಾನ್ಯತಾ ಟೆಕ್ ಪಾರ್ಕ್ ಬಳಿಯ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವುದಕ್ಕೆ ರಸ್ತೆ ಕಿರಿದಾಗಿದೆ. ಮಳೆ ಬಂದರೆ ರಸ್ತೆಯಲ್ಲೇ ನಿಲ್ಲುವ ನೀರಿನ ನಡುವೆ ವಾಹನ ಸಂಚಾರ ನಿಧಾನವಾಗುತ್ತದೆ. ಅಲ್ಲಿಯೂ ಇಂಧನದ ಹೆಚ್ಚುವರಿ ಹೊರೆಯನ್ನು ಸವಾರರು ಹೊರಬೇಕಾಗಿದೆ’ ಎಂದರು.

‘ಬಿಬಿಎಂಪಿ ಹಾಗೂ ಇತರ ಏಜೆನ್ಸಿಗಳು ನಿರ್ವಹಿಸುತ್ತಿರುವ ಕಾಮಗಾರಿಗಳಿಗೆ ಹೇಳುವವರು ಕೇಳುವವರು ಇಲ್ಲದಂತಾಗಿದೆ. ಒಂದೂವರೆ ವರ್ಷಗಳಿಂದ ಪಾಲಿಕೆ ಸದಸ್ಯರೂ ಇಲ್ಲ. ಯಾರ ಬಳಿ ಸಮಸ್ಯೆ ಹೇಳಬೇಕು ಎಂಬುದೇ ತಿಳಿಯದಾಗಿದೆ. ಒಟ್ಟಾರೆ, ಜನ ತೊಂದರೆ ಅನುಭವಿಸಬೇಕಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

COMPUTERS
Hardware
USED COMPUTERS FOR SALE
1. Dual Core/ 2GB Ram/ 250GB HDD/ 17"CRT Rs.5,000/-
2. Same configuration with 17" LCD Rs.6,000/-
3. DualCore Server/4Gb Ram/ 160 GB HDD/ 17"LCD Rs.10,000/-
4. Xeon Server/ 8GB Ram/ 500GB HDD/ 17" LCD Rs.23,000/-
5. Core i7/ 16GB Ram/ 1TB HDD/ 17"LCD Rs.45,000/-
Systems without 17" LCD Monitor Rs. 2000/- Less.
LAPTOPS
1. Dual Core/2GB Ram/ 160GB HDD. Rs.10,000/-
2. Core i3/ 4GB Ram/ 500GB HDD Rs.18,000/-
Courier Charges: Rs.1,000/- per system.
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

JOB OPPORTUNITIES
General
JOB OPPORTUNITY, for Retired, Men, House wife, Work from home/ office, SSLC, PUC, Degree, in Reputed Company, Age 40-75, Bangalorians only, Earn up to 40000, Call: 9741401834

BUSINESS
Business to Business
Business
INVEST IN World's Largest Forex trading platform Steady option. Get everyday Fixed Income Return & withdraw daily on your investment - Rs. 500 to Rs. 10,000. Personally i have invested. For more details, Contact: 6361333375.
Business Offers
Finance
NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189
Business For Sale
DENTAL CLINIC for sale in heart of Bangalore. Call 8310090357.

EDUCATIONAL
Admission
DIRECT FINAL: LLB (Can Practice) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. LIMITED SEATS. Call: 9448460103/ 7093438248.

REAL ESTATE SELLING
Flat
Thanisandra
3BHK FLAT for Sale, READY TO OCCUPY, Flat.no H2 710, Unishire Terraza, E/F 1620sft. Thanisandra Main Rd, Bangalore. Ph:8523802962, 8639889069.

PERSONAL
Lost
I AM HM Shankar Nag, would like to inform to general public that i have lost the my original Absolute Sales Deed katha no 114/6/121/4/31 and doc no:-7228/1997-98, if anyone finds it, please contact me at 9980526059, within 5 days form the date of this ADs

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

‘ಕೆರೆ, ಜೌಗು ಪ್ರದೇಶಗಳಲ್ಲಿ ಮರಳು ಗಣಿಗಾರಿಕೆ ನಿಷೇಧ’

ನವದೆಹಲಿ: ‘ಕೆರೆಗಳು ಮತ್ತು ಜೌಗು ಪ್ರದೇಶಗಳಿಂದ ಹೂಳೆತ್ತುವ ಮತ್ತು ನಿರ್ವಹಣೆ ನೆಪದಲ್ಲಿ ಮರಳು ಗಣಿಗಾರಿಕೆ ನಡೆಸುವುದನ್ನು ನಿಷೇಧಿಸಲಾಗಿದೆ’ ಎಂದು ಪರಿಸರ ಮತ್ತು ಅರಣ್ಯ ಸಚಿವಾಲಯವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ತಿಳಿಸಿದೆ.

‘ಜೌಗು ಪ್ರದೇಶಗಳ ಸವಕಳಿ ಮತ್ತು ನಾಶವು ಬಹಳ ಗಂಭೀರ ಸಮಸ್ಯೆಯಾಗಿದೆ. ಒಳಚರಂಡಿ, ಕಸ ವಿಲೇವಾರಿ, ಮಾಲಿನ್ಯ (ಕೈಗಾರಿಕಾ ತ್ಯಾಜ್ಯಗಳ ವಿಸರ್ಜನೆ, ಘನ ತ್ಯಾಜ್ಯಗಳ ವಿಲೇವಾರಿ), ಜಲ ವಿಜ್ಞಾನದ ಬದಲಾವಣೆ, ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಶೋಷಣೆ ಮತ್ತು ಕಾನೂನುಬಾಹಿರ ನಿರ್ಮಾಣಗಳಿಂದ ಜೀವ ವೈವಿಧ್ಯಕ್ಕೆ ಧಕ್ಕೆ ಉಂಟಾಗುತ್ತಿದೆ’ ಎಂದು ಸಚಿವಾಲಯವು ಹೇಳಿದೆ.

ರಾಜ್ಯದ ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ ಕೆರೆಗಳಿಂದ ಹೂಳೆತ್ತುವಿಕೆ ಮತ್ತು ನಿರ್ವಹಣೆ ವಿರುದ್ಧ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ಎನ್‌ಜಿಟಿಯ ಪ್ರಧಾನ ಪೀಠವು ನಡೆಸಿತು.

‘ಈ ಎರಡೂ ಜಿಲ್ಲೆಗಳ ಅಧಿಕಾರಿಗಳು ಕೆರೆಗಳಿಂದ ಹೂಳೆತ್ತಲು ಅವಕಾಶ ನೀಡುವಾಗ ಸುಸ್ಥಿರ ಗಣಿಗಾರಿಕೆ ನಿಯಮಗಳನ್ನು ಅನುಸರಿಸಿಲ್ಲ’ ಎಂದು ಅರ್ಜಿಯಲ್ಲಿ ದೂರಲಾಗಿತ್ತು.

ಶ್ರೀನಿಧಿ ಬ್ಯಾಂಕ್ ಲಾಭ ಗಳಿಕೆ

ಬೆಂಗಳೂರು: ವಿ.ವಿ.ಪುರದ ಆರ್.ವಿ.ರಸ್ತೆಯಲ್ಲಿರುವ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2020-21ನೇ ಸಾಲಿನಲ್ಲಿ ಉತ್ತಮ ಲಾಭ ಗಳಿಸಿದೆ.

23ನೇ ಸರ್ವ ಸದಸ್ಯರ ಸಭೆ ಬಳಿಕ ಮಾತನಾಡಿದ ಅಧ್ಯಕ್ಷ ಸದಾಶಿವ ರೆಡ್ಡಿ ‘ಕೋವಿಡ್ ನಡುವೆಯೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲ ವಸೂಲಾತಿಯಿಂದ ಬ್ಯಾಂಕ್‌ಗೆ ₹2.58 ಕೋಟಿ ಲಾಭ ಬಂದಿದೆ. ಹೀಗಾಗಿ ಸದಸ್ಯರಿಗೆ ಶೇ 7.5ರಷ್ಟು ಷೇರು ಲಾಭಾಂಶ ವಿತರಿಸಲು ನಿರ್ಧರಿಸಲಾಗಿದೆ. ಎಲ್ಲಾ ವರ್ಗದವರಿಗೂ ಆಧುನಿಕ ಮತ್ತು ಗುಣಮಟ್ಟದ ಬ್ಯಾಂಕಿಂಗ್ ಸೇವೆ ಒದಗಿಸುವುದು ನಮ್ಮ ಗುರಿ. ಅದು ಸುಲಭವಾಗಿಯೂ ಸಿಗಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡ ಬೇಕು’ ಎಂದು ತಿಳಿಸಿದರು.

ಯುವ ಕನ್ನಡ ಕಾರ್ಯಕರ್ತರ ಶಿಬಿರ ನ. 28ಕ್ಕೆ

ಬೆಂಗಳೂರು: ಕನ್ನಡ ಗೆಳೆಯರ ಬಳಗವು ನ.28ರಂದು ನಗರದ ನರಸಿಂಹರಾಜ ಕಾಲೊನಿಯ ಬಿ.ಎಂ.ಶ್ರೀ. ಕಲಾ ಭವನದಲ್ಲಿ ಯುವ ಕನ್ನಡ ಕಾರ್ಯಕರ್ತರ ಶಿಬಿರವನ್ನು ಆಯೋಜಿಸಿದೆ.

ಈ ಶಿಬಿರದಲ್ಲಿ ಕನ್ನಡ ಸಾಹಿತ್ಯ, ಪರಂಪರೆಯ ಜೊತೆಗೆ ಕನ್ನಡ, ಕನ್ನಡಿಗ ಹಾಗೂ ಕರ್ನಾಟಕ ಎದುರಿಸುತ್ತಿರುವ ಸಮಸ್ಯೆಗಳು, ಪರಿಹಾರದ ಮಾರ್ಗೋಪಾಯಗಳನ್ನೂ ತಿಳಿಸಲಾಗುತ್ತದೆ. ಕರಪತ್ರ ಹಾಗೂ ಪತ್ರಿಕಾ ಹೇಳಿಕೆ ಸಿದ್ಧಪಡಿಸುವುದು, ಕಾರ್ಯಕ್ರಮ ಆಯೋಜನೆ, ನಿರ್ವಹಣೆಯ ಬಗ್ಗೆಯೂ ಹೇಳಿಕೊಡಲಾಗುತ್ತದೆ. ಕನ್ನಡ ಭಾಷೆಗೆ ಸಮಸ್ಯೆಗಳು ಎದುರಾದಾಗ ಕನ್ನಡ ಸಂಘಟನೆಗಳು ಮಾಡಬಹುದಾದ ಕಾರ್ಯಗಳು ಒಳಗೊಂಡಂತೆ ವಿವಿಧ ಉಪಯುಕ್ತ ಮಾಹಿತಿಗಳನ್ನು ನೀಡಲಾಗುವುದು ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಆಸಕ್ತರು ಮೊಬೈಲ್ ನಂ. 98800 81983 ಅಥವಾ 99456 91172ಕ್ಕೆ ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ಯುವ ಪುರಸ್ಕಾರ ಪ್ರಶಸ್ತಿ’ ವಿಜೇತರ ಸಮ್ಮೇಳನ: ಅಧ್ಯಕ್ಷತೆ–ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸಂಚಾಲಕ ಸರಜೂ ಕಾಟ್ಕರ್, ಆಯೋಜನೆ–ಸಾಹಿತ್ಯ ಅಕಾಡೆಮಿ, ಸ್ಥಳ–ಕೆ.ಆರ್.ಜಿ.ಸಭಾ ಭವನ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 10.30

ಚಿತ್ರಕಲಾ ಪ್ರದರ್ಶನ: ಆಯೋಜನೆ–ಇ-ಸ್ಟುಡಿಯೊ, ಸ್ಥಳ–ಫೀನಿಕ್ಸ್ ಕೆಸ್ಸಾಕು, ರಾಜಕುಮಾರ್ ರಸ್ತೆ, ರಾಜಾಜಿನಗರ, ಸಂಜೆ 4

ಶಿಕ್ಷಣ ಉಳಿಸಿ ಸಮ್ಮೇಳನದಲ್ಲಿ ಪ್ರೊ.ಎಸ್‌ಜಿ. ಸಿದ್ದರಾಮಯ್ಯ

‘ಬಹುತ್ವ ಸಂಸ್ಕೃತಿಗೆ ಧಕ್ಕೆ ತರಲಿರುವ ಎನ್‌ಇಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಮೂಲಕ ಬಹುತ್ವ ಸಂಸ್ಕೃತಿ ನಾಶ ಮಾಡಲು ಸರ್ಕಾರ ಮುಂದಾಗಿದೆ’ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಭಾನುವಾರ ಆಯೋಜಿಸಿದ್ದ ಎರಡನೇ ರಾಜ್ಯಮಟ್ಟದ ಶಿಕ್ಷಣ ಉಳಿಸಿ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಭಾರತ ವೈವಿಧ್ಯತೆಯ ರಾಷ್ಟ್ರ. ಆದರೆ, ಸರ್ಕಾರ ಏಕ ಭಾಷೆ, ಏಕ ಸಂಸ್ಕೃತಿಯನ್ನು ಹೇರಲು ಯತ್ನಿಸುತ್ತಿರುವುದು ಅಪಾಯಕಾರಿ’ ಎಂದರು.

‘ಕೆಲವು ಭಾಷೆಗಳಿಗೆ ಆದ್ಯತೆ ನೀಡುವ ಮೂಲಕ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಲಾಗುತ್ತಿದೆ. ಆಕ್ರಮಣಕಾರಿ ರೀತಿಯಲ್ಲಿ ಹಿಂದಿ ಹೇರಲಾಗುತ್ತಿದೆ. ಈಗ ಶಿಕ್ಷಣ ಕ್ಷೇತ್ರದಲ್ಲಿ ಹಿಂದಿ ಭಾಷೆಯ ಪ್ರಭಾವ ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತಿದೆ’ ಎಂದು ದೂರಿದರು.

‘ಮಾನವೀಯ ಸಂವೇದನೆಯುಳ್ಳ ಶಿಕ್ಷಣ ನೀತಿಯನ್ನು ರೂಪಿಸುವ ಬದಲು ಕೋಮುದ್ವೇಷವನ್ನು ಬಿತ್ತುವ ಪ್ರಯತ್ನ ನಡೆಸಲಾಗುತ್ತಿದೆ. ಈ ಮೂಲಕ ಯುವಪೀಳಿಗೆಯ ಮನಸ್ಸುಗಳನ್ನು ಮಲಿನಗೊಳಿಸಿ ಧರ್ಮದ ಸೈನಿಕರನ್ನಾಗಿ ಪರಿವರ್ತಿಸುತ್ತಿರುವುದು ಅಪಾಯಕಾರಿ ಬೆಳವಣಿಗೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಐಎಸ್‌ಇಸಿ ರಾಜ್ಯ ಕಾರ್ಯದರ್ಶಿ ಕೆ. ಉಮಾ ಮಾತನಾಡಿ, ‘ಬಿಜೆಪಿ ದ್ವಂದ್ವ ನೀತಿಯನ್ನು ಅನುಸರಿಸುತ್ತಿದೆ. ತಾನು ಅಧಿಕಾರದಲ್ಲಿ ಇಲ್ಲದಿದ್ದಾಗ ಕಾಂಗ್ರೆಸ್ ರೂಪಿಸಿದ್ದ ಶಿಕ್ಷಣ ನೀತಿಯನ್ನು ವಿರೋಧಿಸಿತ್ತು. ಆದರೆ, ಅಧಿಕಾರಕ್ಕೆ ಬಂದ ಮೇಲೆ ಅದೇ ರೀತಿಯ ನೀತಿಯನ್ನು ಬಿಜೆಪಿ ಜಾರಿಗೊಳಿಸಿದೆ’ ಎಂದು ಟೀಕಿಸಿದರು.

‘ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಮತ್ತು ಸೆನೆಟ್‌ಗಳ ಅಧಿಕಾರ ಕಸಿಯುವ ಪ್ರಯತ್ನ ಮಾಡಲಾಗುತ್ತಿದೆ. ಪ್ರತಿಯೊಂದು ಕಾಲೇಜುಗಳು ಈಗ ವಿಶ್ವವಿದ್ಯಾಲಯಗಳಾಗುತ್ತಿವೆ. ಇದರಿಂದ, ಸಾವಿರಾರು ವಿಶ್ವವಿದ್ಯಾಲಯಗಳು ಹುಟ್ಟಿಕೊಂಡಿವೆ. ಆದರೆ, ಗುಣಮಟ್ಟದ ಬಗ್ಗೆ ಗಮನಹರಿಸಿಲ್ಲ’ ಎಂದು ಹೇಳಿದರು.

ಹಂಪಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಟಿ.ಆರ್. ಚಂದ್ರಶೇಖರ್, ‘ಜನಸಾಮಾನ್ಯರ ಶಿಕ್ಷಣದ ಹಕ್ಕನ್ನು ಎನ್‌ಇಪಿ ಕಿತ್ತುಕೊಳ್ಳಲಿದೆ. ಈ ನೀತಿ ಮೂಲಕ ಸಂವಿಧಾನದ ಮೂಲ ಆಶಯಗಳನ್ನೇ ತಿರುಚಲಾಗುತ್ತಿದೆ. ರಾಜ್ಯದ ಶೈಕ್ಷಣಿಕ ವಾತಾವರಣ ಈಗಾಗಲೇ ದುಃಸ್ಥಿತಿ ತಲುಪಿದೆ. ಹೀಗಿರುವಾಗ ಈ ನೀತಿ ಕರ್ನಾಟಕಕ್ಕೆ ಸೂಕ್ತವಲ್ಲ. ಪೂರ್ವ ಸಿದ್ಧತೆಗಳು ಇಲ್ಲದೆಯೇ ಜಾರಿಗೊಳಿಸುವ ನೀತಿಗಳಿಂದ ಅನುಕೂಲಕ್ಕಿಂತ ಅಪಾಯವೇ ಹೆಚ್ಚು’ ಎಂದರು. ಎಐಎಸ್‌ಇಸಿಯ ಆರ್.ಕೆ. ವೀರಭದ್ರಪ್ಪ ಇದ್ದರು.

ನಗರದಲ್ಲಿ ಭಾನುವಾರ ನಡೆದ ‘ಶಿಕ್ಷಣ ಉಳಿಸಿ’ ಸಮ್ಮೇಳನದಲ್ಲಿ ಪ್ರೊ. ಟಿ.ಆರ್ ಚಂದ್ರಶೇಖರ್, ಪ್ರೊ.ಎಸ್‌ಜಿ. ಸಿದ್ಧರಾಮಯ್ಯ, ಕೆ.ಉಮಾ, ವಿ.ಎನ್ ರಾಜಶೇಖರ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಹಣ ಬಿಡುಗಡೆಯಲ್ಲೂ ತಾರತಮ್ಯ: ಗುತ್ತಿಗೆದಾರರ ಆರೋಪ

ಕಸ ವಿಲೇವಾರಿ: ಏಪ್ರಿಲ್‌ನಿಂದ ಪಾವತಿಯಾಗಿಲ್ಲ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡುವ ಗುತ್ತಿಗೆದಾರರಿಗೆ ಆರು ತಿಂಗಳಿನಿಂದ ಹಣ ಪಾವತಿ ಆಗಿಲ್ಲ. ಕಸ ವಿಲೇವಾರಿ ವ್ಯವಸ್ಥೆ ಮೇಲೂ ಇದರ ದುಷ್ಪರಿಣಾಮ ಉಂಟಾಗುತ್ತಿದೆ.

ಒಂದೆಡೆ ಡೀಸೆಲ್ ದರ ಲೀಟರ್‌ಗೆ ₹ 100ರ ಗಡಿ ದಾಟಿದೆ. 2021 ಏಪ್ರಿಲ್‌ನಿಂದ ಹಣ ಪಾವತಿ ಆಗಿಲ್ಲ. ಕಸ ಸಾಗಿಸುವ ವಾಹನಗಳ ನಿರ್ವಹಣೆಯೂ ಕಷ್ಟವಾಗಿದೆ. ಇನ್ನೂ ಹಣ ಪಾವತಿ ಆಗದಿದ್ದರೆ ಕಸ ವಿಲೇವಾರಿ ಕಷ್ಟವಾಗಬಹುದು ಎಂದು ಕೆಲವು ಗುತ್ತಿಗೆದಾರರು ಅಳಲು ತೋಡಿಕೊಂಡಿದ್ದಾರೆ.

ಒಂದೆರಡು ದಿನ ಕಸ ವಿಲೇವಾರಿ ಪ್ರಕ್ರಿಯೆ ಸಮರ್ಪಕವಾಗಿ ನಡೆಯದಿದ್ದರೂ ನಗರದಲ್ಲಿ ಎಲ್ಲೆಡೆ ಕಸದ ರಾಶಿಗಳು ಕಾಣಿಸಿಕೊಳ್ಳುತ್ತವೆ. ಮಾರುಕಟ್ಟೆ ಆಸುಪಾಸಿನ ಪ್ರದೇಶಗಳಂತೂ ಗಬ್ಬೆದ್ದು ನಾರುತ್ತವೆ. ಆಯುಧ ಪೂಜೆ ಹಾಗೂ ವಿಜಯ ದಶಮಿ ಹಬ್ಬಗಳ ಸಂದರ್ಭದಲ್ಲೂ ಇಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಬ್ಬದ ಸಂದರ್ಭದಲ್ಲಿ ಉತ್ಪತ್ತಿಯಾದ ಹೆಚ್ಚುವರಿ ಕಸವನ್ನು ವಿಲೇ ಮಾಡುವಷ್ಟರಲ್ಲಿ ಬಿಬಿಎಂಪಿ ಹೈರಾಣಾಗಿತ್ತು. ಪಾವತಿ ವಿಳಂಬದಿಂದ ಬೇಸತ್ತು ಕಸ ವಿಲೇವಾರಿ ಸ್ಥಗಿತಗೊಳಿಸುವುದಕ್ಕೂ ಗುತ್ತಿಗೆದಾರರು ಚಿಂತನೆ ನಡೆಸಿದ್ದಾರೆ.

‘ಕಸ ವಿಲೇವಾರಿ ಹಾಗೂ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರಿಗೆ ಬಿಬಿಎಂಪಿಯಲ್ಲಿ ಆದ್ಯತೆ ಮೇರೆಗೆ ಹಣ ಪಾವತಿ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಭೂಭರ್ತಿ ಕೇಂದ್ರಗಳಿಗೆ ಕಸ ಸಾಗಿಸುವ ಗುತ್ತಿಗೆದಾರರ ಪಾವತಿ ತೀರಾ ವಿಳಂಬವಾಗಿದೆ. ಆಯುಧ ಪೂಜೆ ಸಂದರ್ಭದಲ್ಲಿ ಕಾರ್ಮಿಕರಿಗೆ ಬೋನಸ್ ನೀಡುವ ಸಂಪ್ರದಾಯವಿದೆ. ಈ ಬಾರಿ ಅದೂ ಸಾಧ್ಯವಾಗಿಲ್ಲ. ಡೀಸೆಲ್ ಬೆಲೆ ಏರಿಕೆಯ ಹೊರೆಯನ್ನೂ ನಾವು ತಾಳಿಕೊಳ್ಳಬೇಕಿದೆ. ದೀಪಾವಳಿ ವೇಳೆಗಾದರೂ ಬಿಬಿಎಂಪಿ ಬಾಕಿ ಮೊತ್ತ ಬಿಡುಗಡೆ ಮಾಡಬಹುದು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ’ ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.

‘ಹಣ ಬಿಡುಗಡೆ ವೇಳೆ ಬಿಬಿಎಂಪಿ ಅಧಿಕಾರಿಗಳು ತಾರತಮ್ಯ ನಡೆಸುತ್ತಿದ್ದಾರೆ. ಕೆಲವು ಗುತ್ತಿಗೆದಾರರಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೆಯೇ ಹಣ ಪಾವತಿ ಆಗುತ್ತಿದೆ. ಇನ್ನು ಕೆಲವರಿಗೆ ವಿನಾಕಾರಣ ಪಾವತಿ ವಿಳಂಬ ಮಾಡಲಾಗುತ್ತಿದೆ. ಈ ಬಗ್ಗೆ ದೂರು ಹೇಳಿಕೊಂಡಾಗ ಹಿರಿಯ ಅಧಿಕಾರಿಗಳು ಹಣ ಬಿಡುಗಡೆ ಮಾಡುವುದಾಗಿ ಭರವಸೆಯನ್ನೇನೋ ನೀಡುತ್ತಾರೆ. ಆದರೆ, ಸಮಸ್ಯೆ ಮಾತ್ರ ಹಾಗೆಯೇ ಮುಂದುವರಿಯುತ್ತಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕಸ ಸಾಗಣೆ ಕಷ್ಟ’ ಎಂದು ಬಿಬಿಎಂಪಿ ಸ್ವಚ್ಛತಾ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಹ್ಮಣ್ಯ ದೂರಿದರು.

‘ನಗರೋತ್ಥಾನ ಹಾಗೂ ಸರ್ಕಾರದ ಇತರ ಕಾರ್ಯಕ್ರಮಗಳ ಸಲುವಾಗಿ ನಗರಾಭಿವೃದ್ಧಿ ಇಲಾಖೆಯು ಇತ್ತೀಚೆಗೆ ₹ 550 ಕೋಟಿ ಮೊತ್ತವನ್ನು ಬಿಬಿಎಂಪಿಗೆ ಬಿಡುಗಡೆ ಮಾಡಿದೆ. ಆದರೂ, ರಸ್ತೆ ಗುಂಡಿ ಮುಚ್ಚುವುದು ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದ ಅನುದಾನ ಬಿಡುಗಡೆಗೆ ಮೀನಮೇಷ ಎಣಿಸಲಾಗುತ್ತಿದೆ’ ಎಂದು ಗುತ್ತಿಗೆದಾರರೊಬ್ಬರು ದೂರಿದರು.

‘ಇನ್ನೂ ಕೈ ಸೇರಿಲ್ಲ ಹಳೆ ಬಾಕಿ’

2020–21ನೇ ಸಾಲಿನಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕಾದ ಶೇ 20ರಷ್ಟು ಮೊತ್ತವನ್ನು ತಡೆಹಿಡಿಯಲಾಗಿತ್ತು. ಇದರಲ್ಲಿ ಭಾಗಶಃ ಹಣ ಬಿಡುಗಡೆ ಮಾಡಲು ಸರ್ಕಾರ ₹ 40 ಕೋಟಿ ಬಿಡುಗಡೆ ಮಾಡಿದೆ. ಇದಾಗಿ ವಾರಗಳು ಉರುಳಿದರೂ ಪಾವತಿ ಆಗಿಲ್ಲ ಎಂದು ಕೆಲವು ಗುತ್ತಿಗೆದಾರರು ದೂರಿದರು.

‘ತಂತ್ರಾಂಶ ದೋಷದಿಂದಾಗಿ ಹಣ ಬಿಡುಗಡೆ ಸಾಧ್ಯವಾಗುತ್ತಿಲ್ಲ ಎಂದು ವಲಯ ಮಟ್ಟದ ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ. ಇದನ್ನು ಹಣಕಾಸು ವಿಭಾಗದ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ದೋಷ ಸರಿಪಡಿಸುತ್ತಿಲ್ಲ. ಮುಖ್ಯ ಆಯುಕ್ತರೂ ನಮ್ಮ ಸಮಸ್ಯೆಗೆ ಕಿವಿಗೊಡುತ್ತಿಲ್ಲ. ಪಾವತಿ ವಿಳಂಬದಿಂದ ನಾವು ಸಮಸ್ಯೆ ಎದುರಿಸುವಂತಾಗಿದೆ’ ಎಂದು ಗುತ್ತಿಗೆದಾರರೊಬ್ಬರು ಸಮಸ್ಯೆ ಹೇಳಿಕೊಂಡರು.

‘ಜಿಪಿಎಸ್ ಅಳವಡಿಸಿಲ್ಲ ಹಾಗೂ ಗುತ್ತಿಗೆ ಷರತ್ತುಗಳನ್ನು ಪಾವತಿಸಿಲ್ಲ ಎಂಬ ಕಾರಣಕ್ಕೆ ಬಿಬಿಎಂಪಿಯು ಕೆಲವು ಗುತ್ತಿಗೆದಾರರ ಪಾವತಿಯಾಗಬೇಕಾದ ಮೊತ್ತವನ್ನು ತಡೆ ಹಿಡಿದಿತ್ತು. ಇದನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ’ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ತೀರ್ಥರೂಪಿಣಿಯಾಗಿ ಒಲಿದ ಜೀವನದಿ, ತಲಕಾವೇರಿ ಕ್ಷೇತ್ರದಲ್ಲಿ ಸಡಗರ

ಕಾವೇರಿಯ ದರ್ಶನ; ಭಕ್ತರ ಹರ್ಷ

• ಆದಿತ್ಯ ಕೆ.ಎ.

ತಲಕಾವೇರಿ (ಮಡಿಕೇರಿ): ಭಕ್ತರ ಜಯಘೋಷ, ಬ್ರಹ್ಮಗಿರಿಯಲ್ಲಿನ ಮಂಜು ಮುಸುಕಿದ ವಾತಾವರಣದ ನಡುವೆ ಭಾನುವಾರ ಜೀವನದಿ ಕಾವೇರಿ ತೀರ್ಥರೂಪಿಣಿ ಆಗಿ ದರ್ಶನ ನೀಡಿದಳು.

ನಿಗದಿತ ಸಮಯಕ್ಕಿಂತ 1 ನಿಮಿಷ ತಡವಾಗಿ ಅಂದರೆ, ಮಧ್ಯಾಹ್ನ 1.12ಕ್ಕೆ ಕಾವೇರಿಯು ಬ್ರಹ್ಮಕುಂಡಿಕೆಯಲ್ಲಿ ಉಕ್ಕೇರಿದಳು.

ತೀರ್ಥೋದ್ಭವದ ಬಳಿಕ ಅರ್ಚಕರು ತೀರ್ಥವನ್ನು ನೆರೆದಿದ್ದ ಭಕ್ತರಿಗೆ ಪ್ರೋಕ್ಷಣೆ ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿದ್ದ ಭಕ್ತರು ಪುನೀತರಾದರು.

ಕಾವೇರಿಯ ದರ್ಶನಕ್ಕೆ ಬೆಳಿಗ್ಗೆಯಿಂದಲೂ ಭಕ್ತರು ಕ್ಷೇತ್ರದತ್ತ ಬರಲು ಆರಂಭಿಸಿದ್ದರು. ತೀರ್ಥೋದ್ಭವದ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರಿಂದ 'ಜೈ ಜೈ ಮಾತಾ ಕಾವೇರಿ ಮಾತಾ', 'ಉಕ್ಕಿ ಬಾ ಕಾವೇರಿ...' ಎನ್ನುವ ಘೋಷಣೆಗಳು ಮೊಳಗಿದವು. ಅರ್ಚಕರಾದ ಗುರುರಾಜ್ ಆಚಾರ್ಯ, ಪ್ರಶಾಂತ್ ಆಚಾರ್ಯ ನೇತೃತ್ವದಲ್ಲಿ ಕುಂಕುಮಾರ್ಚನೆ, ಪುಷ್ಪಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಕಾವೇರಿ ಮಾತೆಯು ಹೂವು, ಚಿನ್ನಾಭರಣದೊಂದಿಗೆ ಕಂಗೊಳಿಸುತ್ತಿದ್ದಳು. ಸಾಂಪ್ರದಾಯಿಕ ದುಡಿಕೊಟ್ಟ್ ಹಾಡಿನೊಂದಿಗೆ ಭಾಗಮಂಡಲದಿಂದ ಕೋಡಿ ಕುಟುಂಬಸ್ಥರು ಭಂಡಾರವನ್ನು ಮೆರವಣಿಗೆಯಲ್ಲಿ ತಂದರು.

> ಕಾವೇರಿಯು ನಾಡಿಗೆ ನೀರು ಉಣಿಸುತ್ತಿದ್ದಾಳೆ. ನಾಡಿನಲ್ಲಿ ಸಮೃದ್ಧಿ ನೆಲೆಸಲಿ. ತೀರ್ಥವನ್ನು ಮಂಡ್ಯ ಜಿಲ್ಲೆಯಲ್ಲೂ ವಿತರಣೆ ಮಾಡುತ್ತೇನೆ
>
> **ನಾರಾಯಣಗೌಡ,** ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ

> ಕಾವೇರಿ ತುಂಬಿ ಹರಿದರೆ ನೆಮ್ಮದಿ ನೆಲೆಸಲಿದೆ. ರಾಜ್ಯದ ಅರ್ಧ ಭಾಗಕ್ಕೆ ಅನ್ನ, ನೀರು, ನೆರಳು ನೀಡುತ್ತಿದ್ದಾಳೆ
>
> **ಪ್ರತಾಪ ಸಿಂಹ,** ಸಂಸದ

ಕೋವಿಡ್ ಕಾರಣಕ್ಕೆ ಭಕ್ತರಿಗೆ ಕೊಳದಲ್ಲಿ ಪುಣ್ಯಸ್ನಾನ ಮಾಡಲು ಅವಕಾಶ ಇರಲಿಲ್ಲ. ಕೊಳದ ಬಳಿಗೂ ಭಕ್ತರನ್ನು ಬಿಡಲಿಲ್ಲ. ಸ್ವಯಂ ಸೇವಕರೇ ತೀರ್ಥ ತುಂಬಿಸಿಕೊಟ್ಟರು. ಬ್ರಹ್ಮಗಿರಿಗೂ ಪ್ರವೇಶ ನಿಷೇಧಿಸಲಾಗಿತ್ತು.

ಒಂದು ವಾರದಿಂದ ತಲಕಾವೇರಿ ಹಾಗೂ ಭಾಗಮಂಡಲ ಭಾಗದಲ್ಲಿ ಧಾರಾಕಾರ ಮಳೆ ಸುರಿಯುತ್ತಿತ್ತು. ಭಾನುವಾರ ಮಂಜು ಮುಸುಕಿದ ವಾತಾವರಣವಿದ್ದರೂ, ಮಳೆ ಸುರಿಯಲಿಲ್ಲ. ಇದರಿಂದ ಭಕ್ತರ ಸಂಭ್ರಮ ಹೆಚ್ಚಿತ್ತು. ಶಾಸಕರಾದ ಎಂ.ಪಿ. ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಇದ್ದರು.



ಮಡಿಕೇರಿ ತಾಲ್ಲೂಕಿನ ತಲಕಾವೇರಿಯಲ್ಲಿ ಭಾನುವಾರ ತೀರ್ಥೋದ್ಭವದ ಬಳಿಕ ಭಕ್ತರ ಮೇಲೆ ತೀರ್ಥ ಪ್ರೋಕ್ಷಣೆ ಮಾಡಲಾಯಿತು ಪ್ರಜಾವಾಣಿ ಚಿತ್ರ: ರಂಗಸ್ವಾಮಿ

ಮತಾಂತರಕ್ಕೆ ಪ್ರಚೋದನೆ ಆರೋಪ: ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಬೈರಿದೇವರಕೊಪ್ಪದ ಸರ್ವಧರ್ಮ ಪ್ರಾರ್ಥನಾ ಮಂದಿರದಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವಂತೆ ಪ್ರಚೋದನೆ ನೀಡಿದ ವ್ಯಕ್ತಿಯನ್ನು ಬಂಧಿಸುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ಭಾನುವಾರ ಸಂಜೆ ಹುಬ್ಬಳ್ಳಿ-ಧಾರವಾಡ ರಸ್ತೆ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ನವನಗರ ಸಮೀಪದ ಸುತಗಟ್ಟಿಯ ಸೋಮು ಅವರಾಧಿ ಎಂಬುವವರು ಮತಾಂತರಕ್ಕೆ ಪ್ರಚೋದನೆ ನೀಡಿದ್ದಾನೆ. ನನ್ನ ಮನೆಗೆ ಬಂದು ಕುಟುಂಬ ಸಮೇತ ಪ್ರಾರ್ಥನಾ ಮಂದಿರಕ್ಕೆ ಬರುವಂತೆ ಹೇಳಿ ಅಲ್ಲಿ ಕ್ರೈಸ್ತ ಧರ್ಮದ ನಿಯಮಗಳನ್ನು ಪಾಲಿಸುವಂತೆ ಸೂಚಿಸಿದ್ದಾನೆ ಎಂದು ಆರೋಪಿಸಿ ನವನಗರದ ವಿಶ್ವನಾಥ ಬೂದೂರು ಎಂಬುವರು ಎಪಿಎಂಸಿ ನವನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಪ್ರಾರ್ಥನೆ ವೇಳೆ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಮಂದಿರದ ನುಗ್ಗಿ ಸೋಮು ಅವರನ್ನು ಪೊಲೀಸ್ ಠಾಣೆಗೆ ಕರೆತಂದರು. ಈ ವೇಳೆ ಸ್ಥಳೀಯರು ಹಾಗೂ ಸಂಘಟನೆಯವರು ಹಲ್ಲೆ ಮಾಡಿದ್ದಾರೆ ಎಂದು ಸೋಮು ಆರೋಪಿಸಿದ್ದಾರೆ.

ಮತಾಂತರಕ್ಕೆ ಪ್ರಚೋದಿಸಿದ ಆರೋಪಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿ ವಿಎಚ್‌ಪಿ ಹಾಗೂ ಬಜರಂಗದಳ ಸಂಘಟನೆಗಳು ಭಾನುವಾರ ಹುಬ್ಬಳ್ಳಿ–ಧಾರವಾಡ ರಸ್ತೆ ಬಂದ್ ಮಾಡಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು

ಸಂಘಟನೆಯ ಮುಖಂಡರು ಠಾಣೆಗೆ ದೂರು ನೀಡುತ್ತಿದ್ದಾಗ ಸೋಮು ಅಂಬುಲೆನ್ಸ್ ಹತ್ತಿಕೊಂಡು ಹೋಗಿದ್ದು, ಸಂಘಟಕರ ಆಕ್ರೋಶಕ್ಕೆ ಕಾರಣವಾಯಿತು. ಆರೋಪಿಯನ್ನು ಠಾಣೆಯಿಂದ ಹೋಗಲು ಅನುವು ಮಾಡಿಕೊಟ್ಟಿದ್ದಾರೆ ಎಂದು ವಿಎಚ್‌ಪಿ ಹಾಗೂ ಬಜರಂಗದಳ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಸಂಜೆ ಆರು ಗಂಟೆಯ ಒಳಗೆ ಆರೋಪಿಯನ್ನು ಬಂಧಿಸಬೇಕು ಎಂದು ಪೊಲೀಸ್ ಠಾಣೆ ಎದುರು ಭಾನುವಾರ ಮಧ್ಯಾಹ್ನದಿಂದಲೇ ಪ್ರತಿಭಟಿಸಿದರು.

ಆರು ಗಂಟೆಯ ನಂತರ ಒಂದೂವರೆ ತಾಸು ಹುಬ್ಬಳ್ಳಿ–ಧಾರವಾಡ ರಸ್ತೆಯನ್ನು ಮತ್ತು ಬಿಆರ್‌ಟಿಎಸ್ ಕಾರಿಡಾರ್ ಅನ್ನು ಬಂದ್ ಮಾಡಿದರು. ಇದರಿಂದ ವಾಹನ ಸವಾರರು ಗಂಟೆಗಟ್ಟಲೇ ರಸ್ತೆಯಲ್ಲಿ ಕಳೆಯಬೇಕಾಯಿತು. ರಾತ್ರಿ ಸಂಘಟನೆಯವರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಆರೋಪಿ ಸೋಮು 'ನಾನು ಯಾರಿಗೂ ಮತಾಂತರಕ್ಕೆ ಪ್ರಚೋದನೆ ಮಾಡಿಲ್ಲ. ದೂರು ನೀಡಿದ ವಿಶ್ವನಾಥ ಎಂಬಾತ ಯಾರು ಎಂಬುದೇ ನನಗೆ ಗೊತ್ತಿಲ್ಲ' ಎಂದರು.

ಕೆ.ವಿ.ನಾಗರಾಜಮೂರ್ತಿಗೆ 'ಶ್ರೀ ಶಿವಕುಮಾರ' ಪ್ರಶಸ್ತಿ

ಸಾಣೇಹಳ್ಳಿ(ಹೊಸದುರ್ಗ): ರಂಗಭೂಮಿಯಲ್ಲಿನ ಜೀವಮಾನದ ಸಾಧನೆಗಾಗಿ ಇಲ್ಲಿನ ಶಿವಕುಮಾರ ಕಲಾಸಂಘ ಪ್ರತಿವರ್ಷ ಕೊಡಮಾಡುವ ಪ್ರತಿಷ್ಠಿತ 'ಶ್ರೀ ಶಿವಕುಮಾರ ಪ್ರಶಸ್ತಿ'ಗೆ ಈ ಬಾರಿ ರಂಗಸಂಘಟಕ, ನಿರ್ದೇಶಕ ಕೆ.ವಿ. ನಾಗರಾಜಮೂರ್ತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 50 ಸಾವಿರ ನಗದು ಮತ್ತು ಫಲಕಗಳನ್ನು ಒಳಗೊಂಡಿದೆ. ಶಿವಸಂಚಾರ ಮತ್ತು ನಾಟಕೋತ್ಸವದ ಬೆಳ್ಳಿ ಹಬ್ಬದ ಪ್ರಯುಕ್ತ ನವೆಂಬರ್ 2ರಿಂದ 7ರ ವರೆಗೆ ನಡೆಯುವ ರಾಷ್ಟ್ರೀಯ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.



ಕೆ.ವಿ. ನಾಗರಾಜ ಮೂರ್ತಿ

ಭೂಕಂಪನ: ಮಾಹಿತಿಗೆ ಸಿಸ್ಮೊಮೀಟರ್ ಅಳವಡಿಕೆ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಭಾನುವಾರ ವಿಜ್ಞಾನಿಗಳು ಭೂಕಂಪನದ ಸ್ಥಿತಿಗತಿ ಪರಿಶೀಲಿಸುತ್ತಿರುವಾಗಲೇ ಭೂಮಿ ಕಂಪಿಸಿತು.

'ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಸಿಸ್ಮೊಮೀಟರ್ ಅಳವಡಿಸಲಾಗಿದೆ. ಅದರಲ್ಲಿ ಲಘು ಕಂಪನ ದಾಖಲಾಗಿದ್ದು, ಇದರ ತೀವ್ರತೆ ರಿಕ್ಟರ್ ಮಾಪಕದಲ್ಲಿ ಒಂದಕ್ಕಿಂತ ಕಡಿಮೆ ಇದೆ' ಎಂದು ಹೈದರಾಬಾದ್‌ನ ರಾಷ್ಟ್ರೀಯ ಭೌಗೋಳಿಕ ಸಂಶೋಧನಾ ಸಂಸ್ಥೆಯ (ಎನ್‌ಜಿಆರ್‌ಐ) ವಿಜ್ಞಾನಿಗಳು ತಿಳಿಸಿದರು.

'ಸಿಸ್ಮೊಮೀಟರ್‌ನಿಂದ ಒಂದು ತಿಂಗಳ ಅವಧಿಯಲ್ಲಿ ಲಭ್ಯವಾಗುವ ದತ್ತಾಂಶ ಮಾಹಿತಿಯನ್ನು ಆಧರಿಸಿ, ಅಧ್ಯಯನ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

ಎನ್‌ಜಿಆರ್‌ಐ ಸಂಸ್ಥೆ ವಿಜ್ಞಾನಿಗಳಾದ ಡಾ. ಶಶಿಧರ, ಡಾ. ಸುರೇಶ, ಕರ್ನಾಟಕ ರಾಜ್ಯ ನೈಸರ್ಗಿಕ ಉಸ್ತುವಾರಿ ಕೋಶದ ಭೂಕಂಪ ವಿಜ್ಞಾನಿಗಳಾದ ಡಾ. ರಮೇಶ ದಿಕ್ಪಾಲ್, ಡಾ. ಅಭಿನಯ, ಕಲಬುರಗಿಯ ಶರಣಶಿರಸಗಿಯ ಭೂಕಂಪ ಮಾಪನ ಕೇಂದ್ರದ ಸಹಾಯಕ ವಿಜ್ಞಾನಿ ಅಣವೀರಪ್ಪ ಬಿರಾದಾರ ಅವರು ಭೂಕಂಪನದ ಕುರಿತು ಮಾಹಿತಿ ಸಂಗ್ರಹಿಸಿದರು.

ಶನಿವಾರ ರಾತ್ರಿ ಗ್ರಾಮದಲ್ಲಿ ವಾಸ್ತವ್ಯ ಮಾಡಿದ್ದ ಸಂಸದ ಡಾ. ಉಮೇಶ ಜಾಧವ ಮತ್ತು ಸೇಡಂ ಶಾಸಕ ರಾಜಕುಮಾರ ಪಾಟೀಲ ತೆಲ್ಕೂರ ಅವರಿಗೆ ಬೆಳಗಿನ ಜಾವ 4ರ ಸುಮಾರಿಗೆ ಭೂಮಿಯಿಂದ ಸದ್ದು ಕೇಳಿಸಿತು.

ಇಂದು ಸಚಿವ ಅಶೋಕ ಭೇಟಿ: ಗಡಿಕೇಶ್ವಾರ ಗ್ರಾಮಕ್ಕೆ ಸೋಮವಾರ (ಅ.18) ಕಂದಾಯ ಸಚಿವ ಆರ್. ಅಶೋಕ ಅವರು ಭೇಟಿ ನೀಡಲಿದ್ದಾರೆ.

ಉಪಚುನಾವಣೆ ಪ್ರತಿಷ್ಠೆಯಲ್ಲ, ಜನರ ಭವಿಷ್ಯ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹಾವೇರಿ: 'ಹಾನಗಲ್ ಉಪಚುನಾವಣೆ ನನಗೆ ಪ್ರತಿಷ್ಠೆಯ ವಿಷಯವಲ್ಲ. ಆದರೆ, ಈ ಗೆಲುವಿನಲ್ಲಿ ತಾಲ್ಲೂಕಿನ ಜನರ ಭವಿಷ್ಯ ಅಡಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಾನಗಲ್ ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಹಾನಗಲ್ ವಿಧಾನಸಭಾ ಉಪಚುನಾವಣೆ ಪ್ರಚಾರಾರ್ಥ ಭಾನುವಾರ ಏರ್ಪಡಿಸಿದ್ದ 'ಬೃಹತ್ ಸಾರ್ವಜನಿಕ ಸಭೆ'ಯಲ್ಲಿ ಅವರು ಮಾತನಾಡಿದರು.

'ಈ ಉಪಚುನಾವಣೆಗಳು ಮುಂದಿನ ಚುನಾವಣೆಯ ದಿಕ್ಸೂಚಿಯಲ್ಲ ಎಂಬುದನ್ನು ಸಿದ್ದರಾಮಯ್ಯ ಅವರೂ ಹೇಳಿದ್ದಾರೆ. ನಾವೂ ಹೇಳಿದ್ದೇವೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭ ನಂಜನಗೂಡು ಮತ್ತು ಗುಂಡ್ಲುಪೇಟೆ ಎರಡೂ ಉಪಚುನಾವಣೆಗಳನ್ನೂ ಗೆದ್ದರು. ಮುಂದೆ ಸಾರ್ವತ್ರಿಕ ಚುನಾವಣೆಯಲ್ಲಿ ಬಿದ್ದರು. ಈ ಉಪಚುನಾವಣೆಗಳೂ ಅವುಗಳ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿವೆ. ಸಾರ್ವತ್ರಿಕ ಚುನಾವಣೆಯಲ್ಲಿ ಜನ ತೀರ್ಪು ನೀಡುತ್ತಾರೆ' ಎಂದು ಹೇಳಿದರು.

ದಾಖಲೆ ಬಿಡುಗಡೆ: ಹಾನಗಲ್ ಅಳಿಯ ಬೊಮ್ಮಾಯಿ ಅವರ ಕೊಡುಗೆ ಏನು? ಎಂದು ಸಿದ್ದರಾಮಯ್ಯ ಕೇಳಿದ್ದಾರೆ. ಬಾಳಂಬೀಡ ಏತ ನೀರಾವರಿ ಯೋಜನೆ ಕಾಂಗ್ರೆಸ್ ಸರ್ಕಾರದಲ್ಲಿ ಆದದ್ದು ಎಂದು ಸುಳ್ಳು ಪ್ರಚಾರ ಮಾಡಿದ್ದಾರೆ. ಸಿ.ಎಂ. ಉದಾಸಿ ಮತ್ತು ನಾನು, ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮುಂದೆ ಪ್ರಸ್ತಾಪ ಮಾಡಿದಾಗ ₹418 ಕೋಟಿ ವೆಚ್ಚದ ಬಾಳಂಬೀಡ ಮತ್ತು ₹115 ಕೋಟಿ ವೆಚ್ಚದ ಹಿರೇಕಾಂಶಿ ಯೋಜನೆಗೆ ಮಂಜೂರಾತಿ ನೀಡಿದರು. ಅದರ ಸಮಗ್ರ ದಾಖಲೆಯನ್ನು ನಿಮಗೆ ಕಳುಹಿಸಿಕೊಡುತ್ತೇನೆ ಎಂದು ಸಭೆಯಲ್ಲಿ ದಾಖಲೆಗಳನ್ನು ಪ್ರದರ್ಶಿಸಿದರು.

ಭ್ರಷ್ಟಾಚಾರದ ಗಂಗೋತ್ರಿ ಕಾಂಗ್ರೆಸ್: ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಗಂಗೋತ್ರಿ. ಆ ಪಕ್ಷದ ಎಲ್ಲ ನಾಯಕರ ಮೇಲೂ ಆರೋಪಗಳಿವೆ. ಯಾರ ಹೆಸರನ್ನು ಹೇಳಲಿ, ಯಾರ ಹೆಸರನ್ನು ಬಿಡಲಿ. ನಾನು ಮುಖ್ಯಮಂತ್ರಿಯಾದ ನಂತರ 5 ಲಕ್ಷ ಮನೆಗಳನ್ನು ಮಂಜೂರು ಮಾಡಿದ್ದೇನೆ. ಹಾನಗಲ್ ಕ್ಷೇತ್ರಕ್ಕೆ 7400 ಮನೆಗಳನ್ನು ಮಂಜೂರು ಮಾಡಿದ್ದೇನೆ. ಬಡವರಿಗೆ ಮನೆ, ಕೆರೆಗಳಿಗೆ ನೀರು, ಆಸ್ಪತ್ರೆಗಳ ಉನ್ನತೀಕರಣ, ಮೆಡಿಕಲ್ ಕಾಲೇಜು... ಇವು ಸಾಧನೆಗಳಲ್ಲದೆ ಮತ್ತೇನೇನು? ಎಂದು ಸಿದ್ದರಾಮಯ್ಯ ಅವರ ಎಲ್ಲ ಆರೋಪಗಳಿಗೆ ತೀಕ್ಷ್ಣವಾಗಿ ತಿರುಗೇಟು ನೀಡಿದರು.

ಪ್ರಜಾ ಮತ
ಜನತಂತ್ರದ ಹಬ್ಬ 2021

ಹಾನಗಲ್ ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಹಾನಗಲ್ ವಿಧಾನಸಭಾ ಉಪಚುನಾವಣೆ ಪ್ರಚಾರಾರ್ಥ 'ಬೃಹತ್ ಸಾರ್ವಜನಿಕ ಸಭೆ'ಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು. ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಇದ್ದಾರೆ

ಬಿಎಸ್‌ವೈ 4 ದಿನ ಚುನಾವಣಾ ಪ್ರಚಾರ

ಬೆಂಗಳೂರು: ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಇದೇ ಬುಧವಾರದಿಂದ ನಾಲ್ಕು ದಿನಗಳ ಕಾಲ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ.

ಬುಧವಾರ ಮತ್ತು ಗುರುವಾರ ಸಿಂದಗಿ ಕ್ಷೇತ್ರದಲ್ಲಿ ಯಡಿಯೂರಪ್ಪ ಮತ ಯಾಚಿಸುವರು. ಗುರುವಾರ ರಾತ್ರಿ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಲಿದ್ದು, ಶುಕ್ರವಾರ ಮತ್ತು ಶನಿವಾರ ಹಾನಗಲ್‌ನಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಮತ ಯಾಚಿಸಲಿದ್ದಾರೆ ಎಂದು ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ನಮ್ಮ ಮೆಟ್ರೋ namma metro
Azadi Ka Amrit Mahotsav

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್ : bmrcl@dataone.in ವೆಬ್‌ಸೈಟ್ : www.bmrc.co.in
ಸಂ: ಬಿಎಂಆರ್‌ಸಿಎಲ್/0234/ಮಾಸಂ/2021 ದಿನಾಂಕ: 18.10.2021

ಗುತ್ತಿಗೆ ನೇಮಕಾತಿಗಾಗಿ ಪ್ರಕಟಣೆ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತವು ಈ ಕೆಳಕಂಡ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅನುಭವವುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
1	ಸಹಾಯಕ ಭದ್ರತಾ ಅಧಿಕಾರಿ	37

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **17.11.2021, ಸಂಜೆ 4.00 ಗಂಟೆವರೆಗೆ.**
ಅರ್ಹತಾ ಅಗತ್ಯತೆ ವಿವರ, ಅರ್ಜಿ ನಮೂನೆ ಮತ್ತು ಇತರೆ ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್: **www.bmrc.co.in/Career Section**ಗೆ ಭೇಟಿನೀಡಿ

ಸಹಿ/- ಪ್ರಧಾನ ವ್ಯವಸ್ಥಾಪಕರು (ಮಾಸಂ)

ಕರ್ನಾಟಕ ಸರ್ಕಾರ
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು**

ನಂ. ಎಫ್‌ಡಿ 01 ಬಿಎಂಬಿ 2021 ದಿನಾಂಕ: 13.10.2021

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿಗಳು)

1. ಅಂದಾಜು ಮೊತ್ತ : ಒಟ್ಟು ರೂ.2000 ಕೋಟಿಗಳು (ರೂ.1000 ಕೋಟಿ -10ವರ್ಷಗಳಿಗೆ , ರೂ.1000 ಕೋಟಿ-13 ವರ್ಷಗಳಿಗೆ
2. ನೀಡುವ ವಿಧಾನ : ಪಿಡಿಓ, ಆರ್‌ಬಿಐ, ಮುಂಬಯಿ (ಫೋರ್ಟ್) ಮೂಲಕ ಹರಾಜು
3. ಹರಾಜು ದಿನಾಂಕ : ಅಕ್ಟೋಬರ್ 18, 2021.

ಕರ್ನಾಟಕ ಸರ್ಕಾರವು ಮೇಲ್ಕಂಡ ಸೆಕ್ಯೂರಿಟಿಗಳಿಗೆ ಚಂದಾ ಆಹ್ವಾನಿಸುತ್ತಿದೆ. ನೋಟಿಫಿಕೇಷನ್ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಓ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆದುಕೊಳ್ಳಬಹುದು. ರಿಟೇಲ್ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಆರ್‌ಬಿಐ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನೂ ಕಲ್ಪಿಸಿದೆ. ಪ್ರಕಟಣೆಯಲ್ಲಿ ತಿಳಿಸಿದ ಕರ್ನಾಟಕ ಸರ್ಕಾರದ ಸ್ಟಾಕ್ ಮೊತ್ತದ ಶೇಕಡ 10 ರಷ್ಟು ಮೊತ್ತದ ಸ್ಟಾಕ್‌ಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆಯ ಮಾಹಿತಿಯು ವೆಬ್‌ಸೈಟ್ **www.rbi.org.in** ನಲ್ಲಿ ಲಭ್ಯವಿದೆ.

ವಾಸಾಇ/ಉಸಿ.ನ/28/ಎಂಸಿಎ/21-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

BANGALORE UNIVERSITY
NAAC Accredited with 'A' GRADE
Jnanabharathi Campus, Bengaluru – 560 056.

No.: Aca-IV/B.A. (Hons) & B.Sc (Hons)/2021-22 Date: 16-10-2021

ADMISSION NOTIFICATION
• Four-Year B. A. (Hons)
• Four-Year B.Sc (Hons)

Sub : Admission Notification for B.A. (Hons) and B.Sc (Hons), under NEP for the academic year 2021-22.

Ref : Approval of the Vice-Chancellor: Dated: 16-10-2021

Bangalore University invites applications from students for the admission to Four-year B.A. (Hons), and B.Sc (Hons), Courses under the National Education Policy (2020) for the academic year 2021-22.

B.A. (Hons): Candidates who have completed two-year PUC or equivalent with Arts/ Science/Commerce subjects as optional and have secured at least 50% (45% for SC/ST/Cat-1) of marks in aggregate of all papers studied, including languages at the qualifying examination.

B.Sc. (Hons): Candidates who have completed two-year PUC or equivalent with compulsorily, Mathematics and Science subjects as optional and have secured at least 50% (45% for SC/ST/Cat-1) of marks in aggregate of all papers, including languages at the qualifying examination.

Application should be filled in online mode and relevant documents uploaded by visiting the Bangalore University official **website: www.bangaloreuniversity.ac.in on or before 28-10-2021,** and with a late fee of Rs.100/- **on or before 01-11-2021.** Online filled application should be downloaded and the Hard Copy submitted along with supporting documents to the respective Co-Ordinators (detailed postal address given in the website).

Application Processing Fee (to be paid online/E-payment only)

Category	Application Processing Fee upto 28-10-2021	Application Processing Fee 29-10-2021 to 01-11-2021
G.M. & Others	Rs.400/-	Rs.500/-
SC/ST/Cat-1	Rs.200/-	Rs.300/-

Sd/- REGISTRAR

ನಿಧನ ವಾರ್ತೆ

ಶರಣಬಸವರಾಜ ಹದ್ದಿ ಬಿಸರಳ್ಳಿ

ಕೊಪ್ಪಳ: ಸ್ವಾತಂತ್ರ್ಯ ಹೋರಾಟಗಾರ, ವಿಮೋಚನಾ ಚಳವಳಿಯ ಮುಂದಾಳು, ನಿವೃತ್ತ ಶಿಕ್ಷಕ ಶರಣಬಸವರಾಜ ಹದ್ದಿ ಬಿಸರಳ್ಳಿ (94) ಅವರು ಭಾನುವಾರ ಹುಬ್ಬಳ್ಳಿಯಲ್ಲಿ ತಮ್ಮ ಪುತ್ರನ ಮನೆಯಲ್ಲಿ ನಿಧನರಾದರು.

ಅವರಿಗೆ ಐವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ ಗ್ರಾಮದಲ್ಲಿ ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿತು.

ಬಿಸರಳ್ಳಿ ಅವರು 84ನೇ ವಯಸ್ಸಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದರು. ಸತತ ಅಧ್ಯಯನಶೀಲರಾಗಿದ್ದ ಅವರು ಸಾಹಿತ್ಯ ಕೃತಿಗಳನ್ನೂ ರಚಿಸಿದ್ದರು. ತಮ್ಮ ಹೆಸರಿನಲ್ಲಿ ಟ್ರಸ್ಟ್ ರಚಿಸಿ ಅದರ ಮೂಲಕ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದರು.

ಪಾಟೀಲ್ ದೊಡ್ಡನಗೌಡ

ಬಳ್ಳಾರಿ: ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ, ತಾಲ್ಲೂಕಿನ ಚೆಳ್ಳಗುರ್ಕಿ ಗ್ರಾಮದ ಮುಖಂಡ ಪಾಟೀಲ್ ದೊಡ್ಡನಗೌಡ (93) ಭಾನುವಾರ ಬೆಳಿಗ್ಗೆ ನಿಧನರಾದರು.

ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಲು ನಡೆದ ಹೋರಾಟದಲ್ಲಿ ಭಾಗವಹಿಸಿದ್ದ ಪಾಟೀಲ್ ದೊಡ್ಡನಗೌಡ ಜೈಲು ವಾಸ ಅನುಭವಿಸಿದ್ದರು. ಇವರ ನಿಧನದಿಂದ ಏಕೀಕರಣ ಹೋರಾಟದ ಮತ್ತೊಂದು ಕೊಂಡಿ ಕಳಚಿದಂತಾಗಿದೆ.

ಮೃತರು ಪತ್ನಿ, ನಾಲ್ವರು ಪುತ್ರರು ಮತ್ತು ಒಬ್ಬರು ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಸುಳ್ಳುಗಾರನ ಮಾತಿಗೆ ಪ್ರತಿಕ್ರಿಯೆ ನೀಡಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಎಚ್.ಡಿ. ಕುಮಾರಸ್ವಾಮಿ ಸುಳ್ಳುಗಾರ, ಅವರ ಹೇಳಿಕೆಗೆ ಮಹತ್ವ ಕೊಡುವ ಅಗತ್ಯವಿಲ್ಲವೆಂದು ತೀರ್ಮಾನಿಸಿದ್ದೇನೆ. ಸುಳ್ಳುಗಾರನ ಮಾತಿಗೆ ಪ್ರತಿಕ್ರಿಯಿಸುವುದಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಮುಸ್ಲಿಂ ನಾಯಕರನ್ನು ಹತ್ತಿಕ್ಕುತ್ತಿದ್ದಾರೆ ಎನ್ನುವ ಕುಮಾರಸ್ವಾಮಿ ಆರೋಪಕ್ಕೆ ಭಾನುವಾರ ನಗರದಲ್ಲಿ ಪ್ರತಿಕ್ರಿಯಿಸಿದ ಅವರು 'ಕುಮಾರಸ್ವಾಮಿ ಯಾವಾಗಲೂ ಹಿಟ್ ಅಂಡ್ ರನ್ ಹೇಳಿಕೆಗಳನ್ನು ಕೊಡುತ್ತಾರೆ. ಕಾಂಗ್ರೆಸ್ ಅಲ್ಪಸಂಖ್ಯಾತರ ಪರ ಎಂದು ನಾವು ಯಾರ ಮುಂದೆಯೂ ಸಾಬೀತು ಮಾಡಬೇಕಿಲ್ಲ. ಅದಕ್ಕೆ ಪಕ್ಷದ ಅಲ್ಪಸಂಖ್ಯಾತ ನಾಯಕರೇ ಉತ್ತರ ಕೊಡುತ್ತಾರೆ' ಎಂದರು.

'ಉಪಚುನಾವಣೆಯಲ್ಲಿ ಪ್ರಚಾರಕ್ಕೆ ಬರಬೇಡಿ ಎಂದು ಸಿ.ಎಂ. ಇಬ್ರಾಹಿಂ ಅವರಿಗೆ ಯಾರೂ ಹೇಳಿಲ್ಲ. ಇದು ಪಕ್ಷದ ಕೆಲಸ. ಮುಂದಿನ ದಿನಗಳಲ್ಲಿ ಪ್ರಚಾರಕ್ಕೆ ಬರಬಹುದು' ಎಂದರು.

'ಉಪಚುನಾವಣೆ ಬಳಿಕ ಇಂಧನದ ಮೇಲಿನ ತೆರಿಗೆ ಪರಿಷ್ಕರಣೆಗಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ಅವಲೋಕಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ 'ಡೀಸೆಲ್ ಬೆಲೆ ಮತ್ತೆ ಏರಿಕೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೆರಿಗೆ ಇಳಿಕೆ ಮಾಡಬೇಕು. ಬೊಮ್ಮಾಯಿ ಮೈಕ್ರೊಸ್ಕೋಪ್ ಹಾಕಿಕೊಂಡು ರಾಜ್ಯದ ಆರ್ಥಿಕ ಪರಿಸ್ಥಿತಿ ನೋಡುತ್ತಾರೆಯೇ' ಎಂದು ಚಾಟಿ ಬೀಸಿದರು.

ನನ್ನಂಥ ಹುಲುಮಾನವರನ್ನು ಬಿಡುತ್ತಾರೆಯೇ?– ಸಿದ್ದರಾಮಯ್ಯ

ಬೆಂಗಳೂರು: 'ಮಹಾತ್ಮರ ಬೆನ್ನು ಬಿಡದ ಟೀಕಾಕಾರರು ನನ್ನಂಥ ಹುಲುಮಾನವರನ್ನು ಬಿಡುತ್ತಾರೆಯೇ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಮಹಾತ್ಮ ಗಾಂಧೀಜಿ ಅವರನ್ನು ಹಿಂದೂ ವಿರೋಧಿ ಎನ್ನುತ್ತಿದ್ದ ಹಿಂದೂಗಳು, ದಲಿತ ವಿರೋಧಿ ಎನ್ನುತ್ತಿದ್ದ ದಲಿತರು, ಮುಸ್ಲಿಮ್ ವಿರೋಧಿ ಎನ್ನುತ್ತಿದ್ದ ಮುಸ್ಲಿಮರು ಇದ್ದರು. ಮಹಾತ್ಮರ ಬೆನ್ನು ಬಿಡದ ಟೀಕಾಕಾರರು ನನ್ನಂಥ ಹುಲುಮಾನವರನ್ನು ಬಿಡುತ್ತಾರೆಯೇ?' ಎಂದಿದ್ದಾರೆ. ಅಷ್ಟೇ ಅಲ್ಲದೆ, 'ಸಬ್ ಕೋ ಸನ್ಮತಿ ದೇ ಭಗವಾನ್' ಎಂಬ ಮಾತನ್ನು ಉಲ್ಲೇಖಿಸಿದ್ದಾರೆ.

ಚಿತ್ರದುರ್ಗ: ಪೋಷಕರಿಗೆ ವಿಷವಿಟ್ಟು ಕೊಂದ ಬಾಲಕಿ

ಚಿತ್ರದುರ್ಗ: ತಾಲ್ಲೂಕಿನ ಇಸಾಮುದ್ರ ಗ್ರಾಮದಲ್ಲಿ ವಿಷಪೂರಿತ ಆಹಾರ ಸೇವಿಸಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದ ಘಟನೆಯನ್ನು ಪೊಲೀಸರು ಭೇದಿಸಿದ್ದಾರೆ. ಮಕ್ಕಳಿಗೆ ತೋರುವ ಪ್ರೀತಿ–ವಾತ್ಸಲ್ಯದಲ್ಲಿ ಆಗಿರುವ ತಾರತಮ್ಯದಿಂದಾಗಿ ಪುತ್ರಿಯೇ ವಿಷವಿಟ್ಟು ಪೋಷಕರನ್ನು ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

ಘಟನೆ ನಡೆದು ಮೂರು ತಿಂಗಳ ಬಳಿಕ ಕೊಲೆಯ ರಹಸ್ಯ ಬಯಲಾಗಿದೆ. 17 ವರ್ಷದ ಬಾಲಕಿಯನ್ನು ಪೊಲೀಸರು ವಶಕ್ಕೆ ಪಡೆದು ಬಾಲಕಿಯರ ಬಾಲಮಂದಿರಕ್ಕೆ ಹಸ್ತಾಂತರಿಸಿದ್ದಾರೆ. ಮುದ್ದೆಯಲ್ಲಿ ಬೆರೆತಿದ್ದ ಕೀಟನಾಶಕ ಸಾವಿಗೆ ಕಾರಣವಾಗಿದೆ ಎಂಬುದು ದೃಢಪಟ್ಟಿದೆ.

ಇಸಾಮುದ್ರ ಲಂಬಾಣಿಹಟ್ಟಿ ಗ್ರಾಮದ ನಾಲ್ವರು ಮೃತಪಟ್ಟ ಘಟನೆ ಜುಲೈ 12ರಂದು ನಡೆದಿತ್ತು. ಬಾಲಕಿಯ ತಂದೆ ತಿಪ್ಪಾನಾಯ್ಕ (45), ತಾಯಿ ಸುಧಾಬಾಯಿ (40), ಅಜ್ಜಿ ಗುಂಡಿಬಾಯಿ (80) ಹಾಗೂ ಸಹೋದರಿ ರಮ್ಯಾ (16) ಮೃತಪಟ್ಟಿದ್ದರು. ತೀವ್ರವಾಗಿ ಅಸ್ವಸ್ಥಗೊಂಡಿದ್ದ ರಾಹುಲ್ (19) ಚಿಕಿತ್ಸೆಯ ಬಳಿಕ ಚೇತರಿಸಿಕೊಂಡಿದ್ದ. ಕೊಲೆ ಆರೋಪ ಎದುರಿಸುತ್ತಿರುವ ಬಾಲಕಿ ಮುದ್ದೆ ಸೇವಿಸಿರಲಿಲ್ಲ.

'ಕುಟುಂಬದ ಸದಸ್ಯರು ಸೇವಿಸಿದ್ದ ಮುದ್ದೆ, ಅನ್ನ–ಸಾರು, ಇದಕ್ಕೆ ಬಳಕೆ ಮಾಡಿದ ಪದಾರ್ಥ ಹಾಗೂ ಪಾತ್ರೆಗಳನ್ನು ದಾವಣಗೆರೆಯ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಮುದ್ದೆಯಲ್ಲಿ ಕ್ರಿಮಿನಾಶಕ ಬೆರೆತಿರುವ ಸಂಗತಿ ಪ್ರಯೋಗಾಲಯದ ವರದಿಯಿಂದ ಗೊತ್ತಾಯಿತು. ವಿಷ ಬೆರೆಸಿ ಕೊಲೆ ಮಾಡಿದ ಆಯಾಮದಿಂದ ತನಿಖೆ ನಡೆಸಿದಾಗ ರಹಸ್ಯ ಬೆಳಕಿಗೆ ಬಂದಿತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

> **ಅನುಮಾನಾಸ್ಪದವಾಗಿ ನಡೆದುಕೊಳ್ಳುತ್ತಿದ್ದ ಬಾಲಕಿಯನ್ನು ವಿಚಾರಣೆಗೆ ಒಳಪಡಿಸಿದಾಗ ಕೊಲೆಯ ರಹಸ್ಯ ಬೆಳಕಿಗೆ ಬಂದಿತು**
>
> **ಜಿ.ರಾಧಿಕಾ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಒಳನೋಟ

ಕಂಟಕವಾದ ಸಾಲ

ಬೆಂಗಳೂರು: 'ಬಲಾಢ್ಯರದ್ದೇ ಸವಾರಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಅ.17) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಅಕ್ರಮಗಳಿಗೆ ಕಡಿವಾಣ ಹಾಕಿ



ಬಡವರು ಮತ್ತು ಗ್ರಾಮೀಣ ಭಾಗದ ಕೃಷಿ ಉತ್ಪಾದನೆಗೆ ಬೆನ್ನೆಲುಬಾಗಿರುವ ಸಹಕಾರಿ ಬ್ಯಾಂಕುಗಳನ್ನು ಬಲಾಢ್ಯರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವುದು ಬೇಸರದ ಸಂಗತಿ. ಸಹಕಾರಿ ಕ್ಷೇತ್ರದ ರಾಜಕಾರಣಿಗಳು ಹಾಗೂ ಶ್ರೀಮಂತರ ಅಕ್ರಮಗಳಿಗೆ ಕೈಜೋಡಿಸದೆ, ಪಾರದರ್ಶಕವಾಗಿ ಕೆಲಸ ಮಾಡಬೇಕು. ಸಹಕಾರಿ ವಲಯವನ್ನು ದುರ್ಬಳಕೆ ಮಾಡಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

ಮಹ್ಮದ್ ಯುನುಸ್, ಯಾದಗಿರಿ

ಕಪ್ಪು ಹಣ ಮರೆಮಾಚುವ ಉಪಾಯ

ಬಂಡವಾಳಶಾಹಿಗಳು ಹಾಗೂ ಅಧಿಕಾರದಲ್ಲಿರುವ ರಾಜಕೀಯ ಮುಖಂಡರು ರಾಜ್ಯದ ಬಹುತೇಕ ಸಹಕಾರಿ ಬ್ಯಾಂಕುಗಳಲ್ಲಿ ಕೋಟ್ಯಂತರ ಹಣ ಸಾಲ ಪಡೆದು, ತಮ್ಮ ಕಪ್ಪುಹಣ ಮರೆಮಾಚಲು ಉದ್ದಿಮೆಗಳನ್ನು ನಡೆಸುತ್ತಿದ್ದಾರೆ. ಇದರಿಂದ ಅರ್ಹರಿಗೆ ಯಾವುದೇ ರೀತಿಯಲ್ಲಿ ಸಾಲ ಸಿಗದಂತೆ ಮಾಡುತ್ತಿದ್ದಾರೆ. ಸಹಕಾರಿ ಕ್ಷೇತ್ರದ ಉದ್ದಿಮೆಗಳನ್ನು ರಕ್ಷಿಸಿ, ಬ್ಯಾಂಕುಗಳ ಹಣ ಉಳ್ಳವರ ಪಾಲಾಗದಂತೆ ಗಮನಹರಿಸಬೇಕಿದೆ. ಅದಕ್ಕಾಗಿ ಉನ್ನತ ಮಟ್ಟದ ಸಮಿತಿ ರಚನೆಯಾಗಬೇಕು. ಆಗ ಮಾತ್ರ ಬ್ಯಾಂಕುಗಳ ಹಣ ಸದುಪಯೋಗ ಆಗುವ ಜೊತೆಗೆ ಕಪ್ಪುಹಣ ಉಳ್ಳವರಿಗೆ ಲಗಾಮು ಹಾಕಬಹುದು.

ಶಿವಾನಂದ, ಬೆಳಗಾವಿ

ಅಸಹಾಯಕರಿಗೆ ಮಾತ್ರ ಕಾನೂನು

ರೈತರು ಸಹಕಾರ ಸಂಘಗಳಿಂದ ಸಾಲ ಪಡೆದು, ಕಷ್ಟಪಟ್ಟು ಬೆಳೆದ ಫಸಲಿಗೆ ಸರಿಯಾದ ಬೆಲೆ ಸಿಗದಿದ್ದಾಗ, ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೂ ಸಾಲ ಮರುಪಾವತಿ ಹೆಸರಿನಲ್ಲಿ ರೈತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಪ್ರಭಾವಿಗಳಿಗೆ ಸರಿಯಾದ ದಾಖಲೆಗಳು ಇಲ್ಲದಿದ್ದರೂ ಕೋಟಿಗಟ್ಟಲೆ ಹಣವನ್ನು ಅವರ ಮನೆ ಬಾಗಿಲಿಗೆ ತಲುಪಿಸುತ್ತವೆ. ಅವರು ಪಲಾಯನವಾದರೂ ಕ್ರಮ ಕೈಗೊಳ್ಳುವುದಿಲ್ಲ. ಜನಸಾಮಾನ್ಯರಿಗೆ ಮಾತ್ರ ಇರುವ ಕಾನೂನುಗಳು ಪ್ರಭಾವಿ–ಬಲಾಢ್ಯರಿಗಿಲ್ಲ.

ವರದರಾಜನ್, ಬೆಂಗಳೂರು

ಆಪ್ತರಿಗಾಗಿ ಇರುವ ಬ್ಯಾಂಕುಗಳು

ಸಹಕಾರಿ ಸಂಸ್ಥೆಗಳಿಂದ ಬಡ ರೈತರಿಗೆ ಯಾವ ಅನುಕೂಲಗಳೂ ಇಲ್ಲ. ಸಹಕಾರ ಇಲಾಖೆಯ ಅಧಿಕಾರಿಗಳು ಹಾಗೂ ಸಂಸ್ಥೆಗಳ ಪದಾಧಿಕಾರಿಗಳು ಸೇರಿ ಕಮಿಷನ್ ಆಧಾರದ ಮೇಲೆ ಸಾಲ ಕೊಡಿಸಿ, ಲೆಕ್ಕಗಳನ್ನು ತಿರುಚುತ್ತಾರೆ. ಈ ಪರಿಸ್ಥಿತಿಯಲ್ಲಿ ಸಹಕಾರ ಬ್ಯಾಂಕುಗಳಿಂದ ಬಡವರು ಹೇಗೆ ಅಭಿವೃದ್ಧಿ ಹೊಂದುತ್ತಾರೆ? ಆಪ್ತರನ್ನು ಉದ್ಧಾರಗೊಳಿಸಲು ಇರುವ ಸಹಕಾರಿ ಬ್ಯಾಂಕುಗಳಿಂದ ಇಲ್ಲದವರಿಗೆ ಅನ್ಯಾಯ ತಪ್ಪುತ್ತಿಲ್ಲ.

ಮಲ್ಲೇಶ್, ಬಳ್ಳಾರಿ

ಕಳ್ಳರಿಗಿಲ್ಲ ಶಿಕ್ಷೆ

ಸಹಕಾರಿ ಬ್ಯಾಂಕುಗಳು ಉಳ್ಳವರ ಪಾಲಾಗುತ್ತಿವೆ. ರೈತರ ಮೂಗಿಗೆ ತುಪ್ಪ ಸವರಿ, ರಾಜಕಾರಣಿಗಳು ಅನ್ಯಮಾರ್ಗ ಬಳಸಿ ಕೋಟ್ಯಂತರ ಹಣ ಸಾಲ ಪಡೆಯುತ್ತಿದ್ದಾರೆ. ಆದರೆ, ಯಾರೊಬ್ಬರೂ ಸಾಲ ತೀರಿಸಿರುವ ಉದಾಹರಣೆಗಳು ಇಲ್ಲ. ಹೀಗೆ ಬೇಲಿಯೇ ಎದ್ದು ಹೊಲ ಮೇಯ್ದರೆ, ಸರ್ಕಾರದ ಖಜಾನೆ ಖಾಲಿಯಾಗದೆ ಇನ್ನೇನಾಗುತ್ತದೆ?.

ಶಿವಕುಮಾರ್, ದಾವಣಗೆರೆ

ಪದಾಧಿಕಾರಿಗಳೇ ಫಲಾನುಭವಿಗಳು

ಸಹಕಾರಿ ಬ್ಯಾಂಕುಗಳಿರುವುದು ಅವುಗಳ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ಅನುಕೂಲಕ್ಕಾಗಿಯೇ ಹೊರತು, ನಿಜವಾದ ಫಲಾನುಭವಿಗಳಾದ ರೈತರಿಗಾಗಿ ಅಲ್ಲವೇ ಅಲ್ಲ. ಈ ಬ್ಯಾಂಕುಗಳಲ್ಲಿ ರೈತರ ಹೆಸರಿನಲ್ಲಿ ಠೇವಣಿ ಮಾಡಿಸಿಕೊಳ್ಳುತ್ತಾರೆ. ರೈತರ ಹೆಸರಿನಲ್ಲಿ ಹಣ ಲಪಟಾಯಿಸುವವರು ಬ್ಯಾಂಕಿನ ವ್ಯವಸ್ಥಾಪಕರೇ ಆಗಿರುತ್ತಾರೆ.

ಮಂಜು ಪ್ರಸಾದ್, ಮೈಸೂರು

ಕಲಿಯುವ ಹಂಬಲ ಇದ್ದವರಿಗೆ ಕಲಿಕೆ ಎನ್ನುವುದು ಸಾಗರವಿದ್ದಂತೆ

ಶಿಕ್ಷಣ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಆತ್ಮವಿಶ್ವಾಸವು ಭರವಸೆಯನ್ನು ಹುಟ್ಟಿಸುತ್ತದೆ. ಭರವಸೆಯು ಶಾಂತಿಯನ್ನು ಹುಟ್ಟುಹಾಕುತ್ತದೆ.

ಮನೆಯಲ್ಲಿಯೇ ಕಲಿಸಿ ಭೂಗೋಳ

ಮಕ್ಕಳಿಗೆ ಕಲೆ, ಸಂಗೀತ, ಹಾಗೂ ಇತರ ವಿಷಯಗಳನ್ನು ಮನೆಯಲ್ಲೇ ಕಲಿಯಲು ಉತ್ತೇಜಿಸುವಂತೆ ಭೂಗೋಳ ಕಲಿಕೆಯಲ್ಲಿ ಆಸಕ್ತಿ ಮೂಡಿಸಲು ಸಾಕಷ್ಟು ಅವಕಾಶಗಳಿವೆ. ಕೆಲವು ಮೋಜಿನ ಚಟುವಟಿಕೆಗಳ ಮೂಲಕವೂ ಭೂಗೋಳವನ್ನು ಸುಲಭವಾಗಿ ಮನೆಯಲ್ಲಿಯೇ ಕಲಿಸಬಹುದು.

ಆರ್.ಬಿ. ಗುರುಬಸವರಾಜ

ಮಗು ನಿತ್ಯವೂ ತನ್ನ ಪರಿಸರದ ಅನೇಕ ವಿದ್ಯಮಾನಗಳನ್ನು ನೋಡುತ್ತಾ, ಕಲಿಯುತ್ತಾ ಬೆಳೆಯುತ್ತದೆ. ಈ ವಿದ್ಯಮಾನಗಳಿಂದ ಮಗುವಿನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಎದುರಾಗುವುದು ಸಹಜ. ಮಳೆ ಬರುವುದು, ಬಿಸಿಲು ಬೀಳುವುದು, ಕಾಮನಬಿಲ್ಲು ಮೂಡುವುದು, ಗ್ರಹಣಗಳಾಗುವುದು, ಹುಣ್ಣಿಮೆ ಮತ್ತು ಅಮಾವಾಸ್ಯೆಗಳು, ಋತುಗಳ ಬದಲಾವಣೆಯಿಂದ ಕಾಲ ಮತ್ತು ವರ್ಷಗಳ ಬದಲಾವಣೆ ಹೀಗೆ ಅನೇಕ ವಿದ್ಯಮಾನಗಳು ಮಗುವಿನ ಗಮನಕ್ಕೆ ಬರುತ್ತವೆ. ಪ್ರತಿದಿನವೂ ಸೂರ್ಯೋದಯ ಮತ್ತು ಸೂರ್ಯಾಸ್ತ ನೋಡುವ ಮಗುವಿಗೆ ಎಷ್ಟೊಂದು ಸೂರ್ಯರಿರಬಹುದು ಎಂಬ ಪ್ರಶ್ನೆ ಮೂಡದೇ ಇರದು. ನಿತ್ಯ ಪರಿಸರವನ್ನು ಗಮನಿಸುವ ಮಗು ಇಂತಹ ಪ್ರಶ್ನೆಗಳ ಮೂಟೆಯನ್ನು ಹೊತ್ತುಕೊಂಡು ತಿರುಗಾಡುತ್ತದೆ. ಇದಕ್ಕೆ ಸೂಕ್ತ ಉತ್ತರಗಳು ಮನೆಯಲ್ಲಿ ಸಿಗಬಹುದು ಅಥವಾ ಸಿಗದೇ ಇರಬಹುದು. ಮಗುವಿನಲ್ಲಿನ ಇಂತಹ ಪ್ರಶ್ನೆಗಳಿಗೆ ಬಹುತೇಕ ಪಾಲಕರು ಉತ್ತರ ಹೇಳುವಲ್ಲಿ ವಿಫಲರಾಗುವುದು ಸಹಜ. ಆದರೆ ಇಂತಹ ಮೂಲಭೂತ ಪ್ರಶ್ನೆಗಳಿಗೆ ಸರಿಯಾದ ಉತ್ತರ ದೊರೆತಾಗ ಮಾತ್ರ ಮಗು ಭೂಗೋಳ ವಿಷಯದಲ್ಲಿ ಆಸಕ್ತಿ ವಹಿಸುತ್ತದೆ.

ಮಕ್ಕಳಿಗೆ ನೇರವಾಗಿ ಭೂಗೋಳವನ್ನು ಕಲಿಸಲು ಸಾಧ್ಯವಿಲ್ಲ. ಪರಿಸರದಲ್ಲಿನ ಚಿಕ್ಕ ಚಿಕ್ಕ ಘಟನೆಗಳು ಮತ್ತು ವಿದ್ಯಮಾನಗಳ ಮೂಲಕವೇ ಭೂಗೋಳ ಕಲಿಸಲು ಸಾಕಷ್ಟು ಅವಕಾಶಗಳಿವೆ. ಪ್ರಾರಂಭದಲ್ಲಿ ಮಗು ತನ್ನ ಪರಿಸರದಲ್ಲಿ ಬೆಳೆಯುವ ಗಿಡಮರಗಳ ಪರಿಚಯ ಮಾಡಿಕೊಂಡರೆ ಮಾತ್ರ ಹೊರದೇಶಗಳ ಗಿಡಮರಗಳ ಬಗ್ಗೆ ಆಸಕ್ತಿ ತಳೆಯಲು ಸಾಧ್ಯ. ತಾನು ವಾಸಿಸುವ ಮಣ್ಣಿನ ಗುಣ ಮತ್ತು ಅದರಲ್ಲಿನ ಬೆಳೆಯುವ ಬೆಳೆಗಳನ್ನು ತಿಳಿದುಕೊಂಡರೆ ಮಾತ್ರ ಇನ್ನಿತರೇ ಪ್ರದೇಶಗಳ ಮಣ್ಣು ಮತ್ತು ಬೆಳೆಗಳ ಬಗ್ಗೆ ತಾನೇ ತಾನಾಗಿ ಕಲಿಯಲು ಆಸಕ್ತಿ ವಹಿಸುತ್ತದೆ. ಹಾಗಾಗಿ ಪಾಲಕರಾದ ನಾವು ಮಕ್ಕಳಿಗೆ ನಾವು ವಾಸಿಸುವ ಪರಿಸರ ಮತ್ತು ಪ್ರಾದೇಶಿಕ ಸಂಪನ್ಮೂಲಗಳನ್ನು ಅಂದರೆ ಹವಾಮಾನ, ವಾಯುಗುಣ, ಮಣ್ಣು, ಬೆಳೆಗಳು, ಖನಿಜಗಳು, ಕೈಗಾರಿಕೆಗಳು ಇಂತಹ ಭೂಗೋಳಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸಬೇಕು. ಆಗ ಮಕ್ಕಳಲ್ಲಿ ಭೂಗೋಳ ಕಲಿಕೆಯತ್ತ ಸ್ವಾಭಾವಿಕವಾದ ಆಸಕ್ತಿ ಮೂಡಿಬರುತ್ತದೆ.

ಜ್ಞಾನದ ಮೂಲವಾಗಿ ಭೂಗೋಳ

ಭೂಗೋಳ ಕಲಿಕೆಯು ಕೇವಲ ಭೂಮಿಯ ಆಕಾರ, ಗಾತ್ರದ ಕಲಿಕೆಯಲ್ಲ. ಇದು ಭೂಮ್ಯಾಕಾಶದ ಕಲಿಕೆ ಎನ್ನಬಹುದು. ಅಂದರೆ ಭೂಮಿಯ ಉಗಮಕ್ಕೆ ಕಾರಣವಾದ ಅಂಶಗಳಿಂದ ಅಂತರಿಕ್ಷದ ಗ್ರಹ, ತಾರೆಗಳವರೆಗಿನ ಅನೇಕ ಅಂಶಗಳ ಕಲಿಕೆ ಇಲ್ಲಿ ಅಡಕವಾಗಿರುತ್ತದೆ. ಭೂಗೋಳ ಕೇವಲ ಒಂದು ವಿಷಯವಲ್ಲ. ಅದು ವಿವಿಧ ಜ್ಞಾನಗಳ ಮೂಲ ಆಗರ. ಇಲ್ಲಿ ವಿಜ್ಞಾನ, ಸಮಾಜ ಅಧ್ಯಯನ, ಸಂಸ್ಕೃತಿ, ನೆಲ, ಜಲ, ಭಾಷೆ, ಕೃಷಿ, ಖನಿಜ ಸಂಪನ್ಮೂಲಗಳು, ಕೈಗಾರಿಕೊದ್ಯಮ, ತಂತ್ರಜ್ಞಾನ ಹೀಗೆ ಅನೇಕ ವಿಷಯಗಳು ಇದರಲ್ಲಿ ಅಂತರ್ಗತವಾಗಿವೆ. ಹಾಗಾಗಿ ಭೂಗೋಳ ಕಲಿಕೆಯಿಂದ ಮಕ್ಕಳಲ್ಲಿ ವಿವಿಧ ವಿಷಯಗಳ ಕಲಿಕೆಗೆ ಪೂರಕವಾದ ಮೂಲ ಜ್ಞಾನ ದೊರೆಯುತ್ತದೆ. ಭೂಗೋಳ ಕಲಿಕೆಯಿಂದ ಮಕ್ಕಳು ವಿವಿಧ ಭೌಗೋಳಿಕ ಪ್ರದೇಶದ ಜನರ ಜೀವನ ವಿಧಾನ ಮತ್ತು ಪದ್ಧತಿಗಳನ್ನು ತಿಳಿದು ಗೌರವಿಸುತ್ತಾರೆ. ನೈಜ ಅನುಭವದ ಆಧಾರದ ಮೇಲೆ ನೈಸರ್ಗಿಕ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳುತ್ತಾರೆ. ಸ್ಥಳೀಯ ಭೌಗೋಳಿಕ ಅವಲೋಕನ ವಿಧಾನಗಳಿಂದ ನಕ್ಷೆ, ಗ್ಲೋಬ್, ಅಟ್ಲಾಸ್ ಮುಂತಾದವುಗಳ ಬಳಕೆ ಮಾಡುತ್ತಾರೆ ಹಾಗೂ ಅವುಗಳಿಂದ ಹೆಚ್ಚು ಹೆಚ್ಚು ಜ್ಞಾನ ಸಂಪಾದಿಸಿಕೊಳ್ಳುತ್ತಾರೆ.

ಹೇಗೆ ಕಲಿಸಬಹುದು?

ಕಲೆ, ಸಂಗೀತ, ಹಾಗೂ ಇನ್ನಿತರೇ ವಿಷಯಗಳನ್ನು ಮನೆಯಲ್ಲೇ ಕಲಿಯಲು ಉತ್ತೇಜಿಸುವಂತೆ ಭೂಗೋಳ ಕಲಿಕೆಯನ್ನು ಉತ್ತೇಜಿಸಲು ವಿಪುಲ ಅವಕಾಶಗಳಿವೆ. ಕೆಲವು ಮೋಜಿನ ಚಟುವಟಿಕೆಗಳ ಮೂಲಕವೂ ಭೂಗೋಳವನ್ನು ಸುಲಭವಾಗಿ ಮನೆಯಲ್ಲಿಯೇ ಕಲಿಸಬಹುದು. ಅಂತಹ ಕೆಲವು ಚಟುವಟಿಕೆಗಳ ಕಿರುನೋಟ ಇಲ್ಲಿದೆ.

ಹಾಡುಗಳು: ಮಕ್ಕಳಿಗೆ ಹಾಡುಗಳೆಂದರೆ ಪಂಚಪ್ರಾಣ. ಭೂಗೋಳದ ಪ್ರಾಥಮಿಕ ವಿಷಯಗಳಾದ ಸೂರ್ಯ, ಗ್ರಹಗಳು, ನಕ್ಷತ್ರಗಳು, ಸೌರವ್ಯೂಹ, ಮಳೆ, ವಾಯುಮಂಡಲ ಮುಂತಾದ ಪರಿಕಲ್ಪನೆಗಳನ್ನು ಹಾಡುಗಳ ಮೂಲಕ ಕಲಿಸಿದರೆ ಮಕ್ಕಳು ಸುಲಭವಾಗಿ ಭೂಗೋಳದಲ್ಲಿ ಆಸಕ್ತಿ ವಹಿಸುವರು. ಜನಪದ ಹಾಡುಗಳಲ್ಲಿ ಭೂಗೋಳ ವಿಷಯ ಕುರಿತ ಸಾಕಷ್ಟು ಹಾಡುಗಳಿವೆ. ಅವುಗಳನ್ನು ಬಳಸಿಕೊಂಡು ಭೂಗೋಳವನ್ನು ಹಾಡುಗಳ ಮೂಲಕ ಕಲಿಸಬಹುದು.

ಒಗಟುಗಳು: ಒಗಟು ಮಕ್ಕಳಿಗೆ ಖುಷಿಯ ಚಟುವಟಿಕೆ. ಒಗಟುಗಳ ಮೂಲಕ ಭೂಗೋಳದ ಪರಿಕಲ್ಪನೆಗಳನ್ನು ಕಲಿಸಬಹುದು. ಮನೆಯಲ್ಲಿನ ಹಿರಿಯರ ಬಳಿ ಒಗಟುಗಳ ಖಜಾನೆ ಇದ್ದೇ ಇರುತ್ತದೆ. ಇದನ್ನು ಬಳಸಿ ಮಕ್ಕಳಿಗೆ ಭೂಗೋಳ ಕಲಿಸಲು ಅವಕಾಶವಿದೆ. ಅಲ್ಲದೇ ವಿವಿಧ ಜಾಲತಾಣಗಳಲ್ಲಿಯೂ ಒಗಟುಗಳು ಲಭ್ಯ ಇವೆ. ಅವುಗಳನ್ನು ಬಳಸಿ ಕಲಿಸಬಹುದು.

ನಕ್ಷೆ, ಗ್ಲೋಬ್ ಮತ್ತು ಅಟ್ಲಾಸ್: ಪ್ರತಿ ಮನೆಯಲ್ಲಿಯೂ ಕನಿಷ್ಠ ನಾಲ್ಕಾರು ನಕ್ಷೆಗಳು, ಒಂದು ಗ್ಲೋಬ್ ಹಾಗೂ ಒಂದು ಅಟ್ಲಾಸ್ ಇದ್ದರೆ ಮಕ್ಕಳ ಕಲಿಕೆಯ ಆಯಾಮ ವಿಭಿನ್ನವಾಗಿರುತ್ತದೆ. ಮಕ್ಕಳು ತಮಗೆ ಬೇಕಾದಾಗ ಬೇಕಾದ ಸ್ಥಳಗಳನ್ನು ಗ್ಲೋಬ್ ಮತ್ತು ಅಟ್ಲಾಸ್ ಬಳಸಿ ಹುಡುಕಬಹುದು. ಗ್ಲೋಬ್ ಬಳಕೆಯಿಂದ ಯಾವ ಯಾವ ದಿಕ್ಕುಗಳಲ್ಲಿ ಯಾವ ಯಾವ ಸ್ಥಳಗಳಿವೆ, ಸ್ಥಳಗಳ ನಡುವಿನ ಪರಸ್ಪರ ದೂರ ಎಷ್ಟು ಎಂಬುದು ಮಕ್ಕಳಿಗೆ ಖಚಿತವಾಗುತ್ತದೆ. ನಕ್ಷೆಗಳ ಮೂಲಕವೂ ಮಕ್ಕಳ ಸಾಕಷ್ಟು ಪ್ರದೇಶಗಳ ಮಾಹಿತಿಯನ್ನು ಕಲಿಯುವರು. ನಕ್ಷೆ, ಗ್ಲೋಬ್ ಮತ್ತು ಅಟ್ಲಾಸ್‌ಗಳಿಂದ ವಿವಿಧ ಸ್ಥಳಗಳ ಭೌತಿಕ ಲಕ್ಷಣಗಳನ್ನು, ಜನಜೀವನವನ್ನು ಕಲಿಯಲು ಸುಲಭವಾಗುತ್ತದೆ.

ನಕ್ಷೆ ತಯಾರಿಕೆ: ಮಕ್ಕಳು ತಮ್ಮ ಪ್ರದೇಶದ ನಕ್ಷೆ ಬಿಡಿಸುವುದರಿಂದಲೂ ಸಾಕಷ್ಟು ಭೂಗೋಳದ ಮಾಹಿತಿಯನ್ನು ಕಲಿಯಲು ಅವಕಾಶವಿದೆ. ನಕ್ಷೆಯಲ್ಲಿ ಗಡಿಗಳು, ಭೌತಿಕ ಸಂಪನ್ಮೂಲಗಳು, ನೈಸರ್ಗಿಕ ಲಕ್ಷಣಗಳಾದ ಗುಡ್ಡ, ಬೆಟ್ಟ, ಪರ್ವತ, ಕಾಡು, ಕೆರೆ, ನದಿ, ಸಾಗರ, ಬೆಳೆಗಳು, ಕೈಗಾರಿಕೆಗಳು, ರಸ್ತೆಗಳು, ಸಾರಿಗೆ ವ್ಯವಸ್ಥೆ, ಇತ್ಯಾದಿ ಮಾಹಿತಿಗಳನ್ನು ಗುರುತಿಸುವ ಹಾಗೂ ಅದನ್ನು ವಿಶ್ಲೇಷಿಸುವ ಕೌಶಲ ಗಳಿಸುವರು. ಹೀಗೆ ವೈವಿಧ್ಯಮಯ ಭೌತಿಕ ಚಟುವಟಿಕೆಗಳ ಮೂಲಕ ಭೂಗೋಳವನ್ನು ಕಲಿಸಲು ಅವಕಾಶವಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಪೋಷಕರು ಗಣಿತ, ವಿಜ್ಞಾನದಂತಹ ಕೆಲವು ನಿರ್ದಿಷ್ಟ ವಿಷಯಗಳಲ್ಲಿ ಮಾತ್ರ ಮಕ್ಕಳನ್ನು ಓದಲು ಪ್ರೇರೇಪಿಸುತ್ತಿದ್ದಾರೆ. ಇದೇ ವೇಳೆ ಕೆಲವು ಪ್ರಾಮುಖ್ಯವಾದ ವಿಷಯಗಳನ್ನು ಕಡೆಗಣಿಸುತ್ತಿದ್ದಾರೆ. ಅದರಲ್ಲಿ ಭೂಗೋಳವೂ ಒಂದು. ಆದರೆ ಪ್ರಾರಂಭಿಕ ಹಂತದಿಂದ ಭೂಗೋಳ ವಿಷಯ ಕಲಿಯಲು ಪ್ರೇರೇಪಿಸಿದರೆ ಇನ್ನುಳಿದ ವಿಷಯಗಳನ್ನು ಕಲಿಯಲು ಅವರೇ ಸ್ವಯಂ ಆಸಕ್ತಿ ಹೊಂದುವರು. ಪ್ರಾರಂಭಿಕ ಹಂತದಿಂದಲೇ ಭೂಗೋಳ ಕಲಿಕೆಯನ್ನು ಉತ್ತೇಜಿಸಿದರೆ ಅನುಭವಗಳ ಮೂಲಕವೇ ತಮ್ಮ ಜ್ಞಾನವನ್ನು ಕಟ್ಟಿಕೊಳ್ಳಲು ಮುಂದೆಬರುತ್ತಾರೆ. ಲೌಕಿಕ ಅರಿವನ್ನು ಪಡೆಯುತ್ತಲೇ ಇನ್ನಿತರೇ ವಿಷಯಗಳನ್ನು ಕಲಿಯಲು ಕುತೂಹಲ ವಹಿಸುತ್ತಾರೆ.

ಪದಬಂಧ ಹಾಗೂ ಚಿತ್ರಬಂಧ

ಪದಬಂಧ ಹಾಗೂ ಚಿತ್ರಬಂಧಗಳ ಮೂಲಕ ಭೂಗೋಳ ಕಲಿಸಬಹುದು. ಭೂಗೋಳಕ್ಕೆ ಸಂಬಂಧಿಸಿದ ನಿರ್ದಿಷ್ಟ ಪರಿಕಲ್ಪನೆಯಾಧಾರಿತ ಚಿತ್ರದ ತುಂಡುಗಳನ್ನು ನೀಡಿ ಅವುಗಳನ್ನು ಜೋಡಿಸುವ ಮತ್ತು ಅದರ ಬಗ್ಗೆ ಮಾತನಾಡುವ ಚಟುವಟಿಕೆ ನೀಡಬಹುದು. ಇಲ್ಲವೇ ಕೆಲವು ಭೂಗೋಳಕ್ಕೆ ಸಂಬಂಧಿಸಿದ ಪದಬಂಧ ತುಂಬುವ ಅಥವಾ ರಚಿಸುವ ಕೌಶಲ ಕಲಿಸಬಹುದು. ಕೆಲವು ಚಿತ್ರಗಳನ್ನು ತೋರಿಸಿ ಅದಕ್ಕೆ ಪೂರಕ ಮಾಹಿತಿ ಸಂಗ್ರಹಿಸುವ ಚಟುವಟಿಕೆ ನೀಡಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ನಿಕಾನ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021–22

- **ವಿವರ:** ಸಮಾಜದ ಅವಕಾಶ ವಂಚಿತ ವರ್ಗದ ವಿದ್ಯಾರ್ಥಿಗಳಿಂದ ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅರ್ಜಿಗಳನ್ನು ಆಹ್ವಾನಿಸಿದೆ. 12ನೇ ತರಗತಿ ಮುಗಿದ ಛಾಯಾಗ್ರಹಣ ಕೋರ್ಸ್ ಮಾಡುತ್ತಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷ ಮೀರಿರಬಾರದು.
- **ಆರ್ಥಿಕ ಸಹಾಯ:** ₹ 1 ಲಕ್ಷದವರೆಗೂ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 31 ಅಕ್ಟೋಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/NSP5

ಕೋವಿಡ್ ಕ್ರೈಸಿಸ್ (ಜ್ಯೋತಿ ಪ್ರಕಾಶ್) ಸಪೋರ್ಟ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

- **ವಿವರ:** ಕೋವಿಡ್ ಕಾರಣದಿಂದಾಗಿ ಆರ್ಥಿಕವಾಗಿ ತೊಂದರೆಗೆ ಒಳಗಾದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** 1ನೇ ತರಗತಿಯಿಂದ ಪದವಿವರೆಗಿನ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 2020 ನಂತರದಿಂದ ಕೋವಿಡ್‌ನಿಂದ ಪೋಷಕರನ್ನು ಅಥವಾ ದುಡಿಯುವ ಜೀವವನ್ನು ಕಳೆದುಕೊಂಡಿದ್ದರೆ, ಉದ್ಯೋಗ ಕಳೆದುಕೊಂಡಿದ್ದರೆ ಅಂಥ ಕುಟುಂಬದ ಮಕ್ಕಳು ಅರ್ಜಿ ಸಲ್ಲಿಸಬಹುದು.
- **ಆರ್ಥಿಕ ಸಹಾಯ:** ವಾರ್ಷಿಕವಾಗಿ ₹ 30 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 31 ಅಕ್ಟೋಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/CCSP1

ಸ್ವಯಂ ಉದ್ಯೋಗದ ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1 ಇತ್ತೀಚೆಗೆ ಅಂತಿಮ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗಕ್ಕೆ ಮಾರ್ಗಗಳು ಇವೆಯೇ?

– **ಶಿವರಾಜ ಎಂ.ಕೆ.,** ಗದಗ.

ಮುಂದಿನ ಭವಿಷ್ಯವನ್ನು ರೂಪಿಸಲು ಸ್ವಯಂ ಉದ್ಯೋಗ ಒಂದು ಶ್ಲಾಘನೀಯ ಮತ್ತು ಅನುಕರಣೀಯ ಮಾರ್ಗ. ನಿಮ್ಮ ಜ್ಞಾನ, ಕೌಶಲ, ಆಸಕ್ತಿ ಮತ್ತು ಅವಕಾಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಯಾವ ಉದ್ಯಮ ನಿಮಗೆ ಸೂಕ್ತ ಎಂದು ಮೊದಲು ಗುರುತಿಸಬೇಕು. ಹೆಚ್ಚು ಬಂಡವಾಳವಿಲ್ಲದ ಅನೇಕ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳ ಜೊತೆಗೆ ನವೋದ್ಯಮಗಳ (ಸ್ಟಾರ್ಟ್‌ಅಪ್) ಅವಕಾಶಗಳೂ ಹೇರಳವಾಗಿವೆ. ಗ್ರಾಹಕರ ಬೇಡಿಕೆ ಅಥವಾ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಒದಗಿಸುವ ಉತ್ಪನ್ನ ಅಥವಾ ಸೇವೆಯನ್ನು ಗುರುತಿಸುವುದು ಮತ್ತು ಉದ್ಯಮವನ್ನು ಸಮರ್ಪಕವಾಗಿ ನಿರ್ವಹಿಸುವುದು ಯಶಸ್ಸಿಗೆ ಪ್ರಮುಖ ಕಾರಣವಾಗುತ್ತದೆ.

ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಗೆ ಕಡಿವಾಣ ಹಾಕಲು ಮತ್ತು ಸ್ವಯಂ ಉದ್ಯೋಗಾಕಾಂಕ್ಷಿಗಳನ್ನು ಉತ್ತೇಜಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಮಾಜ ಕಲ್ಯಾಣ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳ ಅಡಿಯಲ್ಲಿ ಪಿಎಂಇಜಿಪಿ ಸೇರಿದಂತೆ ಅನೇಕ ಯೋಜನೆಗಳಿವೆ. ಕೌಶಲಾಭಿವೃದ್ಧಿ, ಸಾಲ, ಧನಸಹಾಯ ಇತ್ಯಾದಿ ಸರ್ಕಾರದ ಸೌಲಭ್ಯಗಳನ್ನು ನಿಮ್ಮ ಯೋಜನೆಗೆ ಅನುಗುಣವಾಗಿ ಉಪಯೋಗಿಸಿಕೊಳ್ಳಬೇಕು. ಇವೆಲ್ಲವನ್ನೂ ನೀವೇ ನಿರ್ವಹಿಸಲು ಕಷ್ಟವೆನಿಸಿದರೆ ಉದ್ಯಮ ಸಮಾಲೋಚಕರು ಅಥವಾ ಮಾರ್ಗದರ್ಶಕರ ಬೆಂಬಲವನ್ನು ಪಡೆಯಬಹುದು.

2 ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುತ್ತಿದ್ದೇನೆ. ಮುಂದೆ ಎಂಎಸ್ ಮಾಡುವಂತೆ ಪೋಷಕರು ಹೇಳುತ್ತಿದ್ದಾರೆ. ಮೆಕ್ಯಾನಿಕಲ್ ವಿದ್ಯಾರ್ಥಿಗಳಿಗೆ ಯಾವ ಎಂಎಸ್ ಕೋರ್ಸ್ ಇದೆ ಎಂಬುದರ ಕುರಿತು ನನಗೆ ಮಾಹಿತಿ ಇಲ್ಲ. ದಯ ಮಾಡಿ ಪತ್ಯ, ಕೋರ್ಸ್ ಬಗ್ಗೆ ಮಾಹಿತಿ ನೀಡಿ. ಭಾರತದಲ್ಲೇ ಎಂಎಸ್ ಮಾಡಬೇಕು ಎಂದಿದ್ದೇನೆ.

ದರ್ಶನ್ ಬಿ., ಊರು ತಿಳಿಸಿಲ್ಲ.

ಐಐಟಿ ಸೇರಿದಂತೆ ದೇಶದ ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಂಬಂಧಿತ ಎಂಎಸ್ ಕೋರ್ಸ್ ಮಾಡುವ ಅವಕಾಶಗಳಿವೆ. ಈ ಕೋರ್ಸ್ ಮಾಡಲು ಜಿಎಟಿಇ (ಗೇಟ್) ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://engineering.careers360.com/colleges/list-of-ms-in-mechanical-engineering-colleges-in-india

ಇದಲ್ಲದೆ, ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿಯ ನಂತರ ಎಂಇ ಅಥವಾ ಎಂಟೆಕ್ ಕೋರ್ಸ್ ಕೂಡಾ ಮಾಡಬಹುದು.

3 ಸರ್, ಪ್ರಾಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಕ್ಷೇತ್ರಗಳಲ್ಲಿನ ಅವಕಾಶಗಳೇನು? ಈ ಕೋರ್ಸ್‌ಗಳು ಭವಿಷ್ಯದಲ್ಲಿ ಉಪಯುಕ್ತವೇ?

ದೈವಿಕ್ ಎಂ., ಹಾಸನ.

ವೈದ್ಯಕೀಯ ವಿಜ್ಞಾನ ಒಂದು ವಿಸ್ತಾರವಾದ ಕ್ಷೇತ್ರ. ವಿಶೇಷವಾದ ಸಾಮರ್ಥ್ಯವಿರುವ ವ್ಯಕ್ತಿಗಳು ತಮ್ಮ ದೈನಂದಿನ ಕೆಲಸಗಳನ್ನು ನಿರ್ವಹಿಸಲು ನೆರವಾಗುವ ಪ್ರಾಸ್ಥೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಕ್ಷೇತ್ರದಲ್ಲಿ ವೃತ್ತಿಯನ್ನು ಬಯಸುವುದಾದರೆ, 4 ವರ್ಷದ ಬಿಪಿಒ ಕೋರ್ಸ ಅನ್ನು ಮಾಡಬೇಕು. ಕೋರ್ಸ್ ಮಾಡಿದ ನಂತರ, ಎರಡೂ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರಾಯೋಗಿಕ ತರಬೇತಿ ಇರುತ್ತದೆ. ಈ ಕೋರ್ಸ್ ನಂತರ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು, ಪುನರ್ವಸತಿ ಕೇಂದ್ರಗಳು, ಶುಶ್ರೂಷ ಕೇಂದ್ರಗಳಲ್ಲಿ ಉದ್ಯೋಗವನ್ನು ಅರಸಬಹುದು ಅಥವಾ ಇದೇ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಮಾಡಿ ಹೆಚ್ಚಿನ ತಜ್ಞತೆಯನ್ನು ಪಡೆದುಕೊಳ್ಳಬಹುದು. ಸದ್ಯಕ್ಕೆ ನಿಯಮಿತವಾದ ಬೇಡಿಕೆಯಿದ್ದರೂ ಭವಿಷ್ಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚು ಸೃಷ್ಟಿಯಾಗುವ ಲಕ್ಷಣಗಳಿವೆ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ:

https://www.careers360.com/careers/orthotist-and-prosthetist

4 ಸರ್, ನಾನು ಈ ವರ್ಷ ಎಂಜಿನಿಯರಿಂಗ್ (ಸಿವಿಲ್) ಮುಗಿಸಿದ್ದೇನೆ. ಬ್ಯಾಂಕ್ ಪರೀಕ್ಷೆಗಳ ಬಗ್ಗೆ ಮಾಹಿತಿ ತಿಳಿಸಿ.

ಕಿರಣ್, ಬೆಂಗಳೂರು.

ಪದವಿಯ ನಂತರ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಹುದ್ದೆಗಳಿಗೆ ಐಬಿಪಿಎಸ್ ಅಥವಾ ಆಯಾ ಬ್ಯಾಂಕ್ ನಡೆಸುವ ಅರ್ಹತಾ ಪರೀಕ್ಷೆಯ ಮುಖಾಂತರ ನೇಮಕಾತಿ ಆಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: https://www.collegedekho.com/articles/upcoming-bank-exams

5 ನನ್ನ ಎತ್ತರ 166.5 ಸೆ.ಮೀ ಇದೆ. ಹುದ್ದೆಗಳಿಗೆ 168 ಸೆ.ಮೀ. ಎತ್ತರ ಕಡ್ಡಾಯವೇ? ಹಾಗಾದರೆ ನಾನು ಕೆಎಸ್‌ಪಿ ಉದ್ಯೋಗಕ್ಕೆ ಅರ್ಹ ಅಲ್ಲವೇ? ನನ್ನ ವಿದ್ಯಾರ್ಹತೆ ಬಿಇ (ಮೆಕ್ಯಾನಿಕಲ್-2021).

ಸಂಜಯ್ ಕುಮಾರ್, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಕನಿಷ್ಠ 168 ಸೆ.ಮೀ. ಎತ್ತರ ಕಡ್ಡಾಯವಾಗಿರುತ್ತದೆ. ಆದರೆ, ಯುಪಿಎಸ್‌ಸಿ ಪರೀಕ್ಷೆಯ ಮುಖಾಂತರ ಆಯ್ಕೆಯಾಗುವ ಐಪಿಎಸ್ ಅಧಿಕಾರಿಗಳಿಗೆ 165 ಸೆ.ಮೀ. ಎತ್ತರ ಕಡ್ಡಾಯವಿರುತ್ತದೆ. ನೀವು ಕೆಎಎಸ್ ಪರೀಕ್ಷೆಯ ಮುಖಾಂತರ ರಾಜ್ಯದ ಗೃಹ ಇಲಾಖೆಯ ಇನ್ನಿತರ ಹುದ್ದೆಗಳಿಗೂ ಪ್ರಯತ್ನಿಸಬಹುದು.

6 ನನ್ನ ವಯಸ್ಸು 32. ಸದ್ಯದ ಪರಿಸ್ಥಿತಿಯಲ್ಲಿ ನಾನೊಬ್ಬ ನಿರುದ್ಯೋಗಿ. ನಾನು ಸ್ವಯಂ-ಉದ್ಯೋಗಿ ಆಗಲು ಬಯಸುವೆ. ಇತ್ತೀಚೆಗಷ್ಟೇ ಬಿಎ ಪರೀಕ್ಷೆ ಬರೆದಿರುವೆ. ನಾನು ಲಾಯರ್ ಪರೀಕ್ಷೆ ತಗೆದುಕೊಳ್ಳಬಹುದೇ? ಅರ್ಹತೆಗಳ ಬಗ್ಗೆ ಮಾಹಿತಿ ಹಾಗೂ ವಯಸ್ಸಿನ ಮಿತಿಯನ್ನು ತಿಳಿಸಿಕೊಡಿ. ನಿಮ್ಮ ಉತ್ತರಕ್ಕಾಗಿ ಕಾಯುತ್ತಿರುವೆ.

ವಿನಯ್, ಊರು ತಿಳಿಸಿಲ್ಲ.

ಅನೇಕ ಉಚ್ಚ ನ್ಯಾಯಾಲಯಗಳಲ್ಲಿ ವಯೋಮಿತಿ ನಿಬಂಧನೆ ಕುರಿತ ಅರ್ಜಿಗಳ ವಿಚಾರಣೆ ನಡೆದ ನಂತರ 3 ವರ್ಷದ ಎಲ್‌ಎಲ್‌ಬಿ ಕೋರ್ಸ್ ಮಾಡಲು ಇದ್ದ 30 ವರ್ಷದ ಗರಿಷ್ಠ ವಯೋಮಿತಿಯನ್ನು ಸಡಿಲಿಸಲಾಗಿದ್ದು ಈಗ ಯಾವುದೇ ವಯೋಮಿತಿಯ ನಿಬಂಧನೆಯಿಲ್ಲ ಎಂಬ ವರದಿಯಿದೆ. ಆದರೂ, ಅನೇಕ ಕಾಲೇಜುಗಳಲ್ಲಿ ಹಳೆಯ ವಯೋಮಿತಿಯ ಉಲ್ಲೇಖವೇ ಇರುವುದು ನಮ್ಮ ಗಮನಕ್ಕೆ ಬಂದಿದೆ. ಹಾಗಾಗಿ, ಖಚಿತವಾದ ಮಾಹಿತಿಗಾಗಿ ನೀವು ಸೇರಬಯಸುತ್ತಿರುವ ಕಾಲೇಜಿನಲ್ಲಿ ವಿಚಾರಿಸಿ. ಬಿಎ ಪದವಿಯ ಕೋರ್ಸ್ ನಂತರ ಎಲ್‌ಎಲ್‌ಬಿ ಕೋರ್ಸ್ ಮಾಡಿ ಲಾಯರ್ ವೃತ್ತಿಯನ್ನು ಅನುಸರಿಸಲು ಬಾರ್ ಕೌನ್ಸಿಲ್ ಪರೀಕ್ಷೆಯಲ್ಲಿ ಪಾಸಾಗಿ ನೋಂದಾಯಿಸಿಕೊಳ್ಳಬೇಕು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 77

1051. ಯಾವ ಸಮಿತಿಯ ಶಿಫಾರಸಿನ ಮೇಲೆ ಕೇಂದ್ರ ವಿಚಕ್ಷಣಾ ಆಯೋಗ ಸ್ಥಾಪಿಸಲಾಯಿತು?
ಎ) ನಿಟ್ಟೂರು ಶ್ರೀನಿವಾಸರಾವ್ ಸಮಿತಿ
ಬಿ) ತೇಜೇಂದ್ರ ಮೋಹನ್ ಸಮಿತಿ
ಸಿ) ಕೆ.ವಿ. ಚೌಧರಿ ಸಮಿತಿ
ಡಿ) ಕೆ. ಸಂತಾನಂ ಸಮಿತಿ

1052. ಅಡುಗೆ ಸೋಡಾದ ರಾಸಾಯನಿಕ ಹೆಸರೇನು?
ಎ) ಸೋಡಿಯಂ ಪೊಟ್ಯಾಸಿಯಂ ಕಾರ್ಬೋನೇಟ್
ಬಿ) ಸೋಡಿಯಂ ಆಕ್ಸಿಜನ್ ಕಾರ್ಬೋನೇಟ್
ಸಿ) ಸೋಡಿಯಂ ನೈಟ್ರೋಜನ್ ಕಾರ್ಬೋನೇಟ್
ಡಿ) ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್

1053. ಯಾವ ವಿಧದ ಮಣ್ಣಿನಲ್ಲಿ ಜಲಧಾರಣೆ ಸಾಮರ್ಥ್ಯ ಅತಿ ಹೆಚ್ಚು ಇರುತ್ತದೆ?
ಎ) ಮರಳುಯುಕ್ತ ಮಣ್ಣು
ಬಿ) ಅವೆಮಣ್ಣು
ಸಿ) ಎರೆ ಮಣ್ಣು
ಡಿ) ಹೊಯಿಗೆ ಮಣ್ಣು

1054. ವಿಶ್ರಾಂತ ಸ್ಥಿತಿಯಲ್ಲಿರುವ ಸಾಧಾರಣ ವಯಸ್ಕ ವ್ಯಕ್ತಿಯಲ್ಲಿ ಶ್ವಾಸೋಚ್ಛ್ವಾಸದ ಸಾಮಾನ್ಯ ವ್ಯಾಪ್ತಿಯು ನಿಮಿಷಕ್ಕೆ
ಎ) 9-12 ಬಿ) 15-18
ಸಿ) 21-24 ಡಿ) 30-33

1055. ಸಸ್ಯವೊಂದರ ಸಂತಾನೋತ್ಪತ್ತಿಯ ಅಂಗ
ಎ) ಎಲೆ ಬಿ) ಕಾಂಡ
ಸಿ) ಬೇರು ಡಿ) ಹೂವು

1056. ವೇಗದ ಪ್ರಾಥಮಿಕ ಘಟಕ
ಎ) ಕಿ.ಮೀ./ನಿಮಿಷ
ಬಿ) ಮಿ./ನಿಮಿಷ
ಸಿ) ಕಿ.ಮೀ./ಗಂಟೆ
ಡಿ) ಮೀ./ಸೆಕೆಂಡು

1057. ಕರ್ನಾಟಕದ ದಕ್ಷಿಣಕ್ಕಿರುವ ಸಮುದ್ರ ಯಾವುದು?
ಎ) ಅರಬಿ ಸಮುದ್ರ
ಬಿ) ಬಂಗಾಳ ಕೊಲ್ಲಿ
ಸಿ) ಹಿಂದೂ ಮಹಾಸಾಗರ
ಡಿ) ಹಿಮಾಲಯನ್ ಸಾಗರ

1058. ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ. 1, 4, 9, 16, 25, 36, 49, (---)
ಎ) 54 ಬಿ) 64
ಸಿ) 81 ಡಿ) 74

1059. 2022 ರ ಫಿಫಾ ವಿಶ್ವಕಪ್ ಇಲ್ಲಿ ನಡೆಯಲಿದೆ.
ಎ) ಭಾರತ ಬಿ) ಬ್ರೆಝಿಲ್
ಸಿ) ಕತಾರ ಡಿ) ಥಾಯ್ಲೆಂಡ್

1060. ಪ್ರಖ್ಯಾತ 'ಗಾಯತ್ರಿ ಮಂತ್ರವು' ಯಾವ ವೇದದಲ್ಲಿ ಕಾಣ ಸಿಗುತ್ತದೆ?
ಎ) ಋಗ್ವೇದ ಬಿ) ಸಾಮವೇದ
ಸಿ) ಯಜುರ್ವೇದ
ಡಿ) ಅಥರ್ವಣವೇದ

1061) ಆಟೊಮೊಬೈಲ್ ಎಂಜಿನ್‌ನಲ್ಲಿ ಬಳಸುವ ಆ್ಯಂಟಿಫ್ರೀಜ್
ಎ) ಪ್ರೋಪೇನ್ ಬಿ) ಇಥೆನಾಲ್
ಸಿ) ಈಥೇನ್ ಡಿ) ಮಿಥೇನ್

1062) ಬಾಹ್ಯಾಕಾಶ ನೌಕೆಯಲ್ಲಿರುವ ಖಗೋಳ ಯಾತ್ರಿಗೆ ಆಕಾಶದ ಬಣ್ಣ ಹೇಗೆ ಕಂಡು ಬರುತ್ತದೆ?
ಎ) ಕಪ್ಪು ಬಿ) ನೀಲಿ
ಸಿ) ಕೆಂಪು ಡಿ) ದಟ್ಟನೀಲಿ

1063) 'ಗೆಲೇನ್' ಇದು ಯಾವ ಲೋಹದ ಅದಿರು?
ಎ) ಚಿನ್ನ ಬಿ) ಬೆಳ್ಳಿ
ಸಿ) ತಾಮ್ರ ಡಿ) ಸೀಸ

1064) ಓಜೋನ್ ರಂಧ್ರವನ್ನು ಪತ್ತೆ ಹಚ್ಚಿದ ಉಪಗ್ರಹ
ಎ) ಲೂನಾ-1 ಬಿ) ನಿಂಬಸ್-7
ಸಿ) ಲ್ಯಾಂಡ್ ಸ್ಯಾಟ್-3
ಡಿ) ಟರಾಸ್-ಎನ್

1065) ಮಾರುತಗಳನ್ನು ಅಳೆಯುವ ಮಾನದ ಹೆಸರು
ಎ) ಬೋಫರ್ಟ ಸ್ಕೇಲ್
ಬಿ) ಸಿಸ್ಮೋಗ್ರಾಫ್
ಸಿ) ಕ್ಯಾಥೋಮೀಟರ್
ಡಿ) ಅಮಿಮೀಟರ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 76 ರ ಉತ್ತರ: 1041. ಸಿ, 1042. ಡಿ, 1043. ಬಿ, 1044. ಬಿ, 1045. ಬಿ, 1046. ಬಿ, 1047. ಡಿ, 1048. ಸಿ, 1049. ಬಿ, 1050. ಸಿ,

ಸುಭಾಷಿತ

ನಾನು ನನ್ನೊಂದಿಗೆ ವಿನಾ ಬೇರೆ ಯಾರೊಂದಿಗೂ ಸ್ಪರ್ಧೆಗಿಳಿದಿಲ್ಲ. ನಿರಂತರವಾಗಿ ನನ್ನನ್ನು ಸುಧಾರಿಸಿಕೊಳ್ಳುವುದೇ ನನ್ನ ಗುರಿ. -ಬಿಲ್ ಗೇಟ್ಸ್

ಅನೈತಿಕ ಪೊಲೀಸ್‌ಗಿರಿ ಮೃದುಧೋರಣೆ ಅಪಾಯಕಾರಿ

ಮತೀಯ ಗೂಂಡಾಗಿರಿ ವಿಚಾರಕ್ಕೆ ಸಂಬಂಧಿಸಿದಂತೆ 'ಕ್ರಿಯೆ- ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಡಿರುವ ಮಾತು ಧರ್ಮದ ಹೆಸರಿನಲ್ಲಿ ಕಾನೂನನ್ನು ಕೈಗೆ ತೆಗೆದುಕೊಳ್ಳುವ ವ್ಯಕ್ತಿಗಳಿಗೆ ಉತ್ತೇಜನ ನೀಡುವಂತಿದೆ. ಅನೈತಿಕ ಪೊಲೀಸ್‌ಗಿರಿ ಘಟನೆಗಳ ಕುರಿತಂತೆ ಪ್ರತಿಕ್ರಿಯಿಸುವ ಅವಸರದಲ್ಲಿ, ಕಾನೂನುಭಂಜಕರನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಸಮಾಜದಲ್ಲಿ ಜನರ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ನಡೆದುಕೊಳ್ಳಬೇಕಾಗುತ್ತದೆ; ಪರಸ್ಪರರ ಭಾವನೆಗಳಿಗೆ ಧಕ್ಕೆಯುಂಟಾದಾಗ ಕ್ರಿಯೆ-ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ ಎನ್ನುವ ಅಭಿಪ್ರಾಯವನ್ನು ಅನೈತಿಕ ಪೊಲೀಸ್‌ಗಿರಿ ಸಂದರ್ಭದಲ್ಲಿ ಒಪ್ಪಲಿಕ್ಕೆ ಸಾಧ್ಯವಿಲ್ಲ ಹಾಗೂ ಇಂತಹ ಮಾತು ಮುಖ್ಯಮಂತ್ರಿ ಸ್ಥಾನಕ್ಕೆ ಶೋಭಿಸುವಂತಹದ್ದೂ ಅಲ್ಲ. ಸಾಮಾಜಿಕ ಸಾಮರಸ್ಯ ಕಾಪಾಡಲು ನಾಡಿನಲ್ಲಿರುವ ಪ್ರತಿಯೊಬ್ಬರೂ ಪ್ರಯತ್ನಿಸಬೇಕು ಹಾಗೂ ಆ ವಿಷಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆಯೂ ಇದೆ ಎಂದು ಅವರು ಹೇಳಿರುವುದು ಸರಿಯಾಗಿದೆ. ಆದರೆ, ಸಾಮಾಜಿಕ ಸಾಮರಸ್ಯ ಕಾಪಾಡುವ ಆಶಯಕ್ಕೆ ವಿರುದ್ಧವಾದ 'ಭಾವನೆಗಳಿಗೆ ಧಕ್ಕೆಯಾದಾಗ ಕ್ರಿಯೆ-ಪ್ರತಿಕ್ರಿಯೆ ಇದ್ದೇ ಇರುತ್ತದೆ' ಎನ್ನುವ ಮಾತನ್ನೂ ಅವರೇ ಆಡಿದ್ದಾರೆ. ಇದು, ಸಾಮರಸ್ಯದ ಬಗ್ಗೆ ಮಾತನಾಡುತ್ತಲೇ ಮತೀಯ ಶಕ್ತಿಗಳನ್ನು ಪ್ರೋತ್ಸಾಹಿಸುವ, ಬೆಂಬಲಿಸುವ ಹೇಳಿಕೆಯಾಗಿದೆ. ನೈತಿಕತೆ ಇಲ್ಲದೆ ನಾವು ಬದುಕಲು ಸಾಧ್ಯವಿಲ್ಲ ಎನ್ನುವ ಮುಖ್ಯಮಂತ್ರಿ ಮಾತು ಕೂಡ ಸಂದರ್ಭಕ್ಕೆ ಹೊಂದುವಂತಹದ್ದಲ್ಲ. 'ನೈತಿಕತೆ' ಎಂದರೆ ಯಾವ ನೈತಿಕತೆ? ನಾವು ಪಾಲಿಸಬೇಕಿರುವುದು ಸಾಂವಿಧಾನಿಕ ನೈತಿಕತೆ. ಸಮುದಾಯದ ನೈತಿಕತೆ ಅಥವಾ ವ್ಯಕ್ತಿಗತ ನೈತಿಕತೆಯ ಪರಿಕಲ್ಪನೆ ಆಗಾಗ ಬದಲಾಗಬಹುದು. ಆದರೆ, ಸಾಂವಿಧಾನಿಕ ನೈತಿಕತೆಗೆ ನಿರ್ದಿಷ್ಟ ಚೌಕಟ್ಟು ಇದೆ. ಮುಖ್ಯಮಂತ್ರಿ ಪ್ರತಿಪಾದಿಸಬೇಕಿರುವುದು ಸಾಂವಿಧಾನಿಕ ನೈತಿಕತೆಯನ್ನು; ಅನೈತಿಕ ಪೊಲೀಸ್‌ಗಿರಿ ನಡೆಸುವವರ ನೈತಿಕತೆಯನ್ನಲ್ಲ.

> ಈ ನಾಡಿಗೆ ತನ್ನದೇ ಆದ ಪೊಲೀಸ್ ವ್ಯವಸ್ಥೆಯಿದ್ದು, ಪರ್ಯಾಯ ಪೊಲೀಸ್ ವ್ಯವಸ್ಥೆಗೆ ಇಲ್ಲಿ ಅವಕಾಶವಿಲ್ಲ ಎನ್ನುವುದನ್ನು ಗಮನದಲ್ಲಿಟ್ಟು, ಅನೈತಿಕ ಪೊಲೀಸ್‌ಗಿರಿಯ ಬಗ್ಗೆ ಮುಖ್ಯಮಂತ್ರಿ ಸ್ಪಷ್ಟಧೋರಣೆ ತಳೆಯಬೇಕಾಗಿದೆ

ಧರ್ಮದ ಹೆಸರಿನಲ್ಲಿ ನಡೆಯುವ ಅನೈತಿಕ ಪೊಲೀಸ್‌ಗಿರಿ ಪ್ರಕರಣಗಳು ನಾಗರಿಕ ಸಮಾಜದಲ್ಲಿ ಭೀತಿಯನ್ನು ಹುಟ್ಟಿಸುವಂತಹವು. ಅಮಾಯಕರು, ಅದರಲ್ಲೂ ಹೆಣ್ಣುಮಕ್ಕಳನ್ನು ಹೆಚ್ಚು ಬಾಧಿಸುವ ಮತೀಯ ಗೂಂಡಾಗಿರಿ ನಾಡಿನ ಧಾರ್ಮಿಕ ಸಾಮರಸ್ಯದ ವರ್ಚಸ್ಸಿಗೆ ಧಕ್ಕೆ ಉಂಟುಮಾಡುತ್ತದೆ. ಇಂಥ ಅನೈತಿಕ ಪೊಲೀಸ್‌ಗಿರಿಯ ಎರಡು ಪ್ರಕರಣಗಳು ಕರಾವಳಿಯಲ್ಲಿ ಇತ್ತೀಚೆಗೆ ನಡೆದಿವೆ. ವಾಹನವೊಂದರಲ್ಲಿ ಹೋಗುತ್ತಿದ್ದ ಭಿನ್ನ ಧರ್ಮೀಯ ವಿದ್ಯಾರ್ಥಿಗಳ ಮೇಲೆ ಸುರತ್ಕಲ್‌ನಲ್ಲಿ ಹಲ್ಲೆ ನಡೆದಿದೆ. ಬೇರೊಂದು ಧರ್ಮದ ವ್ಯಕ್ತಿಯ ಕಾರಿನಲ್ಲಿ ಹಿಂದೂ ಧರ್ಮದ ಮಹಿಳೆಯರು ಪ್ರಯಾಣಿಸುತ್ತಿದ್ದಕ್ಕೆ ಬಜರಂಗದಳದ ಕಾರ್ಯಕರ್ತರು ಮೂಡುಬಿದಿರೆಯಲ್ಲಿ ದಾಂದಲೆ ನಡೆಸಿದ್ದಾರೆ. ಆ ಪ್ರಕರಣದಲ್ಲಿ ಹಲ್ಲೆ ನಡೆಸಿದವರ ಪರವಾಗಿ ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರು ಪೊಲೀಸರ ಮೇಲೆ ಒತ್ತಡ ಹೇರಿದ್ದಾರೆ ಎನ್ನುವ ಆರೋಪವಿದೆ. ಮುಸ್ಲಿಂ ಮಹಿಳೆಗೆ ಡ್ರಾಪ್ ನೀಡಿದ ಹಿಂದೂ ಧರ್ಮಕ್ಕೆ ಸೇರಿದ ಬೈಕ್ ಸವಾರನ ಮೇಲೆ ಹಲ್ಲೆ ನಡೆಸಿದ ಪ್ರಕರಣ ಬೆಂಗಳೂರಿನಲ್ಲಿ ನಡೆದಿತ್ತು. ಆ ಸಂದರ್ಭದಲ್ಲಿ, 'ಇಂತಹ ಘಟನೆಗೆ ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟವಾಗಿ ಎಚ್ಚರಿಕೆ ನೀಡಿದ್ದ ಮುಖ್ಯಮಂತ್ರಿ, ಈಗ ತದ್ವಿರುದ್ಧ ಹೇಳಿಕೆ ನೀಡಿರುವುದು ಕಳವಳಕ್ಕೆ ಕಾರಣವಾಗಿದೆ. ಧರ್ಮದ ಹೆಸರಿನಲ್ಲಿ ಬೆದರಿಸುವ, ಕಾನೂನನ್ನು ಕೈಗೆ ತೆಗೆದುಕೊಳ್ಳುವ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿವೆ. ನೈತಿಕತೆಯ ಹೆಸರಿನಲ್ಲಿ ಅನೈತಿಕತೆ ಹಾಗೂ ಗೂಂಡಾಗಿರಿಯನ್ನು ಪ್ರದರ್ಶಿಸಲಾಗುತ್ತಿದೆ. ಈ ಅಟಾಟೋಪವನ್ನು 'ನೈತಿಕ ಪೊಲೀಸ್‌ಗಿರಿ' ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ. ಈ ನಾಡಿಗೆ ತನ್ನದೇ ಆದ ಪೊಲೀಸ್ ವ್ಯವಸ್ಥೆಯಿದ್ದು, ಪರ್ಯಾಯ ಪೊಲೀಸ್ ವ್ಯವಸ್ಥೆಗೆ ಇಲ್ಲಿ ಅವಕಾಶವಿಲ್ಲ ಎನ್ನುವುದನ್ನು ಈ ಮೊದಲು ಗೃಹ ಖಾತೆಯನ್ನು ನಿರ್ವಹಿಸಿ ಅನುಭವವಿರುವ ಮುಖ್ಯಮಂತ್ರಿ ಮರೆಯಬಾರದು. ಅನೈತಿಕ ಪೊಲೀಸ್‌ಗಿರಿಯ ಬಗ್ಗೆ ಮುಖ್ಯಮಂತ್ರಿ ಸ್ಪಷ್ಟಧೋರಣೆ ತಳೆಯುವುದು ಅಗತ್ಯ. ಮೃದುಧೋರಣೆಯ ಮಾತುಗಳು ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ಬದಲು, ಕೋಮುವಾದಿ ಶಕ್ತಿಗಳಿಗೆ ಉತ್ತೇಜನ ನೀಡುತ್ತವೆ ಎನ್ನುವುದು ಅವರಿಗೆ ಸದಾ ನೆನಪಿರಬೇಕು.

ಅಧಿಕಾರದಲ್ಲಿ ಇರುವವರು ಕಾನೂನಿನ ಪರಿಪಾಲಕರಾಗಿ ಇರಬೇಕೇ ಹೊರತು, ಧರ್ಮ-ನೈತಿಕತೆಯ ಪ್ರತಿಪಾದಕರಾಗಿ ಅಲ್ಲ. ಧರ್ಮಪೀಠಗಳು, ಧರ್ಮಗುರುಗಳು ಬೋಧಿಸಬೇಕಾದುದನ್ನು ಸರ್ಕಾರವನ್ನು ಪ್ರತಿನಿಧಿಸುವವರು ಮಾಡಲಿಕ್ಕೆ ಹೋಗಬಾರದು, ಅದು ಅವರ ಕೆಲಸವೂ ಅಲ್ಲ. ಸಂಸ್ಕೃತಿ-ಧರ್ಮದ ಹೆಸರಿನಲ್ಲಿ ಅಮಾಯಕರ ಮೇಲೆ ಬಲಪ್ರಯೋಗ ಮಾಡುವುದನ್ನು ಕೆಲವರು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಅಂಥ ಸಮಾಜಘಾತುಕ ಶಕ್ತಿಗಳ ಬಗ್ಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ನಂಜನಗೂಡು ತಾಲ್ಲೂಕಿನಲ್ಲಿ ಅನಧಿಕೃತ ದೇಗುಲ ತೆರವುಗೊಳಿಸಿದ ಪ್ರಕರಣ ಖಂಡಿಸಿ, 'ನಾವು ಗಾಂಧೀಜಿಯನ್ನೇ ಬಿಟ್ಟಿಲ್ಲ ಸ್ವಾಮಿ, ನೀವು ಯಾವ ಲೆಕ್ಕ ನಮಗೆ?' ಎಂದು ಅಖಿಲ ಭಾರತ ಹಿಂದೂ ಮಹಾಸಭಾದ ಪದಾಧಿಕಾರಿಗಳು ಮಂಗಳೂರಿನಲ್ಲಿ ಮುಖ್ಯಮಂತ್ರಿಯವರಿಗೆ ಬಹಿರಂಗವಾಗಿ ಬೆದರಿಕೆ ಹಾಕಿದ್ದರು. ಧರ್ಮದ ಹೆಸರಿನಲ್ಲಿ ಮುಖ್ಯಮಂತ್ರಿಯನ್ನೇ ಬೆದರಿಸಬಹುದಾದರೆ, ಜನಸಾಮಾನ್ಯರ ಪಾಡೇನು? ಧರ್ಮರಕ್ಷಕರ ಸೋಗಿನಲ್ಲಿ ಹೇಗೆ ಬೇಕಾದರೂ ವರ್ತಿಸುವುದಕ್ಕೆ, ಯಾರನ್ನು ಬೇಕಾದರೂ ಬೆದರಿಸಲಿಕ್ಕೆ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಅನೈತಿಕ ಪೊಲೀಸ್‌ಗಿರಿ ಎನ್ನುವುದು ಸಾಮಾಜಿಕ ಸಾಮರಸ್ಯಕ್ಕೆ ಅಪಾಯಕಾರಿ ಆಗಿರುವಂತೆಯೇ ಸರ್ಕಾರದ ಸಾರ್ವಭೌಮತೆಯ ಅಣಕವೂ ಆಗಿದೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುವವರು ಹಾಗೂ ಕಾನೂನನ್ನು ಕೈಗೆ ತೆಗೆದುಕೊಳ್ಳುವವರಿಂದ ಸರ್ಕಾರದ ಪ್ರತಿನಿಧಿಗಳು ಅಂತರ ಕಾಪಾಡಿಕೊಳ್ಳಬೇಕು. ಶಾಸನಸಭೆಗಳಲ್ಲಿ ಪ್ರಜೆಗಳನ್ನು ಪ್ರತಿನಿಧಿಸುವವರು, ಅದೇಕಾಲಕ್ಕೆ ಅನೈತಿಕ ಪೊಲೀಸ್‌ಗಿರಿಯ ವಕ್ತಾರರೂ ಆಗುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದುದು.

ದಿನದ ಟ್ವೀಟ್

ಇನ್ನೂ ಮುಗಿದಿಲ್ಲ...

ಭಾರತದಲ್ಲಿ ಕಳೆದ ಏಳು ತಿಂಗಳುಗಳಲ್ಲೇ ದಿನವೊಂದರ ಅತ್ಯಂತ ಕನಿಷ್ಠ ಕೋವಿಡ್ ಪ್ರಕರಣಗಳ ಸಂಖ್ಯೆ ದಾಖಲಾಗಿದೆ. ವರದಿಯಾದ ಸಾವಿನ ಪ್ರಕರಣಗಳು 144. ಅವರಲ್ಲಿ ಒಬ್ಬರು ನನ್ನ ಸಂಬಂಧಿಯ ತಂದೆ. ಇದು ಕೇವಲ ಸಂಖ್ಯೆಯಲ್ಲ. 70 ವರ್ಷದವರಾಗಿದ್ದ ಅವರು ದೃಢಕಾಯರಾಗಿದ್ದರು, ಎರಡೂ ಡೋಸ್ ಲಸಿಕೆ ಪಡೆದಿದ್ದರು. ಆದರೂ ಅವರು ಸಾವಿಗೀಡಾಗಿದ್ದು ತೀವ್ರ ಕಳವಳಕಾರಿ. ಹೀಗಾಗಿ ಕೋವಿಡ್ ಸಾವಿನ ಸಂಖ್ಯೆ ಶೂನ್ಯಕ್ಕೆ ಇಳಿಯುವವರೆಗೂ ಇದು ಮುಗಿದಿದೆ ಎಂದುಕೊಳ್ಳಬಾರದು. ಸುರಕ್ಷತೆ ನಿಯಮಗಳನ್ನು ನಿರ್ಲಕ್ಷಿಸದಿರಿ.

ನೇಹಾ, ಪತ್ರಕರ್ತೆ

ಕಿಡಿನುಡಿ

ಎಚ್.ಡಿ.ಕುಮಾರಸ್ವಾಮಿ ಅವರು ಯಾರನ್ನು ಮೆಚ್ಚಿಸಲು ಆರ್‌ಎಸ್‌ಎಸ್ ಮೇಲೆ ಆರೋಪ ಮಾಡುತ್ತಿದ್ದಾರೋ ಗೊತ್ತಿಲ್ಲ. ಆದರೆ ಅವರ ಆರೋಪ ಸತ್ಯಕ್ಕೆ ದೂರವಾದುದು. ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ನಡುವೆ ಆರ್‌ಎಸ್‌ಎಸ್ ವಿರುದ್ಧ ಆರೋಪ ಮಾಡಲು ಪೈಪೋಟಿ ಇದೆ. ಅಲ್ಪಸಂಖ್ಯಾತರನ್ನು ಓಲೈಸಿ ಮತಗಳನ್ನು ಗಳಿಸಲು ಈ ರೀತಿ ಅಪಪ್ರಚಾರ ಮಾಡುತ್ತಿದ್ದಾರೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 18-10-1996

• ಉತ್ತರಪ್ರದೇಶದಲ್ಲಿ ಮತ್ತೆ ರಾಷ್ಟ್ರಪತಿ ಆಳ್ವಿಕೆ

ನವದೆಹಲಿ, ಅ. 17 (ಪಿಟಿಐ)– ಉತ್ತರ ಪ್ರದೇಶದಲ್ಲಿ ಯಾವುದೇ ರಾಜಕೀಯ ಪಕ್ಷ ಬಹುಮತ ಗಳಿಸದೇ ಸರ್ಕಾರ ರಚಿಸಲು ಅಸಮರ್ಥವಾಗಿರುವ ಹಿನ್ನೆಲೆಯಲ್ಲಿ, ವಿಧಾನ ಸಭೆಯನ್ನು ಅಮಾನತಿನಲ್ಲಿರಿಸಿ ಇಂದು ಮಧ್ಯರಾತ್ರಿಯಿಂದ ಅನ್ವಯವಾಗುವಂತೆ 6 ತಿಂಗಳ ಕಾಲ ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸಲಾಗಿದೆ.

ಉತ್ತರಪ್ರದೇಶದ ರಾಜ್ಯಪಾಲ ರೋಮೇಶ್ ಭಂಡಾರಿ ಅವರ ಶಿಫಾರಸಿನ ಮೇರೆಗೆ ಕೇಂದ್ರ ಸಚಿವ ಸಂಪುಟ ಈ ನಿರ್ಧಾರ ಕೈಗೊಂಡಿದೆ. ಇದಕ್ಕೂ ಮೊದಲು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ರಾಷ್ಟ್ರಪತಿ ಡಾ.ಶಂಕರ ದಯಾಳ್ ಶರ್ಮಾ ಅವರನ್ನು ಭೇಟಿ ಮಾಡಿ ಉತ್ತರಪ್ರದೇಶದ ರಾಜಕೀಯ ಪರಿಸ್ಥಿತಿಗಳನ್ನು ವಿವರಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 18-10-1971

• ಗಡಿಯಿಂದ ಭಾರತ ಸೇನೆ ವಾಪಸಾಗದು

ಜಲಂಧರ್, ಅ. 17– ಬಾಂಗ್ಲಾದೇಶದ ಸಮಸ್ಯೆ ಇತ್ಯರ್ಥವಾಗುವವರೆಗೆ ಗಡಿಯಲ್ಲಿರುವ ತನ್ನ ಸೈನ್ಯವನ್ನು ಭಾರತ ಹಿಂತೆಗೆದುಕೊಳ್ಳುವುದಿಲ್ಲವೆಂದು ರಕ್ಷಣಾ ಮಂತ್ರಿ ಶ್ರೀ ಜಗಜೀವನ ರಾಂ ಅವರು ಇಂದು ಹೇಳಿದರು.

ಇಲ್ಲಿಗೆ 20 ಕಿಲೊ ಮೀಟರುಗಳ ದೂರದಲ್ಲಿರುವ ಕಪೂರ್ತಲದಲ್ಲಿ ರಾಜಕೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ರಕ್ಷಣಾ ಸಚಿವರು, 'ಈ ಸಂಬಂಧದಲ್ಲಿ ಯಾವುದೇ ಅಂತರರಾಷ್ಟ್ರೀಯ ಒತ್ತಡವನ್ನು ವಿರೋಧಿಸಲು ರಾಷ್ಟ್ರ ಸ್ಥಿರ ಸಂಕಲ್ಪ ಮಾಡಿದೆ' ಎಂದರು.

'ಭಾರತದ ಮೇಲೆ ಯುದ್ಧ ಹೇರಿದಲ್ಲಿ ಪಾಕಿಸ್ತಾನದ ಪ್ರದೇಶದಿಂದ ತನ್ನ ಸೈನ್ಯವನ್ನು ಭಾರತ ಹಿಂತೆಗೆದುಕೊಳ್ಳುವುದಿಲ್ಲ' ಎಂದರು.

ಭಾರತ ಟಿ20 ತಂಡದ ನಾಯಕತ್ವಕ್ಕೆ ಕೊಹ್ಲಿ ವಿದಾಯದ ಸುತ್ತಮುತ್ತ

ವಿರಾಟ್ ಪರ್ವದ ಹೊಸ ಆರಂಭ?

ವಿಶ್ಲೇಷಣೆ
ಗಿರೀಶ ದೊಡ್ಡಮನಿ

ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ಮಾರ್ಗದರ್ಶಕರಾಗಿ ಮಹೇಂದ್ರಸಿಂಗ್ ಧೋನಿ ಕಾರ್ಯನಿರ್ವಹಿಸಲಿದ್ದಾರೆ. ಟೂರ್ನಿಯ ನಂತರ ತಂಡಕ್ಕೆ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ನೇಮಕ ಆಗಲಿದ್ದಾರೆ.

ಇದೇ ಹೊತ್ತಿಗೆ ಭಾರತ ಟಿ20 ತಂಡದ ನಾಯಕತ್ವಕ್ಕೆ ವಿದಾಯ ಹೇಳಲಿರುವ ವಿರಾಟ್ ಕೊಹ್ಲಿ ಏಕದಿನ ಮತ್ತು ಟೆಸ್ಟ್ ತಂಡಗಳನ್ನು ಮುನ್ನಡೆಸಲಿದ್ದಾರೆ. ಬಿಡಿಬಿಡಿಯಾಗಿ ಕಾಣಿಸುವ ಈ ಮೂರು ಎಳೆಗಳನ್ನು ಹೊಸೆದು ಹಗ್ಗ ಮಾಡಿದರೆ ವಿರಾಟ್ ಕೊಹ್ಲಿ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವರ್ಚಸ್ಸು ಉಳಿಸುವ ಬಂಧವಾಗಿ ಕಾಣಿಸುತ್ತದೆ. ಇದು 'ವಿರಾಟ್ ಪರ್ವ'ದ ಹೊಸ ಆರಂಭದಂತೆ ಕಾಣುತ್ತಿದೆ.

2014ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಧೋನಿ ವಿದಾಯ ಹೇಳಿದ್ದರು. ಆಗ ಕೊಹ್ಲಿ ನಾಯಕತ್ವ ವಹಿಸಿಕೊಂಡರು. 2017ರಲ್ಲಿ ಧೋನಿ ಸೀಮಿತ ಓವರ್‌ಗಳ ನಾಯಕತ್ವವನ್ನೂ ಕೊಹ್ಲಿಗೆ ವರ್ಗಾಯಿಸಿದ್ದರು. ಆದರೆ, 'ರನ್ ಯಂತ್ರ' ಖ್ಯಾತಿಯ ವಿರಾಟ್ ಇದುವರೆಗೂ ಐಸಿಸಿಯ ಟ್ರೋಫಿಗಳನ್ನು (ಏಕದಿನ ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್) ಜಯಿಸಿಲ್ಲ. ಇತ್ತೀಚೆಗಷ್ಟೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ತಂಡವಾಗಿಯೂ ಭಾರತವು ನ್ಯೂಜಿಲೆಂಡ್ ಎದುರು ಸೋತಿತ್ತು. ಆಗಲೂ ವಿರಾಟ್ ನಾಯಕತ್ವದ ಕುರಿತು ಅಪಸ್ವರಗಳು ಎದ್ದಿದ್ದವು. ಅಂತಿಮ ಹನ್ನೊಂದರ ಬಳಗದ ಆಯ್ಕೆ ಮತ್ತು ನಿರ್ವಹಣೆಯಲ್ಲಿ ಅವರು ಎಡವಿದ್ದು ಸ್ಪಷ್ಟವಾಗಿತ್ತು.

ಅಲ್ಲದೇ ಹೋದ ಡಿಸೆಂಬರ್-ಜನವರಿಯಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್-ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಹೀನಾಯವಾಗಿ ಸೋತಿತ್ತು. ಆ ಸಂದರ್ಭದಲ್ಲಿ ತಮ್ಮ ಪಿತೃತ್ವ ರಜೆಯ ನಿರ್ಧಾರವನ್ನು ವಿರಾಟ್ ಬದಲಿಸಿರಲಿಲ್ಲ. ಆ ವಿಷಯವೂ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿತ್ತು. ಆದರೆ, ಅದೇ ಸರಣಿಯ ಉಳಿದ ಪಂದ್ಯಗಳಲ್ಲಿ ಅಜಿಂಕ್ಯ ರಹಾನೆ ನಾಯಕತ್ವದ ಯುವಪಡೆಯು ಸರಣಿ ಗೆದ್ದು ಇತಿಹಾಸ ಬರೆದಿತ್ತು. ವಿರಾಟ್ ಇಲ್ಲದೆಯೂ ತಂಡ ಜಯಿಸಿದ್ದು ಕ್ರಿಕೆಟ್ ಜಗತ್ತಿಗೆ ವಿಭಿನ್ನ ಸಂದೇಶ ರವಾನಿಸಿದ್ದು ಸುಳ್ಳಲ್ಲ!

ಆಗಿನಿಂದಲೂ ವಿರಾಟ್ ನಾಯಕತ್ವದ ಕುರಿತು ಕೆಲವು ದಿಗ್ಗಜ ಕ್ರಿಕೆಟಿಗರು ಮಾತನಾಡಲಾರಂಭಿಸಿದ್ದರು. ಧೋನಿ ನಾಯಕತ್ವದ ಛಾಯೆಯಿಂದ ತಂಡವನ್ನು ಹೊರತಂದು ಹೊಸ ಛಾಪು ಮೂಡಿಸುವಲ್ಲಿ ಕೊಹ್ಲಿ ವಿಫಲರಾಗಿದ್ದಾರೆಂಬ ಗುಸುಗುಸು ಕೂಡ ಬಿಸಿಸಿಐ ವಲಯದಲ್ಲಿ ನಡೆಯುತ್ತಲೇ ಇತ್ತು. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ್ದ ಸೌರವ್ ಗಂಗೂಲಿ ಹೆಣೆದಿರುವ ಯೋಜನೆ ಈಗ ಸ್ಪಷ್ಟವಾಗಿ ಕಾಣಿಸುತ್ತಿದೆ. ಭಾರತದ ಕ್ರಿಕೆಟ್‌ಗೆ ವಿರಾಟ್ ನಾಯಕತ್ವಕ್ಕಿಂತಲೂ ಅವರ ಬ್ಯಾಟಿಂಗ್ ಪ್ರತಿಭೆ ಮತ್ತು ಬ್ರ್ಯಾಂಡ್ ಮೌಲ್ಯದ ಅವಶ್ಯಕತೆಯನ್ನು ಮಂಡಳಿ ಮನಗಂಡಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ ಒಟ್ಟು 23 ಸಾವಿರಕ್ಕೂ ಹೆಚ್ಚು ರನ್ ಗಳಿಸಿರುವ ವಿರಾಟ್ ಸದ್ಯದ ಕ್ರಿಕೆಟ್‌ನಲ್ಲಿ ದೊಡ್ಡ ತಾರೆ. ಫಿಟ್‌ನೆಸ್, ತಾಂತ್ರಿಕ ಕೌಶಲಗಳಲ್ಲಿ ವಿರಾಟ್ ಅವರನ್ನು ಮೀರಿಸುವವರು ಭಾರತ ತಂಡದಲ್ಲಿ ಸದ್ಯದ ಮಟ್ಟಿಗೆ ಕಾಣುತ್ತಿಲ್ಲ. ದಶಕಗಳ ಹಿಂದೆ ಕಪಿಲ್ ದೇವ್ ನಾಯಕರಾಗಿದ್ದಾಗ ತಂಡದಲ್ಲಿ ಸುನೀಲ್ ಗಾವಸ್ಕರ್, ದಿಲೀಪ್ ವೆಂಗಸರ್ಕಾರ್, ಕೃಷ್ಣಮಾಚಾರಿ ಶ್ರೀಕಾಂತ್, ರೋಜರ್ ಬಿನ್ನಿ, ಸೈಯದ್ ಕಿರ್ಮಾನಿ ಅವರಂತಹ ದಿಗ್ಗಜರಿದ್ದರು. ಗಂಗೂಲಿ ಸಂದರ್ಭದಲ್ಲಿ ಸಚಿನ್ ತೆಂಡೂಲ್ಕರ್, ವಿವಿಎಸ್ ಲಕ್ಷ್ಮಣ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಅವರಂತಹ ತಾರಾವರ್ಚಸ್ಸಿನ ಆಟಗಾರರು ಇದ್ದರು. ಬೇರೆ ಬೇರೆ ದೇಶಗಳ ತಂಡಗಳಲ್ಲಿ ರಿಕಿ ಪಾಂಟಿಂಗ್, ಜಾಕ್ ಕಾಲಿಸ್, ಕುಮಾರ ಸಂಗಕ್ಕಾರ, ಮಹೇಲಾ ಜಯವರ್ಧನೆ, ಶಾಹೀದ್ ಅಫ್ರಿದಿ ಅವರಂತಹ ಆಟಗಾರರೂ ಇದ್ದರು. ಧೋನಿ ನಾಯಕರಾಗಿದ್ದಾಗಲೂ ವೀರೇಂದ್ರ ಸೆಹ್ವಾಗ್, ಸಚಿನ್, ರಾಹುಲ್, ಹರಭಜನ್ ಸಿಂಗ್, ಜಹೀರ್ ಖಾನ್ ಮತ್ತಿತರರು ಇದ್ದರು.

ಆದರೆ ಈ ಕಾಲದಲ್ಲಿ ರೋಹಿತ್ ಶರ್ಮಾ ಒಬ್ಬರನ್ನು ಬಿಟ್ಟರೆ ವಿರಾಟ್‌ಗೆ ಪೈಪೋಟಿ ಒಡ್ಡುವವರು ಕಾಣುತ್ತಿಲ್ಲ. ಆದರೆ ರೋಹಿತ್ ಫಿಟ್‌ನೆಸ್ ಮಟ್ಟವು ವಿರಾಟ್ ಅವರಷ್ಟು ಉತ್ಕೃಷ್ಟವಾಗಿಲ್ಲ ಎನ್ನುವುದೂ ಸತ್ಯ. ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್ ಅವರು ಬೆಂಚ್ ಶಕ್ತಿಯ ಪೈಪೋಟಿಯನ್ನು ಸಂಪೂರ್ಣವಾಗಿ ಮೀರಿ ನಿಲ್ಲಲು ಇನ್ನೂ ಸಾಧ್ಯವಾಗಿಲ್ಲ. ಇಂತಹ ಸನ್ನಿವೇಶದಲ್ಲಿ ವಿರಾಟ್ ಅವರನ್ನು ಏಕಾಏಕಿ ಬಿಟ್ಟುಕೊಡಲು ಬಿಸಿಸಿಐಗೂ ಸಾಧ್ಯವಿಲ್ಲ. ತಾವೇ ಒಂದು ಬ್ರ್ಯಾಂಡ್ ಆಗಿ ಬೆಳೆದಿರುವ ವಿರಾಟ್, ಭಾರತದ ಕ್ರಿಕೆಟ್ ಬೆಳವಣಿಗೆಗೆ ಕೊಟ್ಟಿರುವ ಕಾಣಿಕೆಯನ್ನೂ ನಿರ್ಲಕ್ಷಿಸುವಂತಿಲ್ಲ.

ಆದ್ದರಿಂದ ಅವರ ನಾಯಕತ್ವದ ಲೋಪಗಳನ್ನು ಸರಿಪಡಿಸುವುದರ ಜೊತೆಗೆ ಬ್ಯಾಟಿಂಗ್ ಪ್ರತಿಭೆಯನ್ನು ಬಳಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದಾರೆ.

ಅದಕ್ಕಾಗಿಯೇ ಪಂದ್ಯದ ಅನುಕ್ಷಣವೂ ಯೋಜನೆಗಳನ್ನು ಹೆಣೆಯುವ ಅನಿವಾರ್ಯ ಒತ್ತಡವಿರುವ ಟಿ20 ಮಾದರಿಯ ನಾಯಕತ್ವದ ಒತ್ತಡದಿಂದ ಅವರನ್ನು ಮುಕ್ತ ಮಾಡಲಾಗುತ್ತಿದೆ. ಇದರಿಂದ ಏಕದಿನ ಮತ್ತು ಟೆಸ್ಟ್ ತಂಡಗಳ ಮುಂದಾಳತ್ವವನ್ನೂ ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗಬಹುದು. ಅಲ್ಲದೇ ಬ್ಯಾಟಿಂಗ್ ಕೂಡ ಸುಧಾರಿಸಬಹುದು. ಆದರೆ, ಅವರ ಆಕ್ರಮಣಕಾರಿ ಶೈಲಿಯನ್ನು ನಿಯಂತ್ರಿಸಲು ಮತ್ತು ನಿರ್ಣಯ ಕೈಗೊಳ್ಳುವ ವಿಷಯದಲ್ಲಿ ಆಗುತ್ತಿರುವ ಎಡವಟ್ಟುಗಳನ್ನು ತಪ್ಪಿಸಲು ಧೋನಿ ಮತ್ತು ದ್ರಾವಿಡ್ ಅವರನ್ನು ಮುನ್ನೆಲೆಗೆ ತರಲಾಗುತ್ತಿದೆ ಎನ್ನುವ ಮಾತುಗಳೂ ಇವೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ದೂರವಾಗಿ ಒಂದೂವರೆ ವರ್ಷವಾದರೂ ನಾಯಕತ್ವದ ಗುಣಗಳನ್ನು ಬಿಟ್ಟುಕೊಡದ ಧೋನಿ ಈ ಬಾರಿಯ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದಾರೆ. ಹೋದ ಸಲ ಪ್ಲೇ ಆಫ್ ಕೂಡ ಪ್ರವೇಶಿಸದ ತಂಡಕ್ಕೆ ಕಿರೀಟ ತೊಡಿಸಿದ್ದಾರೆ. ಯುವ ಮತ್ತು ಅನುಭವಿ ಆಟಗಾರರನ್ನು ಸಮರ್ಥವಾಗಿ ಬಳಸಿಕೊಳ್ಳುವ ಪರಿಯನ್ನು ಧೋನಿ ತೋರಿಸಿಕೊಟ್ಟಿದ್ದಾರೆ. ಅವರ ಈ ಗುಣವೇ ಟಿ20 ವಿಶ್ವಕಪ್ ಗೆಲುವಿಗೆ ನಾಂದಿಯಾಗಬಹುದು. ಇದರಿಂದಾಗಿ ಐಸಿಸಿ ಕಪ್ ಗೆದ್ದ ನಾಯಕರಲ್ಲಿ ವಿರಾಟ್ ಕೂಡ ಒಬ್ಬರಾಗಬಹುದು.

ನವೆಂಬರ್‌ನಲ್ಲಿ ರವಿಶಾಸ್ತ್ರಿ ನಿರ್ಗಮನದ ನಂತರ ದ್ರಾವಿಡ್ ಕೋಚ್ ಆಗಲಿದ್ದಾರೆ. 2023ರಲ್ಲಿ ಭಾರತ ಆಯೋಜಿಸಲಿರುವ ಏಕದಿನ ವಿಶ್ವಕಪ್ ವಿಜಯದ ಪೂರ್ವಸಿದ್ಧತೆಯ ಪ್ರಮುಖ ಭಾಗ ಇದಾಗಲಿದೆ. ಅಲ್ಲದೇ ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪ್ರಶಸ್ತಿ ಜಯದ ಮೇಲೂ ಕಣ್ಣಿಟ್ಟಿರುವ ಭಾರತಕ್ಕೆ 'ಗೋಡೆ' ಖ್ಯಾತಿಯ ದ್ರಾವಿಡ್ ಮಾರ್ಗದರ್ಶನ ಫಲಪ್ರದವಾಗುವ ನಿರೀಕ್ಷೆ ಇದೆ.

ಆದರೆ, ಬೆಂಕಿಚೆಂಡಿನಂತೆ ಪುಟಿಯುವ ವಿರಾಟ್ ಮತ್ತು ಹಿಮಗೋಡೆಯಂತಹ ತಣ್ಣನೆಯ ಸ್ವಭಾವದ ದ್ರಾವಿಡ್ ಅವರ ನಡುವಿನ ಹೊಂದಾಣಿಕೆ ಹೇಗಿರುವುದೋ ಎಂಬ ಕುತೂಹಲವೂ ಕ್ರಿಕೆಟ್ ವಲಯದಲ್ಲಿ ಗರಿಗೆದರಿದೆ. ನಾಲ್ಕು ವರ್ಷಗಳ ಹಿಂದೆ ಅನಿಲ್ ಕುಂಬ್ಳೆ ಕೋಚ್ ಹುದ್ದೆಯನ್ನು ಬಿಟ್ಟು ಹೊರಬಂದಾಗ ವರದಿಯಾಗಿದ್ದ ಹಲವು ಸಂಗತಿಗಳನ್ನು ಕ್ರಿಕೆಟ್ ಪ್ರೇಮಿಗಳು ಈಗಲೂ ಮರೆತಿಲ್ಲ. ಇವತ್ತು ಭಾರತ ತಂಡದ ಬೆಂಚ್‌ನಲ್ಲಿ ಯುವಪ್ರತಿಭೆಗಳ ದೊಡ್ಡ ದಂಡು ಕಾಣಲು ದ್ರಾವಿಡ್ ಕಾರಣ. ಭಾರತ 'ಎ' ಮತ್ತು 19 ವರ್ಷದೊಳಗಿನವರ ತಂಡಗಳಿಗೆ ಅವರು ಕೋಚ್ ಆಗಿದ್ದಾಗ ನೀಡಿದ ಕಾಣಿಕೆ ಫಲ ಅದು.

ಆದರೆ ಯುವ ಮತ್ತು ಸೀನಿಯರ್ ತಂಡಗಳ ಡ್ರೆಸ್ಸಿಂಗ್ ರೂಮ್ ವಾತಾವರಣದಲ್ಲಿ ವ್ಯತ್ಯಾಸವಿದೆ. ದ್ರಾವಿಡ್ ಅಲ್ಲಿ ಭವಿಷ್ಯದ ಆಟಗಾರರನ್ನು ರೂಪಿಸಿದ್ದರು. ಆದರೆ ಸೀನಿಯರ್ ತಂಡದಲ್ಲಿರುವ ತಾರೆಗಳನ್ನು ಭಾರತ ಕ್ರಿಕೆಟ್‌ನ ಉಜ್ವಲ ಭವಿಷ್ಯ ಬೆಳಗುವ ಆಟಗಾರರನ್ನಾಗಿ ಮಾಡುವ ಸವಾಲು ದ್ರಾವಿಡ್ ಮುಂದಿದೆ. ಅದರಲ್ಲೂ ವಿರಾಟ್ ನಾಯಕತ್ವದೊಂದಿಗೆ ಅವರು ಹೇಗೆ ಸಮನ್ವಯ ಸಾಧಿಸುತ್ತಾರೆಂಬುದನ್ನು ಮುಂಬರುವ ಕಾಲವೇ ಹೇಳಬೇಕು.

ಚುರುಮುರಿ

ನಿದ್ದೆ ಬರ್ತಿಲ್ಲ...

• ಮಣ್ಣೆರಾಜು

'ಬೈ ಎಲೆಕ್ಷನ್ ಪರೀಕ್ಷೆಯಲ್ಲಿ ಔಟಾಫ್ ಔಟ್ ಫಲಿತಾಂಶ ಪಡೆಯಬೇಕು ಅಂತ ಸಿಎಂ ಬಸಣ್ಣ ರಾತ್ರಿ ನಿದ್ದೆಗೆಟ್ಟು, ಹಗಲು ನೆಮ್ಮದಿ ಬಿಟ್ಟು ಹಾರ್ಡ್‌ವರ್ಕ್ ಮಾಡ್ತಿದ್ದಾರೆ ಕಣ್ರೀ...' ಎಂದಳು ಸುಮಿ.

'ಬೈ ಎಲೆಕ್ಷನ್ ಬಾಧೆ ಎಲ್ಲರ ನಿದ್ದೆಗೆಡಿಸಿದೆ. ಜೆಡಿಎಸ್ ಜಪ ಮಾಡದೆ ಸಿದ್ದರಾಮಣ್ಣರ ಕಣ್ಣಿಗೆ ನಿದ್ದೆ ಹತ್ತುವುದಿಲ್ಲ ಅಂತ ಕುಮಾರಣ್ಣನೇ ಹೇಳಿದ್ದಾರೆ' ಎಂದ ಶಂಕ್ರಿ.

'ಕಂಡಲ್ಲಿ ಗುಂಡು ಎನ್ನುವಂತೆ ಮೈಕ್ ಕಂಡಲ್ಲೆಲ್ಲಾ ಸಿದ್ದರಾಮಣ್ಣ ಕಿಡಿಗುಂಡು ಹಾರಿಸಿ ಕುಮಾರಣ್ಣನ ನಿದ್ದೆ ಕಸಿಯುತ್ತಿದ್ದಾರಂತೆ ಕಣ್ರೀ. ಅಷ್ಟೇ ಅಲ್ಲ, ಸಿದ್ದರಾಮಣ್ಣ ತಮಗೆ ನಿದ್ದೆ ಬರ್ತಿಲ್ಲ ಅಂತ ಬಿಎಸ್‌ವೈಗೂ ನಿದ್ದೆಗೆಡಿಸಿ ನಡುರಾತ್ರಿ ರಾಜಕಾರಣ ಮಾಡಿದ್ದರ ಫಲವೇ ಬಿಎಸ್‌ವೈ ಬಳಗಕ್ಕೆ ಐಟಿ ಏಟು ಅಂತ ಕುಮಾರಣ್ಣ ಅಂದಾಜು ಮಾಡಿದ್ದಾರೆ'.

'ಮಹಾದೊರೆ ಮೋದಿಯನ್ನೇ ಮನಸಾರೆ ಟೀಕಿಸುವ ಸಿದ್ದರಾಮಣ್ಣ ಮಹಾ ಪರಾಕ್ರಮಿ ಬಿಡು...' ಎಂದು ಮಗ್ಗುಲು ತಿರುಗಿ ಮಲಗಿದ ಶಂಕ್ರಿ.

'ಪರಾಕ್ರಮಿ ಅಲ್ಲವಂತೆ, ದಿಲ್ಲಿಗೆ ಹೋಗಿದ್ದಾಗ ಸಿದ್ದರಾಮಯ್ಯ ಪ್ರಧಾನಿ ಪೋಸ್ಟ್ ಕೇಳುವ ಧೈರ್ಯ ಮಾಡಲಿಲ್ಲ, ಅವರಿಗೆ ರಾಜಕೀಯ ಪುಕ್ಕಲುತನವಿದೆ ಅಂತ ವಿಶ್ವಣ್ಣ ಕಿಡಿ ಹಚ್ಚಿದರಲ್ಲಾ... ಪ್ರಧಾನಿ ಕುರ್ಚಿಗಾಗಿ ಹಲವು ವರ್ಷಗಳಿಂದ ಕಾಯುತ್ತಲೇ ವೃದ್ಧರಾಗಿರುವ ಹತ್ತಾರು ಮಹಾನುಭಾವರಿರುವಾಗ ಹೊಸ ಎಂಟ್ರಿ ಸಿದ್ದರಾಮಯ್ಯರಿಗೆ ಪಿಎಂ ಸೀಟು ಸಿಗುತ್ತಾ ಅಂತ ಹಳ್ಳಿಹಕ್ಕಿ ಪುಕ್ಕ ಬಿಚ್ಚಿ ಪುಕಾರು ಮಾಡಿದೆ ಕಣ್ರೀ'.

'ಹೌದು, ಸಂದರ್ಭ ಸಿಕ್ಕಾಗ ಸಿಕ್ಕಸಿಕ್ಕವರನ್ನು ಕುಟುಕುವ ಕೆಲವು ಮುಖಂಡರು ತಾವೂ ನಿದ್ದೆಗೆಡುವುದಲ್ಲದೆ ಬೇರೆಯವರ ನಿದ್ದೆಯನ್ನೂ ಕೆಡಿಸುತ್ತಿದ್ದಾರಂತೆ'.

'ಏನೇ ಆದರೂ ನಿದ್ರಾಹೀನತೆ ಆರೋಗ್ಯಕ್ಕೆ ಹಾನಿಕರ. ನಾಯಕರು ನಿದ್ದೆಗೆಡುತ್ತಾರೆ ಅಂತ ನಾವು ತಲೆಕೆಡಿಸಿಕೊಂಡು ನಿದ್ದೆಗೆಡುವುದು ಬೇಡ, ಈ ವಿಚಾರ ಇಲ್ಲಿಗೇ ಬಿಟ್ಟು ನೆಮ್ಮದಿಯಾಗಿ ನಿದ್ದೆ ಮಾಡ್ರಿ...' ಎಂದು ಶಂಕ್ರಿಗೆ ಸುಮಿ ರಗ್ಗು ಹೊದಿಸಿದಳು.

ಸಂಗತ

ವಾಲ್ಮೀಕಿ: ಪೂರ್ವಾಶ್ರಮದ ಸುತ್ತ...

ಮಹರ್ಷಿ ವಾಲ್ಮೀಕಿಯನ್ನು ಜ್ಞಾನ ಹಾಗೂ ಹೋರಾಟದ ಸಂಕೇತವಾಗಿ ಪರಿಭಾವಿಸಬೇಕಿದೆ

• ಅರುಣ್ ಜೋಳದಕೂಡ್ಲಿಗಿ

ಕರ್ನಾಟಕದಲ್ಲಿ ಆಚರಿಸಲಾಗುವ ವಾಲ್ಮೀಕಿ ಜಯಂತಿಯ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿಯ ಬಗೆಗೆ ಕಡ್ಡಾಯವಾಗಿ ಉಲ್ಲೇಖಿಸುವ ಕಟ್ಟುಕತೆಯೊಂದಿದೆ. ಅದೆಂದರೆ, ವಾಲ್ಮೀಕಿ ಪೂರ್ವಾಶ್ರಮದಲ್ಲಿ ರತ್ನಾಕರ ಎಂಬ ದರೋಡೆಕೋರನಾಗಿದ್ದ ಎಂಬುದು.

ನಾರದರು ಒಮ್ಮೆ ರತ್ನಾಕರನಿಗೆ ಎದುರಾಗಿ 'ನಿನ್ನ ಅಪರಾಧದಲ್ಲಿ ಮನೆಯವರು ಪಾಲುದಾರರೇ?' ಎನ್ನುತ್ತಾರೆ. ವಿಚಾರಿಸಲಾಗಿ, ರತ್ನಾಕರನ ಕುಟುಂಬ ಆತನ ಅಪರಾಧದಲ್ಲಿ ಪಾಲು ಪಡೆಯಲು ನಿರಾಕರಿಸುತ್ತದೆ. ನಂತರ ರತ್ನಾಕರನಿಗೆ ಅರಿವಾಗಿ ದರೋಡೆಯನ್ನು ನಿಲ್ಲಿಸಿ ತಪಸ್ಸು ಮಾಡುತ್ತಾನೆ. ಬಹುದಿನಗಳ ನಂತರ ತಪಸ್ಸಿಗೆ ಕೂತಲ್ಲಿಯೇ ಬೆಳೆದಿದ್ದ ಹುತ್ತವನ್ನು ಒಡೆದು ವಾಲ್ಮೀಕಿಯಾಗಿ ಹೊರಬಂದು ರಾಮಾಯಣ ರಚಿಸಿದನು ಎನ್ನುವುದು ಈ ಕತೆ.

ವಿಶ್ವವಿದ್ಯಾಲಯಗಳ ಅಧ್ಯಾಪಕರಿಂದ ಮೊದಲುಗೊಂಡು ಸ್ವಾಮೀಜಿಗಳು, ರಾಜಕಾರಣಿಗಳತನಕ ಈ ಕತೆಯನ್ನು ಹೇಳುತ್ತಲೇ ಇದ್ದಾರೆ. ಹಾಗಾದರೆ ವಾಲ್ಮೀಕಿ ದರೋಡೆಕೋರನಾಗಿದ್ದ ಎನ್ನುವುದಕ್ಕೆ ಪುರಾವೆಗಳೇನು?

ಮಹರ್ಷಿ ವಾಲ್ಮೀಕಿ ಮತ್ತು ರಾಮಾಯಣ ಕುರಿತಂತೆ ವ್ಯಾಪಕವಾದ ಅಧ್ಯಯನಗಳು ನಡೆದಿವೆ. ಇತಿಹಾಸತಜ್ಞ ಎಚ್.ಡಿ.ಸಾಂಕಾಲಿಯ ಅವರು ಉಲ್ಲೇಖಿಸಿರುವಂತೆ, 1843ರಿಂದ 1867ರವರೆಗಿನ ಅವಧಿಯಲ್ಲಿ ಗೊರೇಸಿಯೊ ಪ್ರಕಟಿಸಿದ ರಾಮಾಯಣದ ಆರು ಸಂಪುಟಗಳಿಂದ ಈ ಅಧ್ಯಯನ ಆರಂಭವಾಗಿರಬೇಕು, ಎ.ವೆಬರ್ (1873) ಮೊದಲು ಕಾಲ ನಿರ್ಣಯದ ಚರ್ಚೆ ಮಾಡಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವಿಲಿಯಂ ಜೋನ್ಸ್, ರಾಮಸ್ವಾಮಿ ಶಾಸ್ತ್ರಿ, ಆರ್.ಸಿ.ಮಜುಂದಾರ್, ಪಿ.ವಿ.ಕಾಣೆ, ಡಿ.ಡಿ.ಕೊಸಾಂಬಿ, ಎ.ಎಲ್.ಬಾಷಂ, ರೋಮಿಲಾ ಥಾಪರ್, ಇರ್ಫಾನ್ ಹಬೀಬ್, ಅಂಬೇಡ್ಕರ್ ತನಕ ನೂರಾರು ಇತಿಹಾಸ ತಜ್ಞರು, ಪುರಾತತ್ವಜ್ಞರು, ಮಾನವಶಾಸ್ತ್ರಜ್ಞರು ಹಲವು ಜ್ಞಾನಶಾಖೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ವಾಲ್ಮೀಕಿಯ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ, ಕ್ರಿ.ಪೂ. 3ರಿಂದ 5ನೇ ಶತಮಾನದಲ್ಲಿ ವಾಲ್ಮೀಕಿ ಬದುಕಿದ್ದು ರಾಮಾಯಣ ರಚಿಸಿರಬೇಕು ಎಂಬ ನಿಲುವಿದೆ.

ವಾಲ್ಮೀಕಿ ದರೋಡೆಕೋರನಾಗಿದ್ದ ಎನ್ನುವ ಕತೆಯ ಬಗ್ಗೆ ಕರ್ನಾಟಕದಲ್ಲಿ ಆಕ್ಷೇಪಗಳಿಲ್ಲ. ಇದೊಂದು ಒಪ್ಪಿತ ಪಠ್ಯ. ಆದರೆ ಪಂಜಾಬ್ ಒಳಗೊಂಡಂತೆ ಉತ್ತರ ಭಾರತದಲ್ಲಿ ಈ ಕತೆಯ ಬಗ್ಗೆ ಆಕ್ಷೇಪಗಳಿವೆ. ಪಂಜಾಬ್‌ನ ಜಲಂಧರ್ ಜಿಲ್ಲೆಯ ನವ್ವಿಕಾಸ್ ಎನ್ನುವವರು 2009ರ ಅಕ್ಟೋಬರ್ 6ರಂದು ಸ್ಟಾರ್ ಪ್ಲಸ್ ಟಿ.ವಿ ವಾಹಿನಿಯಲ್ಲಿ ಪ್ರಸಾರವಾದ 'ಸಪ್ನ ಬಾಬುಲ್ ಕಾ... ಬಿದಾಯಿ' ಎನ್ನುವ ಧಾರಾವಾಹಿಯಲ್ಲಿ 'ವಾಲ್ಮೀಕಿಯು ದರೋಡೆಕೋರನಾಗಿದ್ದ' ಎನ್ನುವ ಸಂಭಾಷಣೆಯನ್ನು ಆಕ್ಷೇಪಿಸಿ ಕೋರ್ಟ್ ಮೆಟ್ಟಿಲೇರುತ್ತಾರೆ. ಪಂಜಾಬ್-ಹರಿಯಾಣ ಹೈಕೋರ್ಟ್‌ನ ನ್ಯಾಯಮೂರ್ತಿ ರಾಜೀವ್ ಭಲ್ಲಾ ಅವರು ಈ ಕೇಸ್ ವಿಚಾರವಾಗಿ ಪಂಜಾಬ್ ಯೂನಿವರ್ಸಿಟಿಯ ನಿವೃತ್ತ ಪ್ರೊಫೆಸರ್ ಮಂಜುಳಾ ಸಹದೇವ್ ಅವರ 'ಮಹರ್ಷಿ ವಾಲ್ಮೀಕಿ- ಏಕ್ ಸಮೀಕ್ಷಾತ್ಮಕ್ ಅಧ್ಯಯನ್' ಸಂಶೋಧನಾ ಕೃತಿಯಲ್ಲಿನ ಅಂಶಗಳನ್ನು ಉಲ್ಲೇಖಿಸುತ್ತಾರೆ.



ವಾಲ್ಮೀಕಿ ದರೋಡೆಕೋರನಾಗಿದ್ದ ಎನ್ನುವುದಕ್ಕೆ ವೇದಗಳ ಕಾಲದಿಂದ ಕ್ರಿ.ಶ. 9ನೇ ಶತಮಾನದ ತನಕ ಯಾವುದೇ ಉಲ್ಲೇಖಗಳಿಲ್ಲ. ರಾಮಾಯಣದಲ್ಲಿಯೇ ವಾಲ್ಮೀಕಿ ತನ್ನನ್ನು ಭಗವಾನ್, ಮುನಿ, ರಿಷಿ, ಮಹರ್ಷಿ ಎಂದು ಕರೆದುಕೊಂಡಿದ್ದಾನೆ. ಮೊದಲಿಗೆ ಹತ್ತನೇ ಶತಮಾನದ ಸ್ಕಂದ ಪುರಾಣದಲ್ಲಿ ವಾಲ್ಮೀಕಿ ದರೋಡೆಕೋರನಾಗಿದ್ದ ಎಂದು ಉಲ್ಲೇಖ ಸಿಗುತ್ತದೆ. 'ಮರ ಮರ' ಎನ್ನುವ ಮಂತ್ರದ ಉಲ್ಲೇಖ 15ನೇ ಶತಮಾನದ 'ಅಧ್ಯಾತ್ಮ ರಾಮಾಯಣ' ಮತ್ತು 16ನೇ ಶತಮಾನದ 'ಆನಂದ ರಾಮಾಯಣ'ದಲ್ಲಿ ಸಿಗುತ್ತದೆ. ಅಂದರೆ 'ಮರ ಮರ' ಮಂತ್ರದಿಂದಲೇ ವಾಲ್ಮೀಕಿ ರಾಮಾಯಣ ರಚಿಸಿದ ಎನ್ನುವುದೂ ಕಟ್ಟುಕತೆ. 13 ಮತ್ತು 16ನೇ ಶತಮಾನಗಳಲ್ಲಿ ರಾಮನನ್ನು ವಿಷ್ಣುವಿನ ಅವತಾರ ಎಂದು ದೈವೀಕರಿಸಿದ ಮೇಲೆ ವಾಲ್ಮೀಕಿಯ ಬಗೆಗೆ ಇಂತಹ ಕತೆಗಳು ಹೆಣೆಯಲ್ಪಟ್ಟಿವೆ. ಅಂದರೆ ವಾಲ್ಮೀಕಿ ಬದುಕಿದ್ದ 1,500 ವರ್ಷಗಳ ನಂತರ ಆತ 'ದರೋಡೆಕೋರನಾಗಿದ್ದ' ಎನ್ನುವ ಕತೆ ಸಿಗುತ್ತದೆ. ಹೀಗಾಗಿ ಯಾವುದೇ ಅಧಿಕೃತ ದಾಖಲೆಗಳಿಲ್ಲದೆ ಪುರಾಣವನ್ನು ಉಲ್ಲೇಖಿಸುವುದು ಸರಿಯಲ್ಲ. 2009ರ 'ಸ್ಟಾರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್' ಕೇಸಿನಲ್ಲಿ ನ್ಯಾಯಮೂರ್ತಿ ರಾಜೀವ್ ಭಲ್ಲಾ 'ವಾಲ್ಮೀಕಿ ಋಷಿ-ಪೂರ್ವದಲ್ಲಿ ದರೋಡೆಕೋರನಾಗಿರಲಿಲ್ಲ' ಎನ್ನುವ ತೀರ್ಪು ನೀಡುತ್ತಾರೆ. 2019ರಲ್ಲಿ ಪ್ರೊ. ಮಂಜುಳಾ ಸಹದೇವ್ ವಿರುದ್ಧದ ಕೇಸಿನಲ್ಲಿ ನ್ಯಾಯಮೂರ್ತಿ ಅರವಿಂದ್ ಸಿಂಗ್ ಸಾಂಗ್ವಾನ್ ಅವರು ಕೂಡ ಈ ತೀರ್ಪನ್ನು ಎತ್ತಿಹಿಡಿದಿದ್ದಾರೆ.

ಮಹರ್ಷಿ ವಾಲ್ಮೀಕಿಯ ಬಗೆಗಿನ ಅಧ್ಯಯನಗಳನ್ನು ಆಧರಿಸಿ ನೋಡುವುದಾದರೆ, ವಾಲ್ಮೀಕಿ ಭರತ ಖಂಡದ ಆದಿಕವಿ, ಬೇಡ ಸಮುದಾಯದ ಮೊದಲ ಸಾಕ್ಷರ. ಕೆಳಜಾತಿ ಜನರು ಯಾವುದೇ ಮಹತ್ಸಾಧನೆಯನ್ನು ಮಾಡಿದಾಗ ಪ್ರಬಲ ಜಾತಿಗಳು ಅವರ ಹುಟ್ಟನ್ನೇ ಅನುಮಾನಿಸುವ, ಅವರ ಚಾರಿತ್ರ್ಯವನ್ನು ತಿರುಚುವ ಯತ್ನ ನಡೆದೇ ಇದೆ. ವಾಲ್ಮೀಕಿ ಋಷಿ ಪೂರ್ವದಲ್ಲಿ ದರೋಡೆಕೋರನಾಗಿದ್ದ ಎನ್ನುವ ಕಟ್ಟುಕಥೆ ಕೂಡ ಇಂತಹದ್ದೇ ಒಂದು ಪ್ರಯತ್ನ. ಹಾಗಾಗಿ ವಾಲ್ಮೀಕಿಯನ್ನು ಅಕ್ಷರ, ಶಿಕ್ಷಣ, ಜ್ಞಾನ, ಹೋರಾಟದ ಸಂಕೇತವಾಗಿ ಪರಿಭಾವಿಸಬೇಕಿದೆ.

ಇನ್ನಾದರೂ ವಾಲ್ಮೀಕಿ ಋಷಿಪೂರ್ವದಲ್ಲಿ ದರೋಡೆಕೋರನಾಗಿದ್ದ ಎನ್ನುವ ಕಟ್ಟುಕತೆಯನ್ನು ಉಲ್ಲೇಖಿಸುವುದು ಬಿಡಬೇಕು. ಹಾಗೆ ಹೇಳುವುದನ್ನು ಮಹರ್ಷಿ ವಾಲ್ಮೀಕಿಯ ಚಾರಿತ್ರ್ಯವಧೆ ಎಂದು ಪರಿಭಾವಿಸಬೇಕು.

ವಾಚಕರ ವಾಣಿ

ಕಲ್ಲಿದ್ದಲು ಕೊರತೆ: ಗೊಂದಲ ಸೃಷ್ಟಿ ಸರಿಯಲ್ಲ

ಇನ್ನು ಮೂರ್ನಾಲ್ಕು ದಿನಗಳಿಗೆ ಆಗುವಷ್ಟು ಮಾತ್ರ ಕಲ್ಲಿದ್ದಲು ಲಭ್ಯವಿದೆ ಎಂಬ ಸುದ್ದಿ ಕಳೆದ ವಾರ ಬಂದಾಗ, ವಿದ್ಯುತ್ ಸಮಸ್ಯೆಯ ಭೀತಿಯಿಂದಾಗಿ ದೇಶದಾದ್ಯಂತ ತಲ್ಲಣ, ಕೋಲಾಹಲ ಉಂಟಾಯಿತು. ಆದರೆ, ಇನ್ನೂ ಕೆಲ ದಿನಗಳಿಗೆ ಬೇಕಾಗುವಷ್ಟು ಕಲ್ಲಿದ್ದಲು ಪೂರೈಕೆ ಇದೆ, ಭಯ ಬೇಡ ಎಂದು ಕೇಂದ್ರ ಕಲ್ಲಿದ್ದಲು ಖಾತೆ ಸಚಿವರು ಪ್ರತಿಕ್ರಿಯಿಸಿದರು. ಬಹುಪಾಲು ವಿದ್ಯುತ್ ಸ್ಥಾವರಗಳು ಕಲ್ಲಿದ್ದಲು ಆಧಾರಿತ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲ್ಲಿದ್ದಲಿನ ಬೆಲೆ ಹೆಚ್ಚಿ ಪೂರೈಕೆ ಕಡಿಮೆಯಾಯಿತು. ಇತ್ತ ದೇಶದಲ್ಲಿ ಮುಂಗಾರು ಕಾರಣ ಆಂತರಿಕ ಉತ್ಪಾದನೆಯೂ ಕುಂಠಿತವಾಗಿತ್ತು. ಇದೀಗ ಮುಂಗಾರು ಮುಕ್ತಾಯವಾಗುತ್ತಿರುವುದರಿಂದ ಪೂರೈಕೆ ಸುಧಾರಿಸಲಿದೆ ಎಂಬ ಆಶಾಭಾವ ಇದೆ. ಇದೆಲ್ಲಾ ಸರಿಯೇ. ಆದರೆ ಅಭಾವ ಉಂಟಾಗುವ ಅಂದಾಜು ಸರ್ಕಾರಕ್ಕೆ ಇರಲಿಲ್ಲವೇ? ಇದ್ದಿದ್ದರೆ ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು.

ವಿದ್ಯುತ್ ಉತ್ಪಾದನೆ ಕಡಿಮೆಯಾದರೆ ಅದರಿಂದ ಬೇರೆ ಬೇರೆ ರೀತಿಯ ಪರಿಣಾಮಗಳೂ ಆಗುತ್ತವೆ. ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಪೂರೈಕೆ ವ್ಯತ್ಯಯವಾಗುತ್ತದೆ ಎಂಬ ಸುದ್ದಿಯನ್ನು ಸ್ವತಃ ವಿದ್ಯುತ್ ಸರಬರಾಜು ಕಂಪನಿಗಳೇ ಹಬ್ಬಿಸಿ ಜನರಲ್ಲಿ ಗೊಂದಲ ಸೃಷ್ಟಿಸಿವೆ ಎಂಬುದು ವಿದ್ಯುತ್ ಸಚಿವರ ಆರೋಪ. ಇದು ನಿಜವಾಗಿದ್ದರೆ ಸಲ್ಲದ ನಡವಳಿಕೆ ಎಂದೇ ಹೇಳಬೇಕಾಗುತ್ತದೆ. ಇದೇ ಸಮಯ ಎಂದುಕೊಂಡು ಪ್ರತಿಪಕ್ಷಗಳೂ ಸರ್ಕಾರದ ಮೇಲೆ ಮುಗಿಬಿದ್ದಿವೆ. ದೆಹಲಿ ಕಗ್ಗತ್ತಲಿಗೆ ಸರಿಯಲಿದೆ ಎಂದು ಅಲ್ಲಿನ ಉಪಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಈ ರೀತಿಯ ಹೇಳಿಕೆಗಳು ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸುತ್ತವೆ. ಸಮಸ್ಯೆ ಇದ್ದರೂ ಅದನ್ನು ಸೂಕ್ತವಾಗಿ ಹೇಗೆ ಪರಿಹರಿಸಬಹುದು ಎಂಬುದರ ಬಗ್ಗೆ ಎಲ್ಲರೂ ಗಮನ ಹರಿಸಬೇಕೇ ಹೊರತು ಗೊಂದಲ ಸೃಷ್ಟಿಸಬಾರದು. ಇದರಿಂದ ಯಾರಿಗೂ ಲಾಭವಿಲ್ಲ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಅವೈಜ್ಞಾನಿಕ ಆಲೋಚನೆಗೆ ದಾರಿ

ಶಾಸಕ ಜಮೀರ್ ಅಹ್ಮದ್ ಅವರು ತಮ್ಮ ಒಡೆತನದ ಅತಿಥಿಗೃಹವನ್ನು ಸಿದ್ದರಾಮಯ್ಯ ಅವರ ರಾಜಕೀಯ ಚಟುವಟಿಕೆಗಳಿಗೆ ಬಿಟ್ಟುಕೊಡುವ ನಿರ್ಧಾರ (ಪ್ರ.ವಾ., ಅ. 12) ವೈಯಕ್ತಿಕವಾದುದು. ಅದಕ್ಕೆ ಯಾರದೂ ಅಭ್ಯಂತರ ಇರಲಾರದು. ಆದರೆ, ಎಚ್.ಡಿ.ಕುಮಾರಸ್ವಾಮಿ ಅವರು ಇದೇ ಅತಿಥಿಗೃಹದಲ್ಲಿ ಇದ್ದದ್ದರಿಂದಲೇ ಅವರಿಗೆ ಅದೃಷ್ಟ ಒಲಿದುಬಂದು ಎರಡು ಬಾರಿ ಮುಖ್ಯಮಂತ್ರಿಯಾದರು ಎಂಬ ತಮ್ಮ ನಂಬಿಕೆಯನ್ನು ಅವರು ಇದಕ್ಕೆ ಆಧಾರವಾಗಿ ನೀಡಿದ್ದು ಸರಿಯಲ್ಲ. ಹಾಗೆಯೇ, ಪ್ರಸ್ತುತ ಶಾಸಕರು ಮಾತ್ರ ಇಂಥ ನಂಬಿಕೆಗೆ ಮೊದಲಿಗರೇನೂ ಅಲ್ಲ. ಇತ್ತೀಚೆಗೆ, ಇಡೀ ಸಮಾಜ ಒಂದಲ್ಲ ಒಂದು ರೀತಿಯ ಕುರುಡು ನಂಬಿಕೆಗಳನ್ನು ಸೃಷ್ಟಿ ಮಾಡುವ ಕಾರ್ಖಾನೆಯಾಗುತ್ತಿದೆ ಎನ್ನುವುದೇ ಆತಂಕಕಾರಿ.

ಜನತಂತ್ರದಲ್ಲಿ ಯಾರೇ ಆಗಲಿ ಜನಪ್ರತಿನಿಧಿಯಾಗಿ ಆಯ್ಕೆಯಾಗಿ ಬರುವುದು ಅವರ 'ಅದೃಷ್ಟ'ದಿಂದಲ್ಲ, ಜನರು ಅವರ ಕೆಲಸಕಾರ್ಯಗಳನ್ನು ಮೆಚ್ಚಿ ಅವರನ್ನು ತಮ್ಮ ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿಕೊಂಡಾಗ ಮಾತ್ರ. ಆದ್ದರಿಂದ, ಜನನಾಯಕರು ಜನಹಿತದ ಕಾರ್ಯಗಳನ್ನು ಮಾಡಿ, ಜನರ ಮನಸ್ಸನ್ನು ಗೆಲ್ಲಲಿ. ಅದನ್ನೇ 'ಅದೃಷ್ಟ' ಎಂದು ಒಪ್ಪಬಹುದು. ಇವೆಲ್ಲದರ ನಡುವೆ ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಬೆಳೆಸುವುದು ಹೇಗೆ ಎಂಬ ಬಗ್ಗೆ ಚಿಂತನೆ ಕೂಡ ನಡೆಯಬೇಕಾಗಿದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ವಿರೋಧ ಪಕ್ಷದ ನಾಯಕನಿಗಿದೆ ಮಹತ್ವ

ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು 'ಪುಟಗೋಸಿ'ಗೆ ಹೋಲಿಸಿರುವುದು ದುರದೃಷ್ಟಕರ. ಸ್ವತಃ ಹಿಂದೆ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಕುಮಾರಸ್ವಾಮಿ ಇಂತಹ ಅಪ್ರಬುದ್ಧ ಹೇಳಿಕೆ ನೀಡುವ ಮೂಲಕ ತಮ್ಮನ್ನು ತಾವೇ ಅವಮಾನಿಸಿಕೊಂಡಿದ್ದಾರೆ.

ಸಂಸತ್ತು ಹಾಗೂ ರಾಜ್ಯಗಳ ಶಾಸನಸಭೆಗಳಲ್ಲಿ ವಿರೋಧ ಪಕ್ಷದ ನಾಯಕನಿಗೆ ಹೆಚ್ಚಿನ ಮಹತ್ವವಿದೆ. ಅವರನ್ನು ಲೋಕಸಭೆಯಲ್ಲಿ ಛಾಯಾ ಪ್ರಧಾನಮಂತ್ರಿ ಎಂತಲೂ ವಿಧಾನಸಭೆಯಲ್ಲಿ ಛಾಯಾ ಮುಖ್ಯಮಂತ್ರಿ ಎಂತಲೂ ಕರೆಯಲಾಗುತ್ತದೆ. ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡುವುದರ ಜೊತೆಗೆ ಸರ್ಕಾರಿ ಬಂಗಲೆ, ಕಚೇರಿ, ವಾಹನ ಮತ್ತಿತರ ಸೌಲಭ್ಯಗಳನ್ನು ಸರ್ಕಾರದ ವತಿಯಿಂದಲೇ ನೀಡಲಾಗುತ್ತದೆ. ರಾಜ್ಯ ಸರ್ಕಾರದ ಅಧಿಕಾರಿಗಳಿಂದ ಅವರು ಯಾವುದೇ ಮಾಹಿತಿ ಪಡೆಯಬಹುದು. ಒಂದು ವೇಳೆ ಆಡಳಿತ ಪಕ್ಷವು ಸದನದ ವಿಶ್ವಾಸ ಕಳೆದುಕೊಂಡರೆ, ಪರ್ಯಾಯ ಸರ್ಕಾರ ರಚಿಸುವ ಅವಕಾಶ ಕೂಡ ವಿರೋಧ ಪಕ್ಷದ ನಾಯಕನಿಗೆ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಇರುವಷ್ಟೇ ಮಹತ್ವ ಪ್ರತಿಪಕ್ಷಗಳಿಗೂ ಇದೆ. ಹೀಗಾಗಿ ಪ್ರತಿಪಕ್ಷದ ನಾಯಕನನ್ನು ಕೀಳಾಗಿ ಬಿಂಬಿಸುವ ಕೆಲಸ ಸರ್ವಥಾ ಖಂಡನೀಯ.

ಕೆ.ವಿ.ವಾಸು, ಮೈಸೂರು

ಪಟಾಕಿ ನಿಷೇಧ ಇಂದಿನ ತುರ್ತು

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಪಟಾಕಿಗಳನ್ನು ನಿಷೇಧಿಸಿರುವ ತಮ್ಮ ನಿರ್ಧಾರವನ್ನು ಪರಾಮರ್ಶಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ (ಪ್ರ.ವಾ., ಅ. 16). ತಮಿಳುನಾಡಿನಲ್ಲಿ ಪಟಾಕಿ ತಯಾರಿಕೆ ಇಡೀ ದೇಶದಲ್ಲಿ ಅತ್ಯಂತ ದೊಡ್ಡ ಕೈಗಾರಿಕೆಯಾಗಿದ್ದು, ಪಟಾಕಿ ನಿಷೇಧಿಸಿದರೆ ಇದನ್ನು ನಂಬಿಕೊಂಡಿರುವ ಸುಮಾರು ಎಂಟು ಲಕ್ಷ ಕಾರ್ಮಿಕರ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ ಎಂಬುದು ಅವರ ವಾದ. ಸರಿಯೇ, ಆದರೆ ಪಟಾಕಿಗಳ ಮಾಲಿನ್ಯದ ಕುರಿತು ಈಚೆಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವುದನ್ನು ಗಮನಿಸಿದರೆ, ನಮ್ಮ ದೇಶದಲ್ಲಿ ಹದಗೆಟ್ಟಿರುವ ವಾಯುಮಾಲಿನ್ಯಕ್ಕೆ ಪಟಾಕಿಗಳ ಕೊಡುಗೆ ಎಷ್ಟಿದೆ ಎಂಬುದು ತಿಳಿಯುತ್ತದೆ.

ಪಟಾಕಿ ಕಾರ್ಮಿಕರಿಗೆ ಪುನರ್ವಸತಿ ಯೋಜನೆಗಳಿಗೆ ನಮ್ಮಲ್ಲೇನು ಕೊರತೆಯೇ? ಅನೇಕ ಗುಡಿಕೈಗಾರಿಕೆಗಳಲ್ಲಿ ಅವರಿಗೆ ಅವಕಾಶ ಕಲ್ಪಿಸಿಕೊಟ್ಟು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕಿರುವುದು ಅಧಿಕಾರ ವಹಿಸಿಕೊಂಡವರ ಕರ್ತವ್ಯ. ಎಷ್ಟೋ ವೇಳೆ ಪಟಾಕಿ ತಯಾರಿಸುವ ಕಾರ್ಖಾನೆಗಳಲ್ಲಿಯೇ ಅವಘಡಗಳುಂಟಾಗಿ ಲೆಕ್ಕವಿಲ್ಲದಷ್ಟು ಕಾರ್ಮಿಕರು ಸುಟ್ಟುಕರಕಲಾಗಿದ್ದಾರೆ ಎಂಬುದು ತಿಳಿದ ವಿಚಾರವೇ. ಪಟಾಕಿ ನಿಷೇಧವು ಕಾರ್ಮಿಕರಿಗೆ ಬೇರೆ ದುಡಿಮೆಯಲ್ಲಿ ಪಾಲ್ಗೊಳ್ಳಲು ಅವಕಾಶ ಒದಗಿಸುತ್ತದೆ ಮತ್ತು ಮುಖ್ಯವಾಗಿ ಪರಿಸರ ಮತ್ತು ಜನರ ಆರೋಗ್ಯವನ್ನು ಸುಧಾರಿಸುತ್ತದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಲೇರಿಯಾ ಲಸಿಕೆಗೆ ಅನುಮೋದನೆ

ಜಗತ್ತಿನ ಬಡರಾಷ್ಟ್ರಗಳನ್ನು ಹಲವು ದಶಕಗಳಿಂದ ಕಾಡುತ್ತಿರುವ ಮಲೇರಿಯಾ ಮಹಾಮಾರಿ ವಿರುದ್ಧ ಬಳಸಬಹುದಾದ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ ಇದೇ ಮೊದಲ ಬಾರಿಗೆ ಅನುಮೋದನೆ ನೀಡಿದೆ. ಗ್ಲಾಕ್ಸೋಸ್ಮಿತ್‌ಕ್ಲಿನ್ ಕಂಪನಿ ಅಭಿವೃದ್ಧಿಪಡಿಸಿ, ತಯಾರಿಸಲಿರುವ ಮಾಸ್ಕ್ವಿರಿಕ್ಸ್ ಲಸಿಕೆಯನ್ನು ಮಲೇರಿಯಾ ತಡೆಗಟ್ಟಲು ತುರ್ತು ಸಂದರ್ಭದಲ್ಲಿ ಬಳಸಲು ಆರೋಗ್ಯ ಸಂಸ್ಥೆ ಅಕ್ಟೋಬರ್ ಮೊದಲ ವಾರದಲ್ಲಿ ಅನುಮೋದನೆ ನೀಡಿದೆ.

30 ವರ್ಷಗಳಿಂದ ಹಲವು ಲಸಿಕೆಗಳು ಮೂರನೇ ಹಂತದ ವೈದ್ಯಕೀಯ ಪ್ರಯೋಗಗಳನ್ನು ಪೂರೈಸಿದ್ದರೂ, ವಿಶ್ವ ಆರೋಗ್ಯ ಸಂಸ್ಥೆಯ ಅನುಮೋದನೆ ಪಡೆದಿರಲಿಲ್ಲ. ಅನುಮೋದನೆ ಪಡೆಯಲು ಲಸಿಕೆಗಳು ಮಲೇರಿಯಾ ವಿರುದ್ಧ ಕನಿಷ್ಠ ಶೇ 75ರಷ್ಟು ಪರಿಣಾಮ ಬೀರಬೇಕು ಎಂಬ ಷರತ್ತನ್ನು ಆರೋಗ್ಯ ಸಂಸ್ಥೆ ವಿಧಿಸಿತ್ತು. ಮಾಸ್ಕ್ವಿರಿಕ್ಸ್ ಲಸಿಕೆಯು ಮಲೇರಿಯಾ ವಿರುದ್ಧ ಶೇ 75ಕ್ಕಿಂತ ಹೆಚ್ಚು ಪರಿಣಾಮ ಹೊಂದಿದೆ ಎಂಬುದು ಈಚೆಗಷ್ಟೇ ಪೂರ್ಣಗೊಂಡ ಎರಡನೇ ಹಂತದ ಕ್ಲಿನಿಕಲ್ ಟ್ರಯಲ್‌ನಲ್ಲಿ ಸಾಬೀತಾಗಿದೆ.

ಆಫ್ರಿಕಾದ ಹಲವು ದೇಶಗಳ 5ರಿಂದ 17 ತಿಂಗಳ ವಯೋಮಾನದ 450 ಮಕ್ಕಳನ್ನು ಈ ಪ್ರಯೋಗಕ್ಕೆ ಒಳಪಡಿಸಲಾಗಿತ್ತು. 2021ರ ಜುಲೈನಲ್ಲಿ ವೈದ್ಯಕೀಯ ಪ್ರಯೋಗದ ವರದಿ ಬಹಿರಂಗವಾಗಿತ್ತು. ಈಗ, ಈ ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ದೊರೆತಿದೆ.

ಈ ಲಸಿಕೆಯ ಮೂರನೇ ಹಂತದ ವೈದ್ಯಕೀಯ ಪ್ರಯೋಗ ಇನ್ನಷ್ಟೇ ಆರಂಭವಾಗಬೇಕಿದೆ. ಮಲೇರಿಯಾ ತೀವ್ರವಾಗಿರುವ ಆಫ್ರಿಕಾದ ನಾಲ್ಕು ದೇಶಗಳನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ದೇಶಗಳ 4,800 ಮಕ್ಕಳನ್ನು ಮೂರನೇ ಹಂತದ ವೈದ್ಯಕೀಯ ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳುವುದಾಗಿ ಕಂಪನಿ ಹೇಳಿದೆ. ಈ ಪ್ರಯೋಗವು, 3-5 ವರ್ಷಗಳಷ್ಟು ದೀರ್ಘವಾಗುವ ಸಂಭವವಿದೆ.

ಮೊದಲ ಹಂತದಲ್ಲಿ ತಯಾರಾಗಲಿರುವ ಮಾಸ್ಕ್ವಿರಿಕ್ಸ್ ಲಸಿಕೆಗಳನ್ನು ಆಫ್ರಿಕಾದ ದೇಶಗಳಾದ ಮಾಲವಿ, ಕೆನ್ಯಾ ಮತ್ತು ಘಾನಾದಲ್ಲಿ ಬಳಸಲು ಯೋಜನೆ ಹಾಕಿಕೊಳ್ಳಲಾಗಿದೆ. ಆಫ್ರಿಕಾದ ದೇಶಗಳಲ್ಲಿ ಪ್ರತಿ ವರ್ಷ 30 ಕೋಟಿಗೂ ಹೆಚ್ಚು ಜನ ಮಲೇರಿಯಾ ರೋಗಕ್ಕೆ ತುತ್ತಾಗುತ್ತಾರೆ. ಇದು ವಿಶ್ವದ ಬೇರೆಲ್ಲಾ ದೇಶಗಳಲ್ಲಿ ತಲೆದೋರುವ ಮಲೇರಿಯಾ ಪ್ರಕರಣಗಳಿಂತ ಶೇ 90ರಷ್ಟು ಹೆಚ್ಚು. ಹೀಗಾಗಿ ಆರಂಭದ ಹಂತದಲ್ಲಿ ಈ ಮೂರು ದೇಶಗಳಲ್ಲಿ ಲಸಿಕೆ ನೀಡಿ, ಅದರ ಪರಿಣಾಮವನ್ನು ವಾಸ್ತವ ಜಗತ್ತಿನಲ್ಲಿ ಪರಿಶೀಲಿಸಲಾಗುತ್ತದೆ. ನಂತರವಷ್ಟೇ ಈ ಲಸಿಕೆ ಮಾರುಕಟ್ಟೆಗೆ ಬಿಡುಗಡೆಯಾಗಲಿದೆ.

ಭಾರತಕ್ಕೆ ಸಿಗಲು ಎರಡು ವರ್ಷವಾದರೂ ಬೇಕು

ಮಾಸ್ಕ್ವಿರಿಕ್ಸ್ ಲಸಿಕೆಯು ಮನುಷ್ಯನ ದೇಹದಲ್ಲಿ ಮಲೇರಿಯಾ ವೈರಾಣುವನ್ನು ಸೃಷ್ಟಿಸಿ, ಅದರ ವಿರುದ್ಧ ಹೋರಾಡಲು ಪ್ರತಿರೋಧಕ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ. ಈ ಮೂಲಕ ಮಲೇರಿಯಾ ತಗುಲಿದರೂ, ಅದರ ವೈರಾಣುವಿನ ವಿರುದ್ಧ ಮನುಷ್ಯನ ದೇಹದಲ್ಲಿ ಅಭಿವೃದ್ಧಿಯಾಗಿರುವ ಪ್ರತಿರೋಧಕ ಶಕ್ತಿಯು ಹೋರಾಡುವಂತೆ ಪ್ರಚೋದಿಸುತ್ತದೆ.

ಈ ಲಸಿಕೆಯು ಪೂರ್ಣ ಪ್ರಮಾಣದಲ್ಲಿ ಪ್ರತಿರೋಧಕ ಶಕ್ತಿಯನ್ನು ಅಭಿವೃದ್ಧಿಪಡಿಸಬೇಕೆಂದರೆ, ಪ್ರತಿ ಮಗುವೂ ಕನಿಷ್ಠ ನಾಲ್ಕು ಡೋಸ್‌ಗಳನ್ನು ಪಡೆದುಕೊಳ್ಳಬೇಕು. ಆಗ ಮಾತ್ರ ಮಲೇರಿಯಾವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. 2030ರ ವೇಳೆಗೆ ಜಗತ್ತಿನಿಂದ ಮಲೇರಿಯಾವನ್ನು ನಿರ್ಮೂಲನೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಈ ಲಸಿಕೆಯು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸಿದರೆ, ಮಲೇರಿಯಾವನ್ನು ನಿರ್ಮೂಲನೆ ಮಾಡುವಲ್ಲಿ ಮಹತ್ವದ ಪ್ರಗತಿ ಸಾಧಿಸಿದಂತಾಗುತ್ತದೆ.

ಈಗ ಈ ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಮಾತ್ರ ಬಳಸಲು ಅನುಮತಿ ನೀಡಲಾಗಿದೆ. ಪ್ರಾಯೋಗಿಕವಾಗಿ ಆಫ್ರಿಕಾದ ಮಾಲವಿ, ಕೆನ್ಯಾ ಮತ್ತು ಘಾನಾ ದೇಶಗಳಲ್ಲಿ ಮಾತ್ರವೇ ಈ ಲಸಿಕೆಯನ್ನು ಬಳಸಲಾಗುತ್ತದೆ. ಎರಡು ವರ್ಷಗಳವರೆಗೆ ಲಸಿಕೆಯ ಪರಿಣಾಮವನ್ನು ಅಧ್ಯಯನ ಮಾಡಲಾಗುತ್ತದೆ. ಆನಂತರವಷ್ಟೇ ಬೇರೆ ದೇಶಗಳಲ್ಲಿ ಈ ಲಸಿಕೆಯನ್ನು ಬಳಸಲು ಅನುಮೋದನೆ ನೀಡುವ ಸಾಧ್ಯ ಇದೆ. ಹೀಗಾಗಿ ಭಾರತವೂ ಸೇರಿದಂತೆ ಮಲೇರಿಯಾದಿಂದ ಬಳಲುತ್ತಿರುವ ವಿಶ್ವದ ಎಲ್ಲಾ ದೇಶಗಳಿಗೆ ಲಸಿಕೆ ದೊರೆಯುವ ಸಾಧ್ಯತೆ ಇರುವುದು ಎರಡು ವರ್ಷಗಳ ನಂತರವಷ್ಟೇ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ



ಜಗತ್ತನ್ನು ಕಾಡುತ್ತಿದೆ ಮಾರಕ ರೋಗ

ಸೋಂಕುಪೀಡಿತ ಹೆಣ್ಣು ಅನಾಫಿಲಿಸ್ ಸೊಳ್ಳೆಗಳ ಕಚ್ಚುವಿಕೆಯ ಮೂಲಕ ಮನುಷ್ಯರಿಗೆ ಹರಡುವ ಮಲೇರಿಯಾ ಜಗತ್ತನ್ನು ಕಾಡುತ್ತಿದೆ. 2019ರಲ್ಲಿ 22.9 ಕೋಟಿ ಮಲೇರಿಯಾ ಸೋಂಕಿತರು ಪತ್ತೆಯಾಗಿದ್ದು, 4.09 ಲಕ್ಷ ಸಾವುಗಳಿಗೆ ಇದು ಕಾರಣವಾಗಿತ್ತು. ಆಫ್ರಿಕಾ ವಲಯವು ಜಾಗತಿಕ ಮಲೇರಿಯಾ ಹೊರೆಯಲ್ಲಿ ಅತ್ಯಧಿಕ ಪಾಲು ಹೊಂದಿದೆ. 2019ರಲ್ಲಿ ಈ ಪ್ರದೇಶದಲ್ಲಿ ಶೇ 94ರಷ್ಟು ಪ್ರಕರಣ ವರದಿಯಾಗಿದ್ದವು. ಭಾರತವು ಶೇ 2ರಷ್ಟು ಸೋಂಕಿನ ಪಾಲನ್ನು ಹೊಂದಿದೆ. ಆಗ್ನೇಯ ಏಷ್ಯಾ ವಲಯದಲ್ಲಿ ಭಾರತವು ಶೇ 85ರಷ್ಟು ಮಲೇರಿಯಾ ಪ್ರಕರಣಗಳಿಗೆ ನೆಲೆಯಾಗಿದೆ.

5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮಲೇರಿಯಾಕ್ಕೆ ಹೆಚ್ಚಾಗಿ ಬಾಧಿತರಾಗುತ್ತಿದ್ದಾರೆ. 2019ರಲ್ಲಿ ವಿಶ್ವದಾದ್ಯಂತದ ಈ ವಯೋಮಾನದ ಶೇ 67ರಷ್ಟು (2.74 ಲಕ್ಷ) ಮಕ್ಕಳು ಮೃತಪಟ್ಟಿದ್ದಾರೆ. ಆದರೆ, ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. 2000–2019ರ ಅವಧಿಯಲ್ಲಿ ಪ್ರಕರಣಗಳ ಸಂಖ್ಯೆ 2 ಕೋಟಿಯಿಂದ 60 ಲಕ್ಷಕ್ಕೆ ಇಳಿಕೆಯಾಗಿದೆ. ಪ್ರಕರಣಗಳ ಪ್ರಮಾಣ ಶೇ 71.8ರಷ್ಟು ಕಡಿಮೆಯಾಗಿವೆ. ಹಾಗೆಯೇ ಮಲೇರಿಯಾದಿಂದ ಆಗುವ ಸಾವಿನ ಪ್ರಮಾಣವೂ ಶೇ 73.9ರಷ್ಟು ಕಡಿಮೆಯಾಗಿದೆ ಎಂದು ಕಳೆದ ಡಿಸೆಂಬರ್‌ನಲ್ಲಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿತ್ತು.

ಮಲೇರಿಯಾವನ್ನು ಅತ್ಯಂತ ಮಾರಣಾಂತಿಕ ರೋಗ ಎಂದು ಕರೆಯಲಾಗುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗಳು ಆಗಿದ್ದರೂ, ಈಗಲೂ ಪ್ರತಿ ವರ್ಷ ನಾಲ್ಕು ಲಕ್ಷದಷ್ಟು ಜನರು ಇದಕ್ಕೆ ಬಲಿಯಾಗುತ್ತಿದ್ದಾರೆ. 20 ವರ್ಷಗಳ ಹಿಂದೆ ಸಾವಿನ ಪ್ರಮಾಣ ದುಪ್ಪಟ್ಟು ಇತ್ತು. ಆಫ್ರಿಕಾದ ನೈಜೀರಿಯಾ, ಕಾಂಗೋ, ಟಾಂಜಾನಿಯಾ, ಮೊಜಾಂಬಿಕ್, ನೈಜರ್ ಮತ್ತು ಬುರ್ಕಿನಾ ಫಾಸೊ ದೇಶಗಳಲ್ಲಿ ವಾರ್ಷಿಕ ಸಾವಿನ ಪ್ರಮಾಣದಲ್ಲಿ ಅರ್ಧದಷ್ಟು ಸಾವುಗಳಿಗೆ ಮಲೇರಿಯಾ ಕಾರಣವಾಗಿದೆ.

ಕಳೆದ ಕೆಲವು ವರ್ಷಗಳಲ್ಲಿ ಮಲೇರಿಯಾದ ಪರಿಣಾಮವನ್ನು ತಗ್ಗಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಕೀಟನಾಶಕ ಸಿಂಪಡಿಸುವುದು, ಸೊಳ್ಳೆಗಳು ಉತ್ಪತ್ತಿಯಾಗುವ ಪ್ರದೇಶಗಳನ್ನು ಸ್ವಚ್ಛಗೊಳಿಸುವುದರ ಮೂಲಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಮಲೇರಿಯಾ ಮುಕ್ತ ದೇಶಗಳು

11 ದೇಶಗಳು ಮಲೇರಿಯಾ ಮುಕ್ತ ಎಂದು ಘೋಷಿಸಿಕೊಂಡಿವೆ. ಈ ದೇಶಗಳಲ್ಲಿ ಸತತವಾಗಿ ಮೂರು ವರ್ಷಗಳವರೆಗೆ ಶೂನ್ಯ ಪ್ರಕರಣಗಳು ದಾಖಲಾಗಿವೆ.

2007ರಲ್ಲಿ ಯುಎಇ, 2010ರಲ್ಲಿ ಮೊರಾಕ್ಕೊ, ತುರ್ಕ್‌ಮೆನಿಸ್ತಾನ, 2011ರಲ್ಲಿ ಅರ್ಮೇನಿಯಾ, 2016ರಲ್ಲಿ ಶ್ರೀಲಂಕಾ, ಕಿರ್ಗಿಸ್ತಾನ, 2018ರಲ್ಲಿ ಪೆರುಗ್ವೆ, 2017ರಲ್ಲಿ ಉಜ್ಬೇಕಿಸ್ತಾನ, 2019ರಲ್ಲಿ ಅಲ್ಜೀರಿಯಾ, ಅರ್ಜೆಂಟೀನಾ, 2021ರಲ್ಲಿ ಎಲ್ ಸಾಲ್ವಡೋರ್ ದೇಶಗಳು ಮಲೇರಿಯಾ ತೊಡೆದುಹಾಕಿವೆ.

2019ರಲ್ಲಿ 27 ದೇಶಗಳಲ್ಲಿ 100ಕ್ಕಿಂತ ಕಡಿಮೆ ಪ್ರಕರಣಗಳು ವರದಿಯಾಗಿವೆ.

ಲಸಿಕೆ ಅಭಿವೃದ್ಧಿಗೆ ಸುದೀರ್ಘ ಸಮಯ

30 ವರ್ಷಗಳ ಸಂಶೋಧನೆಯ ಫಲವಾಗಿ 'ಮಾಸ್ಕ್ವಿರಿಕ್ಸ್' ಲಸಿಕೆ ತಯಾರಾಗಿದೆ. ಕೋವಿಡ್‌ಗೆ ವರ್ಷದೊಳಗೆ ಲಸಿಕೆ ಕಂಡುಹಿಡಿಯಲಾಯಿತು. ಹೀಗಿರುವಾಗ, ಮಲೇರಿಯಾಗೆ ಇಷ್ಟು ವರ್ಷ ತಗುಲಿದ್ದು ಏಕೆ ಎಂಬ ಕುತೂಹಲ ಮೂಡುತ್ತದೆ. ಅಭಿವೃದ್ಧಿಯಲ್ಲಿನ ತಾಂತ್ರಿಕ ತೊಡಕುಗಳು ವಿಳಂಬಕ್ಕೆ ಮುಖ್ಯ ಕಾರಣ.

ಮಲೇರಿಯಾಗೆ ಕಾರಣವಾಗುವ ಪರಾವಲಂಬಿಗಳ ಜೀವನಚಕ್ರದ ಸಂಕೀರ್ಣತೆ ಹಾಗೂ ಪರಾವಲಂಬಿಯ ಆ್ಯಂಟಿಜನ್ ವ್ಯತ್ಯಾಸಗಳಿಂದಾಗಿ ಪರಿಣಾಮಕಾರಿ ಲಸಿಕೆ ಅಭಿವೃದ್ಧಿ ತೊಡಕಾಗಿ ಪರಿಣಮಿಸಿತ್ತು. ಈ ಪರಾವಲಂಬಿಗಳು ಪ್ರತಿರಕ್ಷಣಾ ವ್ಯವಸ್ಥೆಯಿಂದ ಗುರುತಿಸುವುದನ್ನು ತಪ್ಪಿಸಿಕೊಳ್ಳಲು ಮಾನವ ಜೀವಕೋಶಗಳ ಒಳಗೆ ಅಡಗಿಕೊಳ್ಳುವ ಸಾಮರ್ಥ್ಯ ಸಂಪಾದಿಸಿವೆ ಎಂದು ಆಸ್ಟ್ರೇಲಿಯಾ ಮತ್ತು ಚೀನಾದ ಸಂಶೋಧಕರ ಗುಂಪು ಕಳೆದ ವರ್ಷ ವಿಶ್ಲೇಷಿಸಿತ್ತು.

ಪ್ರತಿರಕ್ಷಣಾ ವ್ಯವಸ್ಥೆಯ ಬಗೆಗಿನ ಸರಿಯಾದ ತಿಳಿವಳಿಕೆಯ ಕೊರತೆ ಮತ್ತೊಂದು ಕಾರಣ. ಜೊತೆಗೆ ನೂರಕ್ಕೂ ಹೆಚ್ಚು ವಿಧದ ಪರಾವಲಂಬಿಗಳ ವಿರುದ್ಧ ಕೆಲಸ ಮಾಡಬಲ್ಲ ಲಸಿಕೆ ಅಭಿವೃದ್ಧಿಪಡಿಸುವುದು ಸವಾಲಾಗಿತ್ತು. ಈಗ ಅಭಿವೃದ್ಧಿಪಡಿಸಿರುವ ಲಸಿಕೆಯು ಪ್ಲಾಸ್ಮೋಡಿಯಂ ಫಾಲ್ಸಿಪ್ಯಾರಮ್ ತಳಿಯನ್ನು ಮಾತ್ರ ಗುರಿಯಾಗಿಸಿಕೊಂಡು ತಯಾರಾಗಿದೆ. ಈ ತಳಿ ಆಫ್ರಿಕಾದಲ್ಲಿ ಅತ್ಯಂತ ಮಾರಕ ಮತ್ತು ಸಾಮಾನ್ಯವಾಗಿದೆ. ಪಿ. ಫಾಲ್ಸಿಪಾರಂ, ಪ್ಲಾಸ್ಮೋಡಿಯಂ ವೈವಾಕ್ಸ್‌ನಂತಹ ಇತರ ಪ್ರಭೇದಗಳು ಭಾರತದಲ್ಲಿ ವ್ಯಾಪಕವಾಗಿವೆ. ಆದರೆ, ಪರಾವಲಂಬಿಯ ಇತರ ಪ್ರಭೇದಗಳ ವಿರುದ್ಧ ಲಸಿಕೆ ಕೆಲಸ ಮಾಡುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಮಲೇರಿಯಾವು ಈಗ ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾತ್ರವೇ ತೀವ್ರವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಲಸಿಕೆಗಳಿಗೆ ಯಾವುದೇ ಮಾರುಕಟ್ಟೆ ಇಲ್ಲ. ಜಗತ್ತಿನ ಕೆಲವೇ ರಾಷ್ಟ್ರಗಳಲ್ಲಿ ಇರುವ ಕಾರಣ, ಈ ಲಸಿಕೆಗೆ ವ್ಯಾಪಕವಾದ ಮಾರುಕಟ್ಟೆಯೂ ಇಲ್ಲ. ಮಾರುಕಟ್ಟೆ ಇಲ್ಲದ ಕಾರಣ ಪ್ರಮುಖ ಕಂಪನಿಗಳು ಮಲೇರಿಯಾ ವಿರುದ್ಧ ಲಸಿಕೆ ಅಭಿವೃದ್ಧಿಗೆ ಆಸಕ್ತಿಯನ್ನೇ ತೋರಿಸುತ್ತಿರಲಿಲ್ಲ. ಜತೆಗೆ ಈ ಲಸಿಕೆಯ ಅಗತ್ಯವಿದ್ದ ದೇಶಗಳ ಬಳಿ ಲಸಿಕೆ ಅಭಿವೃದ್ಧಿಗೆ ನೀಡಬಹುದಾದಷ್ಟು ಹಣಕಾಸಿನ ಸಾಮರ್ಥ್ಯ ಇರಲಿಲ್ಲ. ಈ ಕಾರಣದಿಂದಲೂ ಈ ಲಸಿಕೆ ಅಭಿವೃದ್ಧಿಗೆ ಬಹಳ ದೀರ್ಘವಾದ ಸಮಯ ಬೇಕಾಯಿತು.

ಮತ್ತೊಂದು ಲಸಿಕೆ: ಆರ್21/ಮ್ಯಾಟ್ರಿಕ್ಸ್ ಎಂದು ಕರೆಯಲಾಗುವ ಲಸಿಕೆಯು ಈ ವರ್ಷದ ಮೇನಲ್ಲಿ 2ನೇ ಹಂತದ ಪ್ರಯೋಗದಲ್ಲಿ ಶೇ 77ರಷ್ಟು ಪರಿಣಾಮಕಾರಿ ಎನಿಸಿದೆ. ಇದು ಮಾಸ್ಕ್ವಿರಿಕ್ಸ್‌ನ ಮಾರ್ಪಡಿಸಿದ ಆವೃತ್ತಿಯಾಗಿದ್ದು, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ. ಮೂರನೇ ಹಂತದ ಪ್ರಯೋಗ ಬಾಕಿ ಇದೆ.

ಯಾತ್ರೆ ಹೊರಟಿರುವ ಗಾಂಧೀವಾದಿಗಳು

ಸಾಬರಮತಿ ಪುನರಾಭಿವೃದ್ಧಿ ವಿರೋಧಿಸಿ ಯಾತ್ರೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಹಾತ್ಮ ಗಾಂಧಿ ಸ್ಥಾಪಿಸಿದ್ದ ಸಾಬರಮತಿ ಆಶ್ರಮವನ್ನು ಪುನರಾಭಿವೃದ್ಧಿ ಮಾಡುವ ಸರ್ಕಾರದ ಯೋಜನೆಯನ್ನು ವಿರೋಧಿಸಿ, ಗಾಂಧೀವಾದಿಗಳ ಸಂಘಟನೆಗಳ ಗುಂಪೊಂದು ಪ್ರತಿಭಟನಾ ಯಾತ್ರೆ ಹಮ್ಮಿಕೊಂಡಿದೆ.

'ಸೇವಾಗ್ರಾಮ–ಸಾಬರಮತಿ ಸಂದೇಶ ಯಾತ್ರೆ' ಹೆಸರಿನ ಈ ಯಾತ್ರೆಗೆ ಭಾನುವಾರ ವಾರ್ಧಾದ 'ಸೇವಾಗ್ರಾಮ' ಆಶ್ರಮದಿಂದ ಚಾಲನೆ ನೀಡಲಾಗಿದೆ. ಈ ಯಾತ್ರೆ ಅ.23ಕ್ಕೆ ಅಹಮದಾಬಾದ್ ತಲುಪಲಿದೆ.

ಸುಮಾರು 50 ಜನರು ಬಸ್ ಮೂಲಕ ಯಾತ್ರೆ ಹೊರಟರು. ಸಾಬರಮತಿ ಆಶ್ರಮದ ನಿರ್ವಹಣೆ ಹೊಣೆ ಹೊತ್ತಿರುವ ಸಾಬರಮತಿ ಆಶ್ರಮ ಸಂರಕ್ಷಣೆ ಮತ್ತು ಸ್ಮಾರಕ ಟ್ರಸ್ಟ್‌ನ (ಎಸ್‌ಎಪಿಎಂಟಿ) ಟ್ರಸ್ಟಿಗಳ ಜೊತೆ ಮಾತುಕತೆ ನಡೆಸಿದ ಬಳಿಕ, ಗಾಂಧೀವಾದಿಗಳು ಈ ಯಾತ್ರೆಗೆ ಮುಂದಾಗಿದ್ದಾರೆ.

'ಸಾಬರಮತಿ ಆಶ್ರಮದ ರೂಪುರೇಷೆಯನ್ನು ಬದಲಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಯೋಜನೆ ರೂಪಿಸುತ್ತಿವೆ. ಸ್ವಾತಂತ್ರ್ಯ ಹೋರಾಟದ ಪರಂಪರೆ ಮತ್ತು ಗಾಂಧೀಜಿಯ ಬಳುವಳಿಯನ್ನು, ತಮಗೆ ಬೇಕಾದ ಹಾಗೆ ಬದಲಿಸಲು ನಾವು ಬಿಡುವುದಿಲ್ಲ' ಎಂದು ಪ್ರತಿಭಟನಕಾರರು ಹೇಳಿದ್ದಾರೆ.

ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಸರ್ವ ಸೇವಾ ಸಂಘ, ಸೇವಾಗ್ರಾಮ ಆಶ್ರಮ ಪ್ರತಿಷ್ಠಾನ, ಸರ್ವೋದಯ ಸಮಾಜ, ರಾಷ್ಟ್ರೀಯ ಗಾಂಧಿ ಸಂಗ್ರಹಾಲಯ, ನೈ ತಾಲಿಮ್ ಸಮಿತಿ, ನ್ಯಾಷನಲ್ ಯುತ್ ಆರ್ಗನೈಸೇಷನ್, ಜಲ್ ಬಿರಾದರಿ, ಮಹಾರಾಷ್ಟ್ರ ಸರ್ವೋದಯ ಮಂಡಲ್ ಮತ್ತು ಗುಜರಾತ್‌ನ ಹಲವಾರು ಸರ್ವೋದಯ ಸಂಸ್ಥೆಗಳ ಸದಸ್ಯರು ಈ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ.

ಗುಜರಾತ್‌ನ ಹಲವಾರು ಗಣ್ಯ ವ್ಯಕ್ತಿಗಳು ಹಾಗೂ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಸಂಜಯ್ ಸಿಂಗ್ ಭಾಗವಹಿಸಲಿದ್ದಾರೆ. ಅವರ ಜೊತೆಗೆ ಕುಮಾರ್ ಪ್ರಶಾಂತ್, ರಾಮಚಂದ್ರ ರಾಹಿ, ಸಂಜಯ್ ಸಿಂಗ್ ರಾಜೇಂದ್ರ ಸಿಂಗ್ ಅವರು ಪಾಲ್ಗೊಳ್ಳಲಿದ್ದಾರೆ.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷೆ ರಾಹಿ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಕುಮಾರ್ ಪ್ರಶಾಂತ್ ಅವರು ಕಳೆದ ಅ.5ರಂದು ಎಸ್‌ಎಪಿಎಂಟಿ ಅಧ್ಯಕ್ಷೆ ಇಳಾ ಭಟ್, ಖಜಾಂಚಿಗಳಾದ ಸುದರ್ಶನ್ ಐಯ್ಯಂಗಾರ್ ಮತ್ತು ಇತರರ ಜೊತೆ ಸಭೆ ನಡೆಸಿ ಈ ಪ್ರತಿಭಟನೆಯ ಹಮ್ಮಿಕೊಳ್ಳುವ ಕುರಿತು ನಿರ್ಧರಿಸಿದ್ದರು. ಸರ್ಕಾರದ ಈ ಯೋಜನೆಗೆ, ಎಸ್‌ಎಪಿಎಂಟಿ ಈಗಾಗಲೇ ತಾತ್ವಿಕ ಅನುಮೋದನೆ ಅನುಮತಿ ನೀಡಿದೆ.

ಸರ್ಕಾರದಿಂದ ಎಸ್‌ಎಪಿಎಂಟಿಗೆ ಪತ್ರ

ಯಾತ್ರೆ ಆರಂಭವಾದ ಬೆನ್ನಲ್ಲೇ, ಸಾಬರಮತಿ ಆಶ್ರಮಕ್ಕೆ ಸಂಬಂಧಿಸಿದ ಪರಿಕಲ್ಪನೆ ಟಿಪ್ಪಣಿ ನೀಡುವಂತೆ ಸರ್ಕಾರ ತನಗೆ ಪತ್ರ ಬರೆದಿದ್ದಾಗಿ ಎಸ್‌ಎಪಿಎಂಟಿ ಹೇಳಿದೆ.

ಆಶ್ರಮಕ್ಕೆ ಸಂದರ್ಶಕರು ಬಂದರೆ ಅವರಿಗೆ ಆಶ್ರಮದ ಕುರಿತು ಯಾವ ರೀತಿಯ 'ಅರ್ಥವಿವರಣೆ, ಪ್ರದರ್ಶನ ಮತ್ತು ಅನುಭವ' ದೊರಕುತ್ತದೆ ಎಂಬುದರ ಕುರಿತು ಪರಿಕಲ್ಪನೆ ಟಿಪ್ಪಣಿ ರಚಿಸುವಂತೆ ಸರ್ಕಾರ ಸೂಚಿಸಿದೆ ಎಂದು ಎಸ್‌ಎಪಿಎಂಟಿ ಹೇಳಿದೆ.

'ಒಂದು ವಾರದ ಹಿಂದೆ ಈ ಪತ್ರ ನಮಗೆ ತಲುಪಿದೆ. ₹1,200ಕೋಟಿ ವೆಚ್ಚದಲ್ಲಿ ಗಾಂಧಿ ಆಶ್ರಮ ಸ್ಮಾರಕ ಮತ್ತು ಆಶ್ರಮ ಆವರಣ ಅಭಿವೃದ್ಧಿ ಯೋಜನೆಯನ್ನು ಸರ್ಕಾರ ರೂಪಿಸಿದೆ. ಗಾಂಧಿ ಆಶ್ರಮ ಸ್ಮಾರಕವನ್ನು ದಿನಕ್ಕೆ ಸುಮಾರು 3,000 ಜನರು ಸಂದರ್ಶಿಸುತ್ತಾರೆ. ಇಲ್ಲಿಗೆ ಸರ್ಕಾರ ಮೂಲಸೌಕರ್ಯ ಕಲ್ಪಿಸಲು ನಮ್ಮ ವಿರೋಧವಿಲ್ಲ. ಆದರೆ ಆಶ್ರಮದ ಮೂಲ ಸ್ವರೂಪವನ್ನು ಬದಲಾಯಿಸುವುದನ್ನು ನಾವು ವಿರೋಧಿಸುತ್ತಿದ್ದೇವೆ' ಎಂದು ಟ್ರಸ್ಟ್ ಸದಸ್ಯರೊಬ್ಬರು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪೊಲೀಸರು ಸಾಮೂಹಿಕ ಭೋಜನ ಮಾಡುತ್ತಿರುವ ಚಿತ್ರವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಯೋಗಿ ಸರ್ಕಾರವು ನವರಾತ್ರಿಯ ಉಪವಾಸ ಆಚರಿಸುವ ಪೊಲೀಸ್ ಸಿಬ್ಬಂದಿಗೆ ಫಲಾಹಾರದ ವಿಶೇಷ ವ್ಯವಸ್ಥೆ ಮಾಡಿದೆ. ನನ್ನ ಜೀವನದಲ್ಲಿ ಮೊದಲ ಬಾರಿಗೆ ನಾನು ಇಂತಹ ದೃಶ್ಯ ನೋಡಿದ್ದೇನೆ. ಇಂತಹ ದೃಶ್ಯಗಳು ಇಫ್ತಾರ್ ವೇಳೆ ಮಾತ್ರ ಕಾಣಸಿಗುತ್ತಿದ್ದವು' ಎಂಬುದಾಗಿ ಟ್ವಿಟರ್ ಬಳಕೆದಾರರೊಬ್ಬರು ಉಲ್ಲೇಖಿಸಿದ್ದಾರೆ. ಪೊಲೀಸ್ ಮೀಡಿಯಾ ಸೇರಿದಂತೆ ಕೆಲವು ವೆಬ್‌ಸೈಟ್‌ಗಳು ಇದೇ ಅರ್ಥದಲ್ಲಿ ವರದಿ ಮಾಡಿವೆ.

ಇಂತಹ ಕಾರ್ಯಕ್ರಮವನ್ನು ಉತ್ತರ ಪ್ರದೇಶ ಸರ್ಕಾರ ಆಯೋಜಿಸಿದೆ ಎಂಬ ಕುರಿತ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಾಗಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ.

ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಹೆಚ್ಚುವರಿ ಎಸ್ಪಿ ವಿಕಾಸ್‌ಚಂದ್ರ ತ್ರಿಪಾಠಿ ಅವರು 2018ರಲ್ಲಿ ಟ್ವಿಟರ್‌ನಲ್ಲಿ ಈ ಚಿತ್ರವನ್ನು ಹಂಚಿಕೊಂಡಿದ್ದರು ಎಂದು ತಿಳಿದುಬಂದಿದೆ. ನವರಾತ್ರಿ ಅಂಗವಾಗಿ ಲಖನೌದ ಠಾಣಾ ಚೌಕ್ ಪೊಲೀಸ್ ಠಾಣೆ ಸಿಬ್ಬಂದಿಗೆ ವಿಶೇಷ ಫಲಾಹಾರ ಕೂಟ ಆಯೋಜಿಸಿದ್ದಾಗಿ ಅವರು ಉಲ್ಲೇಖಿಸಿದ್ದರು. ಹೀಗಾಗಿ ಯೋಗಿ ಸರ್ಕಾರವು ಮೊಟ್ಟಮೊದಲ ಬಾರಿಗೆ ರಾಜ್ಯದ ಪೊಲೀಸರಿಗೆ ಫಲಾಹಾರ ಕೂಟ ಆಯೋಜಿಸಿದೆ ಎಂಬುದು ತಪ್ಪು ಮಾಹಿತಿ ಎಂದು ವೆಬ್‌ಸೈಟ್ ತಿಳಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಗುಲಾಬಿ ಗಿಡದ ಪಾಠ

ಹೂವತಳೆದ ಗುಲಾಬಿಯಿಂದ ಮನಕಹುದೇನು ?|
ನೋವೊ? ಸಂತಸವೊ? ನೋಡಾಮುಳ್ಳು ಬಾಳ್ಗೆ ||
ಹೂವೆ ದಿವ್ಯ ಕಿರೀಟವದುವೆ ಕಾಲಕಟಾಕ್ಷ |
ಜೀವನದ ತಿರುಳಷ್ಟೆ – ಮಂಕುತಿಮ್ಮ || 477 ||

ಪದ-ಅರ್ಥ: ಮನಕಹುದೇನು = ಮನಕೆ + ಅಹುದೇನು, ನೋಡಾಮುಳ್ಳು = ನೋಡು + ಆ + ಮುಳ್ಳು, ದಿವ್ಯಕಿರೀಟವದುವೆ = ದಿವ್ಯ + ಕಿರೀಟ + ಅದುವೆ, ತಿರುಳಷ್ಟೆ = ತಿರುಳು + ಅಷ್ಟೆ.

ವಾಚ್ಯಾರ್ಥ: ಹೂವನ್ನು ತಳೆದ ಗುಲಾಬಿಯ ಗಿಡವನ್ನು ಕಂಡಾಗ ಮನಸ್ಸಿಗೆ ಏನನ್ನಿಸುತ್ತದೆ? ನೋವೋ, ಸಂತೋಷವೋ? ಅದರ ಬಾಳು ಮುಳ್ಳೇ. ಆದರೆ ಹೂವು ದಿವ್ಯಕಿರೀಟ. ಅದು ದೊರೆಯುವುದು ಕಾಲದ ಕಟಾಕ್ಷದಿಂದ, ನಮ್ಮ ಬದುಕಿನ ತಿರುಳೂ ಅಷ್ಟೆ.

ವಿವರಣೆ: ಗುಲಾಬಿಯ ಗಿಡ ಮನುಷ್ಯನ ಬದುಕಿಗೊಂದು ಅಸಾಮಾನ್ಯವಾದ ತಿಳಿವನ್ನು ನೀಡುತ್ತದೆ. ಅದು ತುಂಬ ಬೋಧಪ್ರದವಾದದ್ದು. ಗಿಡ ತನ್ನ ಮುಡಿಗೆ ಹೂವನ್ನೇರಿಸಿಕೊಂಡು ನಲಿದಾಗ ಮನಕ್ಕೆ ತುಂಬ ಮುದ ನೀಡುತ್ತದೆ. ಆದರೆ ಅದರ ಸುತ್ತ ಮುತ್ತ ಇರುವ ಚೂಪಾದ ಮುಳ್ಳುಗಳನ್ನು ಕಂಡಾಗ, ಇಂಥ ಸುಂದರವಾದ, ನಾಜೂಕಾದ ಹೂವಿನ ಸುತ್ತ ಇಂಥ ಹರಿತವಾದ ಮುಳ್ಳುಗಳು ಬೇಕಿತ್ತೆ ಎಂದು ನೋವಾಗುತ್ತದೆ. ಅದಕ್ಕೇ ಈ ಕಗ್ಗ ಕೇಳುತ್ತದೆ, ಗುಲಾಬಿಯ ಗಿಡವನ್ನು ಕಂಡಾಗ ಮನಸ್ಸಿಗೆ ಆಗುವುದು ನೋವೊ, ಸಂತೋಷವೊ? ಎರಡೂ ಭಾವಗಳು ಉದಿಸುವುದು ಸಹಜ.

ಗುಲಾಬಿಯ ಸಸಿಯನ್ನು ನೆಲದಲ್ಲಿ ಹಾಕಿದಾಗ ಮೊದಲು ಹೂವು ಬರುವುದಿಲ್ಲ. ಕಾಂಡ ಚಿಗಿತು ಬೆಳೆದಾಗ ಮೊದಲು ಬರುವುದು ಮುಳ್ಳೇ. ಎಲೆಗಳೊಂದಿಗೆ ಮುಳ್ಳುಗಳು ಬೆಳೆಯುತ್ತ ಬರುತ್ತವೆ. ತೋಟಗಾರ ಗಿಡವನ್ನು ಎಲೆ ಹಾಗೂ ಮುಳ್ಳುಗಳಿಗಾಗಿ ಬೆಳೆಸುವುದಿಲ್ಲ. ಕೈಗೆ ಮುಳ್ಳುಗಳನ್ನು ಚುಚ್ಚಿಸಿಕೊಳ್ಳುತ್ತ, ಗೊಬ್ಬರ, ನೀರು ಹಾಕಿ, ಮುಂದೆ ಬರಬಹುದಾದ ಸುಂದರ ಹೂವುಗಳಿಗಾಗಿ ಪರಿಶ್ರಮಪಡುತ್ತಾನೆ. ಅಲ್ಲಿಯವರೆಗೂ ಅವನಿಗೆ ದೊರೆಯುವುದು ನೋವು ಮಾತ್ರ. ಆದರೆ ಅದರೊಂದಿಗೆ ಸುಂದರವಾದ ಹೂವುಗಳ ಭರವಸೆ ಇದೆ. ಕಾಲ ಕಳೆದಂತೆ ಮೊಗ್ಗು ಬಂದು ಹೂವು ಅರಳುತ್ತದೆ. ಅದನ್ನು ಅವಸರಿಸಲು ಆಗುವುದಿಲ್ಲ. ಅದಕ್ಕೆ ಸರಿಯಾದ ಕಾಲ ಬರಬೇಕು.

ಮನುಷ್ಯನ ಬದುಕಿನಲ್ಲೂ ಆಗುವುದು ಹೀಗೆಯೇ. ಅಲ್ಲವೆ? ಬಾಲ್ಯದಲ್ಲಿ ಆಟ, ಯೌವನದಲ್ಲಿ ಓದು, ತಿರುಗಾಟದ ನಂತರ ಮುಂದೆ ಸಾಧನೆಯ ಮೆಟ್ಟಿಲುಗಳನ್ನೇರುವ ಪ್ರಯತ್ನದ ಕಷ್ಟದ ದಾರಿ. ಗುಲಾಬಿಯ ಹೂವಿನಂತೆ, ಸಾಧನೆಯ ಫಲದ ಮರ್ಯಾದೆ ದೊರಕುವುದು ಒಂದು ಹಂತದ ಬದುಕು ಮುಗಿದ ಮೇಲೆಯೆ. ಗಾಂಧೀಜಿ ಮಹಾತ್ಮರಾದದ್ದು, ಕಲಾಂ ಭಾರತರತ್ನರಾದದ್ದು, ದಲಾಯಿಲಾಮಾ ನೋಬೆಲ್ ಪುರಸ್ಕೃತರಾದದ್ದು, ಡಾ. ರಾಧಾಕೃಷ್ಣನ್ ರಾಷ್ಟ್ರಪತಿಯಾದದ್ದು ಇವೆಲ್ಲ ಆದದ್ದು ಕಾಲನ ಕಟಾಕ್ಷ ದೊರೆತ ನಂತರವೆ.

ಬಾಳಿನ ಸಫಲತೆ ದೊರೆಯುವ ಮೊದಲು ಕಷ್ಟಗಳ ಮುಳ್ಳುಗಳು ಚುಚ್ಚುತ್ತವೆ, ನೋವು ನೀಡುತ್ತವೆ. ಆ ಮುಳ್ಳುಗಳು ನಮ್ಮನ್ನು ಜಾಗರೂಕರನ್ನಾಗಿ ಮಾಡುತ್ತವೆ. ಅಷ್ಟಲ್ಲದೆ ಯಶಸ್ಸು ಬಂದಾಗ ಅದನ್ನು ಬೇರೆಯವರು ಸುಲಭವಾಗಿ ಕಿತ್ತುಕೊಳ್ಳದಂತೆ ಸುತ್ತಲಿದ್ದು ಕಾಪಾಡುತ್ತವೆ.

ಗುಂಡಣ್ಣ

ದಿನ ಭವಿಷ್ಯ

ಸೋಮವಾರ ಅಕ್ಟೋಬರ್ 18, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ತ್ರಯೋದಶಿ ಗಂ. 29-15 (ಸಾ. 5-58) ಸೋಮವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 14-0 (ಹ. 11-52) ಧ್ರುವ ನಾಮ ಯೋಗ ಗಂ. 41-9 ತೈತಲ ಕರಣ ಗಂ. 29-15 ವಿಷ ಗಂ. 38-46 ಅಮೃತಾಭಾವಃ ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-13 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 2, 6, 7

ಮೇಷ: ದೊಡ್ಡವರ ಮಾತನ್ನು ಧಿಕ್ಕರಿಸದಿದ್ದಲ್ಲಿ ಸಂತೋಷ ಹೊಂದುವಿರಿ. ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯ. ಪಂಚಮ ಶನಿಯ ನಿವೃತ್ತಿಗಾಗಿ ಆಂಜನೇಯನ ದರ್ಶನ ಮಾಡಿ. ಅತಿಯಾದ ಉತ್ಸಾಹ ಸಲ್ಲದು.

ವೃಷಭ: ಬೇಡವಾದ ಕಾರ್ಯವನ್ನು ವಹಿಸಿಕೊಳ್ಳುವ ಪ್ರಮೇಯ ಬರಬಹುದು. ಮನಸ್ಸಿನ ನೋವು ದೂರವಾಗಿ ಸಾಂಸಾರಿಕ ನೆಮ್ಮದಿ ನಿಮ್ಮದಾಗಲಿದೆ. ಅನಿರೀಕ್ಷಿತ ಕ್ಷಣಗಳು ನಿಮಗಾಗಿ ಕಾಯುತ್ತಿವೆ. ಸ್ವಂತ ಉದ್ಯೋಗದಲ್ಲಿ ಯಶಸ್ಸು.

ಮಿಥುನ: ಇರುಸು ಮುರುಸಿನಿಂದ ಪಾರಾಗಲು ಕೆಲವು ವಿಚಾರದಲ್ಲಿ ವಾದ ವಿವಾದಕ್ಕೆ ಆಸ್ಪದ ನೀಡದೆ ಹೊಂದಾಣಿಕೆ ಮಾಡಿಕೊಳ್ಳುವುದು ಸೂಕ್ತ. ಮನೆಯ ಆಂತರಿಕ ವ್ಯವಹಾರ ಬೇರೆಯವರಲ್ಲಿ ಹಂಚಿಕೊಳ್ಳದಿರುವುದು ಲೇಸು.

ಕರ್ಕಾಟಕ: ಭವಿಷ್ಯದ ಬಗ್ಗೆ ಅತಿಯಾದ ಚಿಂತೆ ಅನಗತ್ಯ. ರೈತರಿಗೆ ಉತ್ಪಾದನೆಯಲ್ಲಿ ಹೆಚ್ಚಳ ಕಾಣುವಿರಿ. ಬಂಧುಗಳ ಆಗಮನ. ಸಹೋದರರಿಂದ ಸಹಕಾರ ದೊರೆಯುವುದು. ಅಗ್ನಿಯ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಸಿಂಹ: ಹಣಕಾಸಿನ ವ್ಯವಹಾರದಲ್ಲಿ ಅಪನಂಬಿಕೆಗಳು ದೂರವಾಗಿ ದೃಢತೆಯನ್ನು ಸಾಧಿಸುವಿರಿ. ಸಾಧ್ಯವಾದಷ್ಟು ಮುಕ್ತ ಮನಸ್ಕರಾಗಿ ವ್ಯವಹರಿಸಿ. ಮನಸ್ಸಿನ ಸಂಕಲ್ಪ ಈಡೇರಿ ಯಶಸ್ಸು ಕಾಣುವಿರಿ.

ಕನ್ಯಾ: ವಿದೇಶ ಪ್ರಯಾಣದ ಕನಸು ನನಸಾಗುವ ಸಾಧ್ಯತೆ. ಮಾಡಿದ ಕೆಲಸಗಳಲ್ಲಿ ಯಶಸ್ಸು ಕಾಣುವಿರಿ. ಸ್ಥಿರಾಸ್ತಿ ಮತ್ತು ವಾಹನ ಖರೀದಿಗೆ ಸಕಾಲ. ವ್ಯವಹಾರದಲ್ಲಿ ಉನ್ನತಿ ಪಡೆಯಲಿದ್ದೀರಿ. ಬಂಧುಗಳ ಆಗಮನದಿಂದಾಗಿ ಸಂಭ್ರಮ.

ತುಲಾ: ತಂತ್ರಜ್ಞರು ವಿವಿಧ ಪ್ರಯೋಗಗಳಲ್ಲಿ ಪ್ರಗತಿಯನ್ನು ಸಾಧಿಲಿದ್ದೀರಿ. ಸ್ತ್ರೀಯರಿಗೆ ಕೆಲಸದ ಒತ್ತಡದಿಂದಾಗಿ ಬೆನ್ನು ಉದರ ಸಂಬಂಧಿ ನೋವು ಸಾಧ್ಯತೆ. ಕಡಲಿನ ಉತ್ಪನ್ನಗಳಿಂದ ಹೆಚ್ಚಿನ ಆದಾಯ ನಿರೀಕ್ಷೆ.

ವೃಶ್ಚಿಕ: ತಾಳ್ಮೆಯನ್ನು ಕಳೆದುಕೊಳ್ಳದೆ ನಡೆಸುವ ಕಾರ್ಯಗಳಲ್ಲಿ ಶ್ರದ್ಧೆವಹಿಸಿ. ಮನಸ್ಸಿನ ಭಾವನೆಗೆ ಧಕ್ಕೆಯಾಗಲಾರದು. ಪತ್ರಿಕಾ ಪ್ರತಿನಿಧಿಗಳಿಗೆ ಸಂತೋಷದಾಯಕ ದಿನ. ಮಹಿಳಾ ಉದ್ಯಮಿಗಳಿಗೆ ಸಂತಸ.

ಧನು: ಹಳೆಯ ಶತ್ರುಗಳ ಬಗ್ಗೆ ಜಾಗೃತರಾಗಿರಿ. ಬೇರೆಯವರ ತಪ್ಪನ್ನು ಗ್ರಹಿಸಬೇಡಿ. ಆರ್ಥಿಕ ಕ್ಷೇತ್ರದಿಂದ ನಿರೀಕ್ಷಿತ ಫಲ ದೊರೆಯಲಿದೆ. ವಾತಾವರಣದಿಂದಾಗಿ ಅಸ್ತಮಾದಂತಹ ರೋಗಗಳು ಉಲ್ಬಣಿಸುವ ಸಾಧ್ಯತೆ.

ಮಕರ: ಕುಟುಂಬದ ಹತ್ತಿರದ ವ್ಯಕ್ತಿಗಳಿಗೆ ಆರೋಗ್ಯದಲ್ಲಿ ಏರುಪೇರಾಗುವ ಸಂಭವ. ಕಳೆದುಹೋದ ಸಂಬಂಧಗಳು ಪುನಃ ವೃದ್ಧಿಗೊಳ್ಳುವವು. ಪ್ರೇಮಿಗಳ ವಿವಾಹಕ್ಕೆ ಆತುರತೆ ಬೇಡ. ಆರ್ಥಿಕ ರಂಗದಲ್ಲಿ ಸಾಮಾನ್ಯ ಪ್ರಗತಿ.

ಕುಂಭ: ನಿಮ್ಮ ಪಾಡಿಗೆ ನೀವಿದ್ದರೂ ವಿವಾದ ಅಂಟಿಕೊಳ್ಳುವ ಸಾಧ್ಯತೆ ಇದೆ. ವ್ಯವಹಾರದಲ್ಲಿ ವಿವೇಕದಿಂದ ವರ್ತಿಸಿ. ಆತ್ಮಸ್ಥೈರ್ಯವನ್ನು ಕಳೆದುಕೊಳ್ಳಬೇಡಿ. ನಿಮ್ಮ ಪ್ರಯತ್ನ ಮುಂದುವರಿಸಿ.

ಮೀನ: ಅತಿಯಾದ ತಿರುಗಾಟ ಮತ್ತು ಕೆಲಸದ ಒತ್ತಡದಿಂದ ಬಳಲುವ ಸಾಧ್ಯತೆ. ವಿಶ್ರಾಂತಿ ಮತ್ತು ಮನೋರಂಜನೆಯ ಕಾರ್ಯಕ್ರಮಗಳಲ್ಲಿ ಭಾಗಿ. ಸಮಯೋಚಿತ ನಿರ್ಧಾರದಿಂದ ತೃಪ್ತಿ.

ನಿಮ್ಮ ಜನ್ಮದಿನ 18-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಅವಿವೇಕತನದಿಂದಾಗಿ ಬರುವಂತಹ ಹರುಷವನ್ನು ದೂರಮಾಡಿಕೊಳ್ಳಬೇಡಿ. ಸರ್ಕಾರಿ ನೌಕರಸ್ಥರಿಗೆ ಕಚೇರಿಯಲ್ಲಿ ಗೌರವಾದರಗಳು ಲಭ್ಯವಾಗಲಿವೆ. ಅತಿಯಾದ ಧನದಾಹದಿಂದಾಗಿ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಕಂಡುಬರುತ್ತಿದೆ. ಸ್ಥಿರಾಸ್ತಿ ಖರೀದಿಯ ಸಾಧ್ಯತೆ.

ಪದಬಂಧ 4751

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕೂಡುವ ಲೆಕ್ಕವಿದು (4)
2.ಗತಿಯಲ್ಲಿ ಕೊನೆಗೊಂಡಿರುವ ಮುನ್ನಡೆ (3)
4.ಕಲೆಸಿದ ಗೋಧಿ ಹಿಟ್ಟು (3)
6.ದರ ಹೇಳುತ್ತಲೇ ತೋರಿಸಿದ ಹೊಟ್ಟೆ! (3)
7. ಹೆಸರಿಡುವ ಶಾಸ್ತ್ರ (5)
10.ಕಣದಲ್ಲಿ ಅಗಿರುವ ಲಗ್ನ (3)
11.ಶರ ಬಿದ್ದಿರುವ ಸಮುದ್ರ (3)
13.ವಿಷ್ಣುವಿನ ವಾಹನ (3)
14.ಪರಾಕು ಹೇಳಿದವ ಕೆನ್ನೆಗೆ ನೀಡಿದ ಏಟು (4)

ಮೇಲಿಂದ ಕೆಳಕ್ಕೆ

1. ಕಬ್ಬಿಣದ ಭಾರೀ ಪೆಟ್ಟಿಗೆ (3)
2.ಕೊನೆಗೆ ಚಾರನಿದ್ದಾಗಲೇ ಹರಡುವಿಕೆ (3)
3.ಮನಸ್ಸಿಗೆ ಬಂದಂತೆ ನಡೆಯುವುದು (3)
5.ನಾವೆ ನಡೆಸುವವ ತಿರುಗಿದ್ದಾನಲ್ಲಾ? (3)
6.ಕೆಲಸ ಮಾಡಲು ಬೇಕಾದ ಸಾಧನ (5)
8.ಶರ ಹಿಡಿದಿರುವ ಶೈವ ಭಕ್ತ ತಿರುಗಿದ್ದಾನೆ (3)
9.ಊರೊಳಗೆ ಕಾಣಿಸಿದ ಹಾವು (3)
10.ಕನ್ನಡಿಗರ ಹೆಮ್ಮೆಯ ಭಾಷೆ (3)
12.ಸೊಕ್ಕು ಹೀಗೆ ಬಂದಿದೆ (3)



4750ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಛಾಯಾಗ್ರಾಹಿ 3.ಪರಿತ್ಯಾಗ 5.ಷಿಕಾರಿ 6.ಜ್ಞಾತಿ 7.ನೆಪ 9.ಯಮ 11.ವಾರ 12.ಮಾರ್ದವ 14.ಸುಶಿಕ್ಷಿತ 15.ನವಜಾತ

ಮೇಲಿಂದ ಕೆಳಕ್ಕೆ: 1.ಛಾಪಾಖಾನೆ 2.ಹಿತೈಷಿ 3.ಪರಾರಿ 4.ಗರತಿ 6.ಜ್ಞಾನೇಂದ್ರಿಯ 8.ಪರಿಕರ 10.ಮನೋಗತ 11.ವಾರಸು 12.ಮಾರುತ 13.ವಸನ

ಸುಡೊಕು 5137

				7			4	
		4	6	2	8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5136 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ಈರುಳ್ಳಿ: ಬೆಲೆ ಇಳಿಕೆಗೆ ದಾಸ್ತಾನು ಬಿಡುಗಡೆ

ನವದೆಹಲಿ (ಪಿಟಿಐ): ಹೆಚ್ಚುವರಿ ದಾಸ್ತಾನನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಈರುಳ್ಳಿ ಬೆಲೆಯಲ್ಲಿ ಸ್ಥಿರತೆ ತರಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಟೊಮೆಟೊ ಮತ್ತು ಆಲೂಗಡ್ಡೆ ಬೆಲೆಯನ್ನು ತಗ್ಗಿಸಲು ಕೂಡ ಪ್ರಯತ್ನ ನಡೆದಿದೆ ಎಂದು ತಿಳಿಸಿದೆ.

ಈರುಳ್ಳಿ ದಾಸ್ತಾನನ್ನು ಆಗಸ್ಟ್ ಕೊನೆಯ ವಾರದಿಂದಲೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ ಎಂದು ಕೇಂದ್ರ ತಿಳಿಸಿದೆ. ಇದರ ಪರಿಣಾಮವಾಗಿ ದೇಶದ ಮಹಾನಗರಗಳಲ್ಲಿ ಈರುಳ್ಳಿ ಬೆಲೆಯು ಅಕ್ಟೋಬರ್ 14ರ ವೇಳೆಗೆ ಕೆ.ಜಿ.ಗೆ ಸರಾಸರಿ ₹ 42ರಿಂದ ₹ 57ರ ಮಟ್ಟಕ್ಕೆ ಬಂದಿದೆ.

ಅಖಿಲ ಭಾರತ ಸರಾಸರಿ ಮಟ್ಟಕ್ಕಿಂತ ಈರುಳ್ಳಿ ಬೆಲೆ ಜಾಸ್ತಿ ಆಗಿರುವ ರಾಜ್ಯಗಳಲ್ಲಿ, ಹಿಂದಿನ ತಿಂಗಳ ಬೆಲೆಯ ಮಟ್ಟಕ್ಕಿಂತ ಹೆಚ್ಚಾಗಿರುವ ಕಡೆಗಳಲ್ಲಿ ಈರುಳ್ಳಿ ದಾಸ್ತಾನನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ವ್ಯವಹಾರಗಳ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ಅಕ್ಟೋಬರ್ 12ರವರೆಗೆ ಬೆಂಗಳೂರು, ಚೆನ್ನೈ, ಹೈದರಾಬಾದ್ ಸೇರಿದಂತೆ ಪ್ರಮುಖ ಮಾರುಕಟ್ಟೆಗಳಲ್ಲಿ ಒಟ್ಟು 67,357 ಟನ್ ಈರುಳ್ಳಿಯನ್ನು ಬಿಡುಗಡೆ ಮಾಡಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹445

ವಿಮೆ: ಬಡವರಾಗುವುದನ್ನು ತಡೆಯುತ್ತದೆ!

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ವಿಮಾ ಕಂಪನಿಗಳು ಮೇಲಿಂದ ಮೇಲೆ ಕರೆ ಮಾಡಿ, 'ಈ ಇನ್ಶೂರೆನ್ಸ್ ತಗೊಳ್ಳಿ, ಆ ಪಾಲಿಸಿ ಖರೀದಿ ಮಾಡಿ' ಅಂತ ನಿಮ್ಮನ್ನು ಒತ್ತಾಯಿಸುವುದರಿಂದ ಕಿರಿಕಿರಿ ಆಗಬಹುದು. ಆದರೆ ನೆನಪಿಡಿ, ಜೀವ ವಿಮೆ ಮತ್ತು ಆರೋಗ್ಯ ವಿಮೆ ನೀವು ಬಡವರಾಗುವುದನ್ನು ತಡೆಯುತ್ತವೆ.

ಆರೋಗ್ಯ ವಿಮೆ, ಜೀವ ವಿಮೆ ಮುಖ್ಯ: ಮನೆಗೆ ಆಧಾರವಾಗಿ ನೀವು ದುಡಿಯುತ್ತಿರುತ್ತೀರಿ ಎಂದು ಭಾವಿಸಿ. ಆಕಸ್ಮಿಕವಾಗಿ ನಿಮ್ಮ ಜೀವಕ್ಕೆ ತೊಂದರೆಯಾದರೆ ಪರಿಣಾಮ ಏನು, ಪರಿಹಾರ ಏನು? ನೀವು ಮಾಡಿರುವ ಸಾಲಗಳನ್ನು ತೀರಿಸುವುದು ಹೇಗೆ? ಇಂತಹ ಪ್ರಶ್ನೆಗೆ ಉತ್ತರ ಅವಧಿ ಜೀವ ವಿಮೆ. ಪಾಲಿಸಿದಾರರು ಆಕಸ್ಮಿಕ ಸಾವಿಗೆ ಪ್ರತಿಯಾಗಿ ಪಡೆಯುವ ವಿಮೆ ರಕ್ಷಣೆ ಸೌಲಭ್ಯವನ್ನು 'ಟರ್ಮ್ ಇನ್ಶುರನ್ಸ್' (ಅವಧಿ ವಿಮೆ) ಒಳಗೊಂಡಿರುತ್ತದೆ.

ಅವಧಿಯ ವಿಮೆಯ ಕವರೇಜ್ ಮೊತ್ತವು ನಿಮ್ಮ ವಾರ್ಷಿಕ ಆದಾಯದ 15ರಿಂದ 20 ಪಟ್ಟು ಇರಬೇಕು ಎನ್ನುವುದು ಒಂದು ಮಾನದಂಡ. ಆದರೆ, ಕುಟುಂಬದ ಜವಾಬ್ದಾರಿ ಹೊತ್ತಿರುವವರು, ಮದುವೆಯಾಗಿರುವವರು, ಸಾಲ ಮಾಡಿರುವವರು ಹಾಗೂ ಹೆಚ್ಚಿನ ಆರ್ಥಿಕ ಹೊಣೆಗಾರಿಕೆ ಇರುವವರು ಅಗತ್ಯಕ್ಕೆ ತಕ್ಕಂತೆ ವಿಮಾ ಕವರೇಜ್ ಮೊತ್ತ ಹೆಚ್ಚಿಸಿಕೊಳ್ಳಬೇಕು. 30 ವರ್ಷ ವಯಸ್ಸಿನ ವ್ಯಕ್ತಿ ವಾರ್ಷಿಕವಾಗಿ ಸುಮಾರು ₹ 12 ಸಾವಿರದಿಂದ ₹ 13 ಸಾವಿರ ಪ್ರೀಮಿಯಂ ಪಾವತಿಸಿದರೆ, ₹ 1 ಕೋಟಿ ಮೊತ್ತದ ಅವಧಿ ವಿಮೆ ಸಿಗುತ್ತದೆ. ವಿಮೆ ಪಡೆದಿರುವ ವ್ಯಕ್ತಿ ಆಕಸ್ಮಿಕವಾಗಿ ಸಾವನ್ನಪ್ಪಿದರೆ ₹ 1 ಕೋಟಿ ಅವನ ಕುಟುಂಬಕ್ಕೆ ಸಿಗುತ್ತದೆ.

ಆರೋಗ್ಯ ವಿಮೆ ಸಹ ಪ್ರತಿ ವ್ಯಕ್ತಿಗೂ ಬಹಳ ಮುಖ್ಯ. ಅನಾರೋಗ್ಯ ಉಂಟಾದಾಗ, ಕಷ್ಟಪಟ್ಟು ದುಡಿದ ದುಡ್ಡನ್ನೆಲ್ಲ ಆಸ್ಪತ್ರೆಗೆ ಸುರಿಯುವ ಬದಲು, ಗಳಿಸಿದ ಹಣದಲ್ಲಿ ಸಣ್ಣ ಪ್ರಮಾಣದ ಹಣವನ್ನು ಆರೋಗ್ಯ ವಿಮೆಗೆ ವ್ಯಯಿಸುವುದು ಜಾಣತನ. ನಿಮ್ಮ ಅಗತ್ಯಕ್ಕೆ ತಕ್ಕಂತೆ ಫ್ಯಾಮಿಲಿ ಫ್ಲೋಟರ್ ಅಥವಾ ವೈಯಕ್ತಿಕ ಜೀವ ವಿಮೆ ಖರೀದಿಸಿ. ಫ್ಯಾಮಿಲಿ ಫ್ಲೋಟರ್ ಆರೋಗ್ಯ ವಿಮೆಯಲ್ಲಿ ಒಂದೇ ಪಾಲಿಸಿಯಲ್ಲಿ ಕುಟುಂಬದ ಎಲ್ಲ ಸದಸ್ಯರಿಗೂ ವಿಮೆ ಸಿಗುತ್ತದೆ. ₹ 5 ಲಕ್ಷ ಕವರೇಜ್ ಇರುವ ಆರೋಗ್ಯ ವಿಮೆ ಪ್ರೀಮಿಯಂ ₹ 12 ಸಾವಿರದಿಂದ ₹ 14 ಸಾವಿರಕ್ಕೆ ಲಭ್ಯ.

ಇನ್ಶೂರೆನ್ಸ್ ಖರೀದಿಗೆ ಯಾವ ಕಂಪನಿ ಸೂಕ್ತ?: ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಯಾಗಲಿ ಖಾಸಗಿ ವಿಮಾ ಕಂಪನಿಯಾಗಲಿ, ಅವುಗಳನ್ನು ನಿಯಂತ್ರಿಸುವ ಸಂಸ್ಥೆ, ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ). ಐಆರ್‌ಡಿಎಐ ನಿಯಮಗಳಿಗೆ ಅನುಗುಣವಾಗಿ ಯಾವುದೇ ವಿಮಾ ಕಂಪನಿ ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ ವಿಮಾ ಕಂಪನಿ ಆಯ್ಕೆ ಮಾಡುವಾಗ, ಅದು ಸರ್ಕಾರಿ ಸ್ವಾಮ್ಯದ್ದೋ ಅಥವಾ ಖಾಸಗಿಯವರ ಒಡೆತನದ್ದೋ ಎಂಬುದು ಮುಖ್ಯವಲ್ಲ. ವಿಮೆ ಆಯ್ಕೆ ಮಾಡುವಾಗ ಕ್ಲೇಮ್ ಅನುಪಾತ, ವಾರ್ಷಿಕ ಪ್ರೀಮಿಯಂ ಮೊತ್ತ, ಕವರೇಜ್ ವ್ಯಾಪ್ತಿ, ಕವರೇಜ್ ಮೊತ್ತದಂತಹ ಅಂಶಗಳು ಬಹಳ ಮುಖ್ಯವಾಗುತ್ತವೆ.

ಅದರಲ್ಲೂ, ಯಾವುದೇ ವಿಮೆ ಕೊಳ್ಳುವಾಗ ಕ್ಲೇಮ್ ಅನುಪಾತ ಬಹಳ ಮುಖ್ಯವಾಗುತ್ತದೆ. ವಿಮೆ ಕ್ಲೇಮ್‌ಗಾಗಿ ಅರ್ಜಿ ಸಲ್ಲಿಸಿರುವವರ ಪೈಕಿ ಎಷ್ಟು ಜನರ ಕ್ಲೇಮ್ ಅರ್ಜಿಗಳನ್ನು ವಿಮಾ ಕಂಪನಿ ಪುರಸ್ಕರಿಸಿದೆ ಎನ್ನುವುದನ್ನು ಕ್ಲೇಮ್ ಅನುಪಾತ ಎಂದು ಕರೆಯಲಾಗುತ್ತದೆ. ಇದು ಶೇ 90ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಕಂಪನಿಗಳ ವಿಮೆ ಪಡೆದುಕೊಳ್ಳುವುದು ಅಷ್ಟು ಸುರಕ್ಷಿತವಲ್ಲ. ಅನುಪಾತವು ಶೇ 90ಕ್ಕಿಂತ ಹೆಚ್ಚು ಇರುವ ವಿಮಾ ಕಂಪನಿಗಳ ಪಾಲಿಸಿ ಪಡೆದರೆ ನಿಮಗೆ ಹೆಚ್ಚು ಸುರಕ್ಷತೆ ಇರುತ್ತದೆ. ಐಆರ್‌ಡಿಎಐ ಪ್ರತಿ ವರ್ಷವೂ ವಿಮಾ ಕಂಪನಿಗಳ ಕ್ಲೇಮ್ ಅನುಪಾತವನ್ನು ಪ್ರಕಟಿಸುತ್ತದೆ. ಐಆರ್‌ಡಿಎಐ ವೆಬ್‌ಸೈಟ್‌ನಲ್ಲಿ ಇದರ ಸಂಪೂರ್ಣ ಮಾಹಿತಿ ಸಿಗುತ್ತದೆ. (ವೆಬ್‌ಸೈಟ್ ವಿಳಾಸ: www.irdai.gov.in)

ಗ್ರೇಸ್ ಪೀರಿಯಡ್‌ನಲ್ಲಿ ವಿಮೆ ಮಾನ್ಯವಾಗುವುದೇ?: ವಿಮೆ ಪ್ರೀಮಿಯಂ ಕಂತು ಪಾವತಿಗೆ ಕಂಪನಿ ನೀಡುವ ಹೆಚ್ಚುವರಿ ಅವಧಿಯನ್ನು ಗ್ರೇಸ್ ಪೀರಿಯಡ್ ಎಂದು ಕರೆಯಲಾಗುತ್ತದೆ. ವ್ಯಕ್ತಿಯೊಬ್ಬ ಅವಧಿ ವಿಮೆ ತೆಗೆದುಕೊಂಡ ನಂತರ, ಗ್ರೇಸ್ ಪೀರಿಯಡ್‌ನಲ್ಲಿ ಸಾವನ್ನಪ್ಪಿದರೆ ಆಗ ಖಂಡಿತವಾಗಿಯೂ ವಿಮಾ ಕವರೇಜ್ ಅನ್ವಯಿಸುತ್ತದೆ. ಗ್ರೇಸ್ ಪೀರಿಯಡ್‌ಅನ್ನು ವಿಮೆ ಹೊಂದಿರುವ ವ್ಯಕ್ತಿಗೆ ವಿಮಾ ಕಂಪನಿಯೇ ನೀಡುವ ಕಾರಣ ಈ ಅವಧಿಯಲ್ಲಿ ವ್ಯಕ್ತಿ ಸಾವನ್ನಪ್ಪಿದ ಎನ್ನುವ ಕಾರಣಕ್ಕೆ ಕ್ಲೇಮ್ ನೀಡದೆ ಇರಲು ಅವಕಾಶವಿಲ್ಲ. ವಿಮಾ ಪಾಲಿಸಿಯು, ಗ್ರೇಸ್ ಪೀರಿಯಡ್‌ನಲ್ಲಿರುವಾಗ ವ್ಯಕ್ತಿ ಸಾವನ್ನಪ್ಪಿದರೆ, ಪಾವತಿಸಬೇಕಿದ್ದ ಪ್ರೀಮಿಯಂನ ಮೊತ್ತವನ್ನು ಕಡಿತ ಮಾಡಿಕೊಂಡು ಇನ್ನುಳಿದ ಕವರೇಜ್ ಮೊತ್ತವನ್ನು ಕಂಪನಿಯು ನಾಮ ನಿರ್ದೇಶನ ಆಗಿರುವ ವ್ಯಕ್ತಿಗೆ ನೀಡುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಗೂಳಿ ಹಿಡಿತದಲ್ಲಿ ಷೇರುಪೇಟೆ ಸೂಚ್ಯಂಕಗಳು

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಈಗ ಗೂಳಿಯ ಹಿಡಿತದಲ್ಲಿವೆ. ಅಕ್ಟೋಬರ್ 14ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ 61,305 ಮತ್ತು 18,300 ಅಂಶಗಳ ಗಡಿ ದಾಟಿ ಹೊಸ ದಾಖಲೆ ಸೃಷ್ಟಿಸಿವೆ. ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 2.07ರಷ್ಟು ಮತ್ತು ನಿಫ್ಟಿ ಶೇ 2.47ರಷ್ಟು ಜಿಗಿದಿವೆ. ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಚೇತರಿಕೆ, ಕೈಗಾರಿಕಾ ಉತ್ಪಾದನೆ ಹೆಚ್ಚಳ ಸೇರಿ ಹಲವು ಅಂಶಗಳು ಷೇರುಪೇಟೆ ಓಟಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ವಾಹನ ಉತ್ಪಾದನಾ ವಲಯ ಶೇ 6.5ರಷ್ಟು ಗಳಿಸಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1ರಷ್ಟು ಕುಸಿತ ದಾಖಲಿಸಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,037.37 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,296.81 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ-ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಟಾಟಾ ಮೋಟರ್ಸ್, ಅವೆನ್ಯೂ ಸೂಪರ್ ಮಾರ್ಕೆಟ್ಸ್, ವೇದಾಂತ, ಐಟಿಸಿ ಶೇ 10ರಿಂದ ಶೇ 30ರಷ್ಟು ಹೆಚ್ಚಳ ಕಂಡಿವೆ. ಟಿಸಿಎಸ್, ಬಂಧನ್ ಬ್ಯಾಂಕ್, ಎಚ್‌ಸಿಎಲ್ ಶೇ 8ರಷ್ಟು ಕುಸಿದಿವೆ.

ಮುನ್ನೋಟ: ಷೇರುಪೇಟೆ ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿವೆ. ಸದ್ಯದ ಸ್ಥಿತಿಯಲ್ಲಿ ಅಲ್ಪ ಪ್ರಮಾಣದ ಏರಿಳಿತ ನಿರೀಕ್ಷಿಸಬಹುದು. ಜಾಗತಿಕವಾಗಿ ಪ್ರಮುಖ ದೇಶಗಳ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡಿದರೆ ಷೇರುಪೇಟೆಯಿಂದ ಹಣದ ಹೊರ ಹರಿವು ಶುರುವಾಗಲಿದೆ. ಆಗ ಸೂಚ್ಯಂಕಗಳು ಕುಸಿತ ಕಾಣುವ ಸಾಧ್ಯತೆಯಿದೆ.

ಈ ವಾರ ಹಿಂದೂಸ್ಥಾನ್ ಯುನಿಲಿವರ್, ನೆಸ್ಲೆ ಇಂಡಿಯಾ, ಹ್ಯಾಟ್‌ಸನ್, ಫೆಡರಲ್ ಬ್ಯಾಂಕ್, ರಿಲಯನ್ಸ್, ಪಾಲಿ ಕ್ಯಾಬ್, ಎಚ್‌ಡಿಎಫ್‌ಸಿ ಲೈಫ್, ಟಾಟಾ ಕನ್ಸ್ಯೂಮರ್, ಯೆಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಏಂಜಲ್ ಬ್ರೋಕಿಂಗ್, ಬಯೋಕಾನ್, ಐಡಿಬಿಐ, ಜೆಎಸ್‌ಡಬ್ಲ್ಯು ಸ್ಟೀಲ್, ಟಿವಿಎಸ್ ಮೋಟರ್ಸ್, ಹ್ಯಾವೆಲ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಬ್ಯಾಂಕ್ ಆಫ್ ಬರೋಡಾದಿಂದ ಕಿಸಾನ್ ದಿವಸ್

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ (ಬಿಒಬಿ) ವಿಶ್ವ ಆಹಾರ ದಿನದ ಹಿನ್ನೆಲೆಯಲ್ಲಿ ಬರೋಡಾ ಕಿಸಾನ್ ದಿವಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. 'ಬರೋಡಾ ಕಿಸಾನ್ ಪಖ್ವಾಡಾ'ದ 4ನೇ ಆವೃತ್ತಿ ಇದಾಗಿದ್ದು, ಹದಿನೈದು ದಿನಗಳವರೆಗೆ ನಡೆಯಲಿದೆ.

ಬ್ಯಾಂಕ್‌ನ 16 ವಲಯ ಕಚೇರಿಗಳಲ್ಲಿ ತನ್ನ ಹೊಸ ಕೇಂದ್ರೀಕೃತ ಕೃಷಿ ಸಾಲ ಸಂಸ್ಕರಣಾ ಘಟಕಗಳಾದ 'ಕೃಷಿ ಮಾರುಕಟ್ಟೆ ಮತ್ತು ಸಂಸ್ಕರಣೆ ಶಿಬಿರ' ಆರಂಭಿಸಿದೆ. 'ನಾವು ಕೃಷಿ ಮತ್ತು ಸಂಬಂಧಿತ ಕೈಗಾರಿಕೆಗಳ ಸುಸ್ಥಿರ ಬೆಳವಣಿಗೆಗೆ ಹೂಡಿಕೆ ಮಾಡಲು ಬದ್ಧರಾಗಿದ್ದೇವೆ. ಈ ಕಾರ್ಯಕ್ರಮದ ಅಡಿಯಲ್ಲಿ ಬ್ಯಾಂಕಿನ ರೈತ ಕೇಂದ್ರಿತ ಉಪಕ್ರಮಗಳನ್ನು ಪರಿಚಯಿಸುತ್ತೇವೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸಂಜೀವ್ ಛಡ್ಡಾ ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಹೆಚ್.ಕೆ. ಸೀತಾಬಾಯಿರವರು
ತಂದೆ ತಾಯಿ ರಹಿತ ಜೀವನ ಒಂದು ಶೂನ್ಯ ಆದರೆ ಅವರನ್ನು ಸ್ಮರಿಸುವ ಬದುಕು ಬಹಳ ಸುಂದರ ಸಾರ್ಥಕ ಹಾಗೂ ಹೆಚ್ಚು ಅರ್ಥಪೂರ್ಣ.
ಆರ್ ಎಲ್ ಆರ್ ಸಿಂದ್ಯಾ....
ಇಂತಿ ದುಃಖತಪ್ತ: ಕುಟುಂಬವರ್ಗದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಶ್ರೀಅಂಭಾಭವಾನಿ||★ ಆರಾಧನೆಯಿಂದ ಪ್ರೀತಿಪ್ರೇಮ, ಸಾಲದಬಾದೆ, ಕಲಹಸಮಸ್ಯೆ, ಆಸ್ತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ ಇನ್ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನಮೂಲಕ ಪರಿಹಾರ.ಪಂ.ರಾಮ್. 9980988841

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ sslc,puc degree ಸಂಬಳ 15000 to 28000 ಸಂಪರ್ಕಿಸಿರಿ:8904879948/ 89048 79491

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸಮಾಜಸೇವೆ
Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ
Travel

ಅಂಡಮಾನ್ ಹವಳದ್ವೀಪ Royal Package ಅಕ್ಟೊಬರ್, ನವೆಂಬರ್, ಡಿಸೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ಸುಸಜ್ಜಿತ ವ್ಯವಸ್ಥೆಯೊಂದಿಗೆ 07.11.2021, 09.02.2022 ರಿಂದ 6/12 ದಿನಗಳ ಕಾಶಿ, ಗಯಾ. 25.11.2021, 18.02.2022 ರಿಂದ 17/21 ದಿನಗಳ ರಾಜಸ್ಥಾನ್, ಗುಜರಾತ್. 18.12.2021 ರಿಂದ 7/12/16 ದಿನಗಳ ಸಿಮ್ಲಾ, ಮನಾಲಿ, ವೈಷ್ಣೊದೇವಿ. 20.11.2021, 18.02.2022 ರಿಂದ 12/15 ದಿನಗಳ ಮಧ್ಯಪ್ರದೇಶ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ, ಬೆಂಗಳೂರು.23. 080-23385837, 8088887677

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬೆಂಗಳೂರಿನಲ್ಲಿ ₹ 100ರ ಗಡಿ ದಾಟಿದ ಡೀಸೆಲ್ ದರ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಭಾನುವಾರ ಲೀಟರಿಗೆ 35 ಪೈಸೆಯಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಡೀಸೆಲ್ ದರವು ಲೀಟರಿಗೆ 100ರ ಗಡಿ ದಾಟಿರುವ ನಗರಗಳ ಸಾಲಿಗೆ ಬೆಂಗಳೂರು ಸಹ ಸೇರಿಕೊಂಡಿದೆ. ಬೆಂಗಳೂರಿನಲ್ಲಿ ಡೀಸೆಲ್ ದರ ಲೀಟರಿಗೆ 100.32ಕ್ಕೆ ಏರಿಕೆ ಆಗಿದೆ. ಪೆಟ್ರೋಲ್ ದರ ಲೀಟರಿಗೆ 109.47ಕ್ಕೆ ತಲುಪಿದೆ.

ಭಾನುವಾರದ ದರ ಏರಿಕೆಯ ನಂತರ ಪೆಟ್ರೋಲ್, ಡೀಸೆಲ್ ದರವು ವಿಮಾನ ಇಂಧನ ದರಕ್ಕಿಂತಲೂ ಶೇ 30ರಷ್ಟು ಹೆಚ್ಚಾಗಿದೆ. ದೆಹಲಿಯಲ್ಲಿ ವಿಮಾನ ಇಂಧನ ದರ ಕಿಲೋ ಲೀಟರಿಗೆ ₹ 79 ಇದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 105.84ಕ್ಕೆ ಮತ್ತು ಡೀಸೆಲ್ ದರ ಲೀಟರಿಗೆ ₹ 94.57ಕ್ಕೆ ಏರಿಕೆ ಆಗಿದೆ.

ಮುಂಬೈನಲ್ಲಿ ಪೆಟ್ರೋಲ್ ದರ ₹ 111.77 ಮತ್ತು ಡೀಸೆಲ್ ದರ ₹ 102.52ರಷ್ಟಕ್ಕೆ ತಲುಪಿದೆ.

ಚಿನ್ನದ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಚಿನ್ನದ ಆಮದು ಮೌಲ್ಯವು ಈ ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ₹ 1.78 ಲಕ್ಷ ಕೋಟಿಗೆ ಏರಿಕೆ ಆಗಿದೆ. ಚಿನ್ನಕ್ಕೆ ಬೇಡಿಕೆ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 50,524 ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು. ಬೆಳ್ಳಿ ಆಮದು ಪ್ರಮಾಣವು ಶೇ 15.5ರಷ್ಟು ಇಳಿಕೆ ಆಗಿದ್ದು ₹ 4,601 ಕೋಟಿಗಳಷ್ಟಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 21,547 ಕೋಟಿ ಮೌಲ್ಯದ ಬೆಳ್ಳಿ ಆಮದಾಗಿತ್ತು. ಚಿನ್ನದ ಆಮದು ಹೆಚ್ಚಿರುವುದರಿಂದ ವ್ಯಾಪಾರ ಕೊರತೆ ಅಂತರ ₹ 21,992 ಕೋಟಿಗಳಿಂದ ₹ 1.67 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ಹಣಕಾಸು ವರ್ಷದ ಮೊದಲಾರ್ಧದಲ್ಲಿ ರತ್ನ ಮತ್ತು ಚಿನ್ನಾಭರಣ ರಫ್ತು ₹ 64,641 ಕೋಟಿಗಳಿಂದ ₹ 1.43 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಹಬ್ಬದ ಋತು ಮತ್ತು ಹೆಚ್ಚಿನ ಬೇಡಿಕೆಯ ಕಾರಣಗಳಿಂದಾಗಿ ಚಿನ್ನದ ಆಮದು ಪ್ರಮಾಣ ಏರಿಕೆ ಆಗಿದೆ ಎಂದು ರತ್ನ ಮತ್ತು ಚಿನ್ನಾಭರಣ ಉತ್ತೇಜನ ಮಂಡಳಿಯ (ಜಿಜೆಇಪಿಸಿ) ಅಧ್ಯಕ್ಷ ಕೋಲಿನ್ ಶಾ ಹೇಳಿದ್ದಾರೆ.

ಬಾಂಗ್ಲಾ ದುರ್ಗಾಪೂಜೆ ಹಿಂಸಾಚಾರ ಮುಂದುವರಿಕೆ

ಢಾಕಾ (ಪಿಟಿಐ): 'ಬಾಂಗ್ಲಾದೇಶದಲ್ಲಿ ದುರ್ಗಾಪೂಜೆ ಆಚರಣೆಯ ವೇಳೆ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಪ್ರಾರ್ಥನಾ ಸ್ಥಳದ ಮೇಲೆ ಶನಿವಾರ ಅಪರಿಚಿತರ ಮುಸ್ಲಿಮರಿಂದ ದಾಳಿ ನಡೆದಿದೆ. ದೇಶದಲ್ಲಿ ಕೋಮುಗಲಭೆ ಮುಂದುವರಿದಿದ್ದು, ಅಲ್ಪಸಂಖ್ಯಾತ ಹಿಂದೂಗಳು ಘಟನೆಯನ್ನು ಖಂಡಿಸಿ ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಿದ್ದಾರೆ' ಎಂದು ಮಾಧ್ಯಮಗಳು ವರದಿ ಮಾಡಿವೆ.

ರಾಜಧಾನಿ ಢಾಕಾದಿಂದ 17 ಕಿ.ಮೀ. ದೂರವಿರುವ ಫೆನಿ ಪ್ರದೇಶದಲ್ಲಿ ಹಿಂದೂಗಳ ಒಡೆತನದ ದೇವಸ್ಥಾನ ಹಾಗೂ ಅಂಗಡಿಗಳ ಮೇಲೆ ದಾಳಿ ನಡೆಸಿ, ದರೋಡೆ ಮಾಡಲಾಗಿದೆ.

ಡಿಐಪಿಎಎಂ ಕಾರ್ಯದರ್ಶಿ ಪಾಂಡೆ ಹೇಳಿಕೆ

ಏರ್ ಇಂಡಿಯಾ: ಸರ್ಕಾರದ ಪ್ರತಿದಿನದ ಖರ್ಚು ₹20 ಕೋಟಿ!

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸನ್ಸ್‌ಗೆ ಮಾರಾಟ ಮಾಡಿದ್ದನ್ನು ವಿರೋಧ ಪಕ್ಷ ಕಾಂಗ್ರೆಸ್ ಟೀಕಿಸಿದೆಯಾದರೂ, 'ಟಾಟಾದವರಿಗೆ ಸಿಕ್ಕಿರುವುದು ಲಾಭ ತಂದುಕೊಡುತ್ತಿದ್ದ ಕಂಪನಿಯೇನೂ ಅಲ್ಲ' ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ತಿರುಗೇಟು ನೀಡಿದ್ದಾರೆ. ಕಂಪನಿ ಮುಳುಗದಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರವು ಪ್ರತಿದಿನ ₹ 20 ಕೋಟಿ ವಿನಿಯೋಗ ಮಾಡಬೇಕಾಗಿದೆ ಎಂದು ಹೇಳಿದ್ದಾರೆ.

ಹಳೆಯ ವಿಮಾನಗಳನ್ನು ಸರಿಪಡಿಸಲು ಟಾಟಾ ಸನ್ಸ್ ಹಣ ಖರ್ಚು ಮಾಡಬೇಕು, ಒಂದು ವರ್ಷದವರೆಗೆ ಕಂಪನಿಯ ಯಾವ ನೌಕರನನ್ನೂ ಕೆಲಸದಿಂದ ತೆಗೆಯುವಂತೆ ಇಲ್ಲ, ವಿಆರ್‌ಎಸ್ (ಸ್ವಯಂ ನಿವೃತ್ತಿ ಯೋಜನೆ) ಜಾರಿಗೊಳಿಸಿದ ನಂತರವೇ ಸಿಬ್ಬಂದಿ ಸಂಖ್ಯೆಯಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಇದೆ ಎಂದು ಪಾಂಡೆ ಅವರು ಹೇಳಿದ್ದಾರೆ.

'ಇವೆಲ್ಲವೂ ಬಹಳ ಸುಲಭವಾಗಿ ಆಗುವ ಕೆಲಸಗಳಲ್ಲ. ಏರ್ ಇಂಡಿಯಾ ವರ್ಷಗಳಿಂದ ಅನುಭವಿಸಿದ ನಷ್ಟವನ್ನು ಸರಿದೂಗಿಸಲು ಮಾಡಿದ ಸಾಲವನ್ನು ಪೂರ್ತಿಯಾಗಿ ವಹಿಸಿಕೊಳ್ಳಬೇಕಿಲ್ಲ ಎಂಬುದೊಂದೇ ಅವರಿಗೆ (ಟಾಟಾ ಸನ್ಸ್) ಅನುಕೂಲಕರ ಅಂಶ. ಏರ್ ಇಂಡಿಯಾ ಮಾರಾಟದಿಂದಾಗಿ ಸಾರ್ವಜನಿಕರ ಹಣ ಉಳಿತಾಯ ಆಗಿದೆ' ಎಂದು ಅವರು ಹೇಳಿದ್ದಾರೆ.

ಟಾಟಾ ಸನ್ಸ್‌ಗೆ ಏರ್ ಇಂಡಿಯಾ ಕಂಪನಿಯ 141 ವಿಮಾನಗಳು ದೊರೆಯಲಿವೆ. ಈ ಪೈಕಿ 42 ವಿಮಾಗಳು ಲೀಸ್ ಆಧಾರದಲ್ಲಿ ತೆಗೆದುಕೊಂಡವು. ಇನ್ನುಳಿದ 99 ವಿಮಾನಗಳು ಸ್ವಂತದ್ದು. 'ಕಂಪನಿಯ ಹಸ್ತಾಂತರ ಪ್ರಕ್ರಿಯೆಯನ್ನು ಶೀಘ್ರವೇ ಪೂರ್ಣಗೊಳಿಸಲಿದ್ದೇವೆ. ಏರ್ ಇಂಡಿಯಾದ ಹೊಸ ಮಾಲೀಕ ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆ ಮಾಡಬೇಕಾಗುತ್ತದೆ. ಆಗ ಮಾತ್ರ ಕಂಪನಿಯನ್ನು ಹಳಿಗೆ ತರಲು ಸಾಧ್ಯ' ಎಂದು ಪಾಂಡೆ ಹೇಳಿದ್ದಾರೆ.

ಚಿತ್ರದುರ್ಗ ಮುರುಘಾಮಠದ ಅನುಭವ ಮಂಟಪದಲ್ಲಿ ಭಾನುವಾರ ಶ್ರೀಮಠದಿಂದ ನಡೆದ ಶರಣ ಸಂಸ್ಕೃತಿ ಉತ್ಸವದಲ್ಲಿ ಬಾಹ್ಯಾಕಾಶ ವಿಜ್ಞಾನಿ ಡಾ.ಕೆ. ಕಸ್ತೂರಿ ರಂಗನ್ ಅವರಿಗೆ 2020ನೇ ಸಾಲಿನ 'ಬಸವಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರು, ಆದಿಚುಂಚನಗಿರಿ ಮಠದ ಸೌಮ್ಯಾನಂದನಾಥ ಸ್ವಾಮೀಜಿ, ಕಬೀರಾನಂದಾಶ್ರಮದ ಶಿವಲಿಂಗಾನಂದ ಸ್ವಾಮೀಜಿ, ಉತ್ಸವ ಸಮಿತಿ ಗೌರವಾಧ್ಯಕ್ಷರಾದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಕಾರ್ಯಾಧ್ಯಕ್ಷ ಕೆ.ಎಸ್. ನವೀನ್ ಇದ್ದರು.

ಅಭ್ಯರ್ಥಿಗಳಿಂದ ದೂರು; ಅಮಾನತ್ತಾಗಿದ್ದ ಚಾಲಕ ಸೇರಿ ಇಬ್ಬರ ಬಂಧನ

ಕೆಎಸ್‌ಆರ್‌ಟಿಸಿ ಕೆಲಸ; ₹ 18 ಕೋಟಿ ವಂಚನೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ (ಕೆಎಸ್‌ಆರ್‌ಟಿಸಿ) ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ 500ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ಸುಮಾರು ₹ 18 ಕೋಟಿ ಪಡೆದು ವಂಚಿಸಿರುವ ಆರೋಪದ ಮೇಲೆ ಇಬ್ಬರನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ಹಗರಿ ಬೊಮ್ಮನಹಳ್ಳಿಯ ಮಂಜುನಾಥ್ ಹಾಗೂ ಅನಿಲ್ ಬಂಧಿತರು. ಕೆಎಸ್‌ಆರ್‌ಟಿಸಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಮಂಜುನಾಥ್‌ನನ್ನು ದುರ್ನಡತೆ ತೋರಿದ್ದಕ್ಕಾಗಿ ಇತ್ತೀಚೆಗಷ್ಟೇ ಅಮಾನತು ಮಾಡಲಾಗಿತ್ತು. ಆತನೇ ಅನಿಲ್ ಜೊತೆ ಸೇರಿ ಅಭ್ಯರ್ಥಿಗಳನ್ನು ಸಂಪರ್ಕಿಸಿ ವಂಚಿಸುತ್ತಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಎಸ್‌ಆರ್‌ಟಿಸಿಯಲ್ಲಿ ಚಾಲಕ, ನಿರ್ವಾಹಕ, ಸಂಚಾರಿ ನಿರೀಕ್ಷಕ ಸೇರಿದಂತೆ ಹಲವು ಹುದ್ದೆಗಳನ್ನು ಕೊಡಿಸುವುದಾಗಿ ಆರೋಪಿಗಳು, ಅಭ್ಯರ್ಥಿಗಳಿಗೆ ಆಮಿಷವೊಡ್ಡುತ್ತಿದ್ದರು. 'ನಮಗೆ ಎಲ್ಲ ಹಿರಿಯ ಅಧಿಕಾರಿಗಳ ಪರಿಚಯವಿದೆ. ಅವರ ಮೂಲಕ ನೇರವಾಗಿ ಹುದ್ದೆಗೆ ನೇಮಕ ಮಾಡಿಸಲಾಗುವುದು' ಎಂದೂ ಹೇಳುತ್ತಿದ್ದರು.'

'ಆರೋಪಿಗಳ ಮಾತು ನಂಬಿದ್ದ ಬೆಳಗಾವಿ, ವಿಜಯಪುರ, ಬಳ್ಳಾರಿ, ಗದಗ, ಚಿತ್ರದುರ್ಗ, ದಾವಣಗೆರೆ, ರಾಯಚೂರು ಹಾಗೂ ಹಲವು ನಗರಗಳ ಅಭ್ಯರ್ಥಿಗಳು ಹಣ ನೀಡಿದ್ದರು. ಆದರೆ, ಅವರಿಗೆ ಆರೋಪಿ ಯಾವುದೇ ಕೆಲಸ ಕೊಡಿಸಿರಲಿಲ್ಲ. ಹಣವನ್ನೂ ವಾಪಸು ಕೊಟ್ಟಿರಲಿಲ್ಲ. ಬೇಸತ್ತ ಅಭ್ಯರ್ಥಿಗಳು ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ಅಧಿಕಾರಿ ತಿಳಿಸಿದರು.

ಬಂಧಿತ ಮಂಜುನಾಥ್



ಬಂಧಿತ ಅನಿಲ್

ಸುಮಾರು ₹3.50 ಕೋಟಿಗೆ ದಾಖಲೆ ಲಭ್ಯ: 'ಒಟ್ಟು ₹ 18 ಕೋಟಿ ವಂಚನೆ ಆಗಿರುವುದಾಗಿ ಅಭ್ಯರ್ಥಿಗಳು ಆರೋಪಿಸುತ್ತಿದ್ದಾರೆ. ಅಭ್ಯರ್ಥಿಗಳು ಆರೋಪಿಗಳಿಗೆ ನೀಡಿದ್ದಾರೆ ಎನ್ನಲಾದ ಸುಮಾರು ₹ 3.50 ಕೋಟಿಗೆ ಮಾತ್ರ ದಾಖಲೆಗಳು ಸಿಕ್ಕಿವೆ. ಉಳಿದ ಹಣದ ದಾಖಲೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಕಾರಿನ ಮೇಲೆ ಕರ್ನಾಟಕ ಸರ್ಕಾರ ಫಲಕ: 'ವಂಚನೆಯಿಂದ ಗಳಿಸಿದ್ದ ಹಣದಲ್ಲಿ ಆರೋಪಿಗಳು ಐಷಾರಾಮಿ ಜೀವನ ನಡೆಸುತ್ತಿದ್ದರು. ಕಾರು ಖರೀದಿಸಿದ್ದ ಆರೋಪಿ ಮಂಜುನಾಥ್, 'ಕರ್ನಾಟಕ ಸರ್ಕಾರ' ಎಂಬುದಾಗಿ ಕಾರಿನ ಮೇಲೆ ಫಲಕ ಹಾಕಿಸಿಕೊಂಡಿದ್ದ. ಅದೇ ಕಾರಿನಲ್ಲೇ ನಗರ ಹಾಗೂ ಹೊರ ಜಿಲ್ಲೆಗಳಲ್ಲಿ ಸುತ್ತಾಡುತ್ತಿದ್ದ. ತಾನೊಬ್ಬ ಸರ್ಕಾರದಲ್ಲಿ ಪ್ರಭಾವಿ ವ್ಯಕ್ತಿ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದ' ಎಂದೂ ಅಧಿಕಾರಿ ವಿವರಿಸಿದರು.

'ಆರೋಪಿಗಳ ಹೆಸರಿನ ಖಾತೆಗಳಲ್ಲಿದ್ದ ಹಣ ಹಾಗೂ ಅವರು ಬಳಸುತ್ತಿದ್ದ ಕಾರು ಜಪ್ತಿ ಮಾಡಲಾಗಿದೆ. ಸದ್ಯ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದೂ ಅವರು ತಿಳಿಸಿದರು.

'ರಾಜಕಾರಣಿ, ಅಧಿಕಾರಿಗಳಿಗೆ ಹಣ ಕೊಟ್ಟಿರುವೆ'

'ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳನ್ನು ಹುಡುಕಿ ಹಣ ಪಡೆಯುತ್ತಿದ್ದರು. ಅದರಲ್ಲಿ ಬಹುತೇಕ ಹಣವನ್ನು ಕೆಲ ರಾಜಕಾರಣಿ ಹಾಗೂ ಅಧಿಕಾರಿಗಳಿಗೆ ನೀಡಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಅಭ್ಯರ್ಥಿಗಳು ಆರೋಪಿಸಿರುವಷ್ಟು ಹಣ ಆರೋಪಿಗಳ ಬಳಿ ಸಿಕ್ಕಿಲ್ಲ. ಹಣವನ್ನು ಎಲ್ಲಿ ಇಟ್ಟಿದ್ದಾರೆ ಹಾಗೂ ಯಾರ ಕೈಗೆ ಕೊಟ್ಟಿದ್ದಾರೆ ಎಂಬುದು ತನಿಖೆಯಿಂದಲೇ ತಿಳಿಯಬೇಕು' ಎಂದೂ ಹೇಳಿದರು.

'150ಕ್ಕೂ ಹೆಚ್ಚು ಸಿಮ್‌ಕಾರ್ಡ್ ಬಳಕೆ'

'ಬಂಧಿತ ಆರೋಪಿಗಳು, 150ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳನ್ನು ಬಳಸುತ್ತಿದ್ದರು. ಅದೇ ನಂಬರ್‌ಗಳ ಮೂಲಕ ಅಭ್ಯರ್ಥಿಗಳನ್ನು ಸಂಪರ್ಕಿಸುತ್ತಿದ್ದರು. ಹಣ ತಮ್ಮ ಕೈಗೆ ತಲುಪಿದ ನಂತರ, ಮೊಬೈಲ್ ನಂಬರ್ ಸ್ವಿಚ್ ಆಫ್ ಮಾಡುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಹುತೇಕ ಅಭ್ಯರ್ಥಿಗಳು, ಮುಖಾಮುಖಿ ಭೇಟಿಯಾಗಿ ಹಣ ನೀಡಿದ್ದಾರೆ. ಕೆಲವರು ಆನ್‌ಲೈನ್ ಮೂಲಕವೂ ಹಣ ವರ್ಗಾವಣೆ ಮಾಡಿರುವುದು ಗೊತ್ತಾಗಿದೆ' ಎಂದೂ ಹೇಳಿದರು.

ಭೂಕುಸಿತ: ನೆಲೆ ಕಳೆದುಕೊಂಡ ಬದುಕು

ಕೂಟ್ಟಿಕಲ್ ಜಿಲ್ಲೆಯ ಪೂವಂಚಿ ಬೆಟ್ಟದ ತಪ್ಪಲಿನಲ್ಲಿ ಮಳೆಯಿಂದಾಗಿ ಭೂಕುಸಿತ ಉಂಟಾಗಿದ್ದು, ಭಾನುವಾರ ಇದರ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಎನ್‌ಡಿಆರ್‌ಎಫ್ ತಂಡ –ಪಿಟಿಐ ಚಿತ್ರ

ತಿರುವನಂತಪುರ (ಪಿಟಿಐ): ಕೂಟ್ಟಿಕಲ್‌ನ ಪಶ್ಚಿಮ ಘಟ್ಟದ ಪರ್ವತಶ್ರೇಣಿಗೆ ಹೊಂದಿಕೊಂಡಂತೆ ಇರುವ ಕುಗ್ರಾಮದ ವೃದ್ಧ ಮಹಿಳೆಯೊಬ್ಬರು, ಭಾನುವಾರ ಬೆಳಿಗ್ಗೆ ಅಳುತ್ತಲೇ ಅತ್ತಿಂದಿತ್ತ ಓಡಾಡುತ್ತಿದ್ದರು. ತಮಗೆ ದುರಾದ ಎಲ್ಲರ ಎದುರೂ 'ನಾನು ಎಲ್ಲವನ್ನೂ ಕಳೆದುಕೊಂಡೆ. ನಾನೀಗ ಎಲ್ಲಿಗೆ ಹೋಗಲಿ? ನನಗೆ ಆಸರೆಯಾರು?' ಎಂದು ಹಲುಬುತ್ತಿದ್ದರು.

ಶನಿವಾರ ಸುರಿದ ಸುರಿದ ಮಳೆಯು ಆ ಮಹಿಳೆಯ ಮನೆ ಸೇರಿದಂತೆ ಎಲ್ಲವನ್ನೂ ಕೊಚ್ಚಿಕೊಂಡು ಹೋಗಿದೆ. ಮೈಮೇಲೆ ಇರುವ ಹರಿದ ಸೀರೆಯೊಂದನ್ನು ಬಿಟ್ಟು ಆಕೆಯ ಬಳಿ ಬೇರಾವ ವಸ್ತ್ರವೂ ಉಳಿದಿಲ್ಲ. ಕೂಡಿಟ್ಟಿದ್ದ ಪುಡಿಗಾಸು ಹಾಗೂ ದವಸ–ಧಾನ್ಯಗಳೆಲ್ಲ ನೀರುಪಾಲಾಗಿವೆ.

ಗುಡಿಸಲು ಕಟ್ಟಿಕೊಟ್ಟಲು ತನಗೆ ತುಸು ಜಾಗ ಕೊಡುವಂತೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮನವಿ ಮಾಡಿದ ವೃದ್ಧೆ, 'ನನ್ನ ಇಬ್ಬರು ಹೆಣ್ಣುಮಕ್ಕಳ ಮನೆಗಳೂ ಮುಳುಗಿಹೋಗಿವೆ. ಎಲ್ಲಿಗೆ ಹೋಗಬೇಕೆಂಬುದೇ ತಿಳಿಯುತ್ತಿಲ್ಲ. ಚರ್ಚ್ ಬಳಿ ಹೋಗುತ್ತೇನೆ; ಅಲ್ಲಿಯೇನಾದರೂ ಜಾಗ ಸಿಗಬಹುದೇ ನೋಡುತ್ತೇನೆ' ಎಂದು ತಮಗೆ ಎದುರಾದ ಮಾಧ್ಯಮದವರ ಮುಂದೆ ಹೇಳಿಕೊಂಡರು.

ಈ ವೃದ್ಧೆಯಂತೆಯೇ ಕೋಟಯಂ ಜಿಲ್ಲೆಯ ಕೂಟ್ಟಿಕಲ್‌ನಲ್ಲಿ ಹಲವಾರು ಜನರು ದಿಢೀರನೇ ನೆಲೆ ಕಳೆದುಕೊಂಡಿದ್ದಾರೆ. ಶನಿವಾರ ಸುರಿದ ಮಳೆಯಿಂದ ಹಾಗೂ ಭೂಕುಸಿತದಿಂದ ಅಲ್ಲಿನ ಜನರ ಬದುಕೇ ಬದಲಾಗಿದೆ. ಮನೆ ಕಳೆದುಕೊಂಡ ಆ ಊರವರಿಗೆ ಆರೈಕೆ ಕೇಂದ್ರಗಳಲ್ಲಿ ಆಸರೆ ಸಿಕ್ಕಿದೆ.

ತಮ್ಮ ಮನೆಗೆ ಏಕಾಏಕಿ ನುಗ್ಗಿದ ನೀರಿನಿಂದ ತಾವು, ತಮ್ಮ ಪತ್ನಿ ಮತ್ತು ಮಕ್ಕಳ ಜೀವ ಉಳಿದಿದ್ದೇ ಅದೃಷ್ಟ ಎನ್ನುವ ಸ್ಥಳೀಯರೊಬ್ಬರು, ತಾವು ಉಟ್ಟಿದ್ದ ಧೋತಿಯನ್ನು ತೋರಿಸಿ, 'ಇದನ್ನು ಪಕ್ಕದ ಮನೆಯವರು ಕೊಟ್ಟಿದ್ದು' ಎಂದು ಹೇಳುತ್ತ ಭಾವುಕರಾದರು.

ದಶಕದಲ್ಲೇ ಇಷ್ಟು ದೊಡ್ಡ ಮಳೆಯನ್ನು ನೋಡಿರಲಿಲ್ಲ ಎನ್ನುತ್ತಿರುವ ಸ್ಥಳೀಯರು, 2018ರಲ್ಲಿ ಬಂದಿದ್ದ ಪ್ರವಾಹ ಕೂಡ ಇಷ್ಟು ಹಾನಿ ಮಾಡಿರಲಿಲ್ಲ ಎಂದು ಹೇಳುತ್ತಿದ್ದಾರೆ.

ಇಡುಕ್ಕಿ ಜಿಲ್ಲೆಯ ಕೊಕ್ಕಯಾರ್‌ನಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ.ಮಕ್ಕಳೂ ಸೇರಿದಂತೆ, ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿದ್ದ ಕುಟುಂಬದ ನಾಲ್ವರು ತಮ್ಮ ಕಣ್ಣಮುಂದೆಯೇ ಕೊಚ್ಚಿ ಹೋಗಿದ್ದನ್ನು ಕಂಡಿರುವ ರಾಜಮ್ಮ, ಆ ಆಘಾತದಿಂದ ಹೊರಬಂದಿಲ್ಲ. 'ಬೆಟ್ಟದ ಕಡೆಯಿಂದ ನುಗ್ಗಿ ಬರುತ್ತಿದ್ದ ನೀರನ್ನು ಕಂಡೊಡನೇ ನಾನು ಅವರಿಗೆ ಎಚ್ಚರಿಸಿದೆ. ಆದರೆ, ಅಷ್ಟರಲ್ಲೇ ಬಂಡೆಗಳು ಕುಸಿದು ಬೀಳತೊಡಗಿದವು. ಪ್ರವಾಹದೊಂದಿಗೇ ಅವರೂ ಕೊಚ್ಚಿ ಹೋದರು...' ಎಂದು ಆ ಘಟನೆಯನ್ನು ನೆನೆದು ಕಣ್ಣೀರಾದರು.

10ಕ್ಕೂ ಹೆಚ್ಚು ದೊಡ್ಡ ಸೇತುವೆಗಳು, ಅಷ್ಟೇ ಸಂಖ್ಯೆಯ ಮರದ ಸೇತುವೆಗಳು ಕೊಚ್ಚಿ ಹೋಗಿವೆ ಎಂದು ಎಂದು ಪರಿಹಾರ ಕಾರ್ಯದಲ್ಲಿ ಕೈಜೋಡಿಸಿರುವ ಸ್ಥಳೀಯರಾದ ಜಾರ್ಜ್ ಹೇಳಿದರು.

ಕೂಟ್ಟಿಕಲ್ ಹಾಗೂ ಕೊಕ್ಕಯಾರ್ ಪಂಚಾಯಿತಿ ವ್ಯಾಪ್ತಿಯಲ್ಲಿ12 ಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ.

ಸೇನಾಪಡೆ, ಎನ್‌ಡಿಆರ್‌ಎಫ್, ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿಯು ಸ್ಥಳೀಯರೊಡಗೂಡಿ ಭಾನುವಾರ ಬೆಳಿಗ್ಗೆ ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ.

ಈ ಮಧ್ಯೆ, ಕೇರಳದಲ್ಲಿ ಮೇಲಿಂದ ಮೇಲೆ ಸಂಭವಿಸುತ್ತಿರುವ ಪ್ರಾಕೃತಿಕ ವಿಕೋಪಗಳಿಂದಾಗಿ, ಪಶ್ಚಿಮ ಘಟ್ಟಗಳ ಸಂರಕ್ಷಣೆ ಹಾಗೂ ಪರಿಸರ ವಿರೋಧಿ ಚಟುವಟಿಕೆಗಳ ಕಡಿವಾಣಕ್ಕೆ ಆಗ್ರಹಿಸುವ ಅಭಿಯಾನವು ಮತ್ತೆ ದನಿ ಪಡೆದಿದೆ.

ದೆಹಲಿಯಲ್ಲಿ ಭಾರಿ ಮಳೆ

ನವದೆಹಲಿ (ಪಿಟಿಐ): ರಾಜಧಾನಿ ದೆಹಲಿಯಲ್ಲಿ ಭಾನುವಾರ ಭಾರಿ ಮಳೆ ಸುರಿದಿದ್ದು, ನಗರದ ಹಲವಾರು ಭಾಗಗಳು ಜಲಾವೃತವಾಗಿದ್ದವು. ಇದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಯಿತು. ಉತ್ತರ ಪ್ರದೇಶ ಮತ್ತು ಹರಿಯಾಣದ ಕೆಲ ಭಾಗಗಳಲ್ಲೂ ಬಿರುಸಿನ ಮಳೆ ಆಗಿದೆ.

ಕೇಂದ್ರದ ನೆರವು: ಪ್ರಧಾನಿ ಭರವಸೆ

ನವದೆಹಲಿ(ಪಿಟಿಐ): ಮಳೆ, ಪ್ರವಾಹ, ಭೂಕುಸಿತದಿಂದ ಸಂಕಷ್ಟದಲ್ಲಿರುವ ಕೇರಳಕ್ಕೆ ಅಗತ್ಯವಾದ ಎಲ್ಲ ನೆರವನ್ನೂ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಹೇಳಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಭಾನುವಾರ ಕರೆ ಮಾಡಿದ ಪ್ರಧಾನಿ ಮೋದಿ, ರಾಜ್ಯದ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದರು. ಕೇಂದ್ರದಿಂದ ನೆರವನ್ನು ಒದಗಿಸುವ ಭರವಸೆ ನೀಡಿದರು.

ಸರ್ಕಾರವು ಕೇರಳದ ಪರಿಸ್ಥಿತಿಯ ಮೇಲೆ ನಿರಂತರ ನಿಗಾ ಇಟ್ಟಿದ್ದು, ಈಗಾಗಲೇ ಎನ್‌ಡಿಆರ್‌ಎಫ್ ತಂಡಗಳನ್ನು ಅಲ್ಲಿಗೆ ಕಳುಹಿಸಿಕೊಡಲಾಗಿದ್ದು, ಎಲ್ಲರ ಸುರಕ್ಷತೆಗೆ ಪ್ರಾರ್ಥಿಸುವುದಾಗಿ ಸಚಿವ ಅಮಿತ್ ಶಾ ಟ್ವೀಟ್ ಮಾಡಿದ್ದಾರೆ.

ಎನ್‌ಡಿಆರ್‌ಎಫ್‌ನ 11 ತಂಡಗಳು ಈಗಾಗಲೇ ಕೇರಳದಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯದಲ್ಲಿ ನಿರತವಾಗಿವೆ.

ಉತ್ತರಾಖಂಡ: ಶಾಲೆ, ಕಾಲೇಜು ರಜೆ

ಡೆಹ್ರಾಡೂನ್: ಉತ್ತರಾಖಂಡದಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಸೋಮವಾರದ ವರೆಗೆ ರಾಜ್ಯದ ಬಹುತೇಕ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿದೆ. ಪರ್ವತಾರೋಹಣ, ಶಿಬಿರ ಮತ್ತು ಚಾರಣದಂಥ ಚಟುವಟಿಕೆಗಳನ್ನು ಮಂಗಳವಾರದವರೆಗೆ ನಿಷೇಧಿಸಲಾಗಿದೆ.

ರಾಜ್ಯದ 13 ಜಿಲ್ಲೆಗಳಲ್ಲಿ ಸೋಮವಾರ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲಾಡಳಿತಗಳು ಈ ಆದೇಶ ಹೊರಡಿಸಿವೆ. ಅದರಂತೆ 13 ಜಿಲ್ಲೆಗಳಲ್ಲಿಯ ಶಾಲೆ, ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳು ತೆರೆದಿರುವುದಿಲ್ಲ.

ಅ.19ರ ವರೆಗೆ ಚಮೋಲಿ ಜಿಲ್ಲೆಯ ನಂದಾದೇವಿ ರಾಷ್ಟ್ರೀಯ ಉದ್ಯಾನ ಮತ್ತು ಗೋಪೇಶ್ವರದ ಸಂಪೂರ್ಣ ಅರಣ್ಯ ಪ್ರದೇಶದಲ್ಲಿ ಚಾರಣ, ಪರ್ವತಾರೋಹಣದಂಥ ಚಟುವಟಿಕೆಯನ್ನು ಜಿಲ್ಲಾಡಳಿತ ನಿಷೇಧಿಸಿದೆ.

ಡೆಹ್ರಾಡೂನ್‌ನಲ್ಲಿ ಇದೇ 18, 19ರಂದು ನಡೆಯಬೇಕಿದ್ದ ಜಿಲ್ಲಾಮಟ್ಟದ ಖೇಲ್ ಮಹಾಕುಂಭವನ್ನು ಅ.24 ಮತ್ತು 25ಕ್ಕೆ ಮುಂದೂಡಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಕಥಾಸಾಗರ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ಸಂಜೆ 4: ವೈದ್ಯಮಿತ್ರ, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ದಲಿತರಿಗೆ ಅರ್ಚಕ ಹುದ್ದೆ ಮತ್ತು ಮುಜರಾಯಿ ಕಾಯ್ದೆ
ಭಾಗವಹಿಸುವವರು:
ರಾಜಗುರು ಬಿ.ಎಸ್.ದ್ವಾರಕನಾಥ್
ಎಸ್.ಎಂ. ಜಾಮದಾರ್, ನಿವೃತ್ತ ಐಎಎಸ್ ಅಧಿಕಾರಿ
ಜಿ.ಎನ್. ನಾಗರಾಜ್, ಸಿಪಿಎಂ ರಾಜ್ಯ ಮಂಡಳಿ ಸದಸ್ಯ
ಸಬಿತಾ ಬನ್ನಾಡಿ, ಪ್ರಾಧ್ಯಾಪಕಿ, ಅಂಕಣಕಾರ್ತಿ

ಸಂವಾದ
ಸಂಜೆ 4 ರಿಂದ 5

ಬೀದರ್ ಜಿಲ್ಲೆಯ ಹುಲಸೂರ ತಾಲ್ಲೂಕಿನ ಜಮಖಂಡಿ ಸಮೀಪದ ಹಳ್ಳದ ಸೇತುವೆ ಮಳೆಯ ಅಬ್ಬರಕ್ಕೆ ಕೊಚ್ಚಿ ಹೋಗಿದೆ

ಮಳೆ: ಕೊಚ್ಚಿ ಹೋದ ಸೇತುವೆ

ಬೀದರ್: ಜಿಲ್ಲೆಯ ವಿವಿಧೆಡೆ ಭಾನುವಾರ ಬೆಳಗಿನ ಜಾವ ಮಳೆಯಾಯಿತು. ಮಹಾರಾಷ್ಟ್ರದಲ್ಲಿ ಸುರಿದ ಭಾರಿ ಮಳೆಗೆ ಹುಲಸೂರ ತಾಲ್ಲೂಕಿನ ಜಮಖಂಡಿ ಸಮೀಪದ ಹಳ್ಳದ ಸೇತುವೆ ಕೊಚ್ಚಿಕೊಂಡು ಹೋಗಿದೆ.

ರಾಷ್ಟ್ರೀಯ ಹೆದ್ದಾರಿ–752ರ ಹುಲಸೂರ–ಲಾತೂರ್ ನಡುವಿನ ಸಂಪರ್ಕ ಕಡಿತಗೊಂಡಿದ್ದು, ಹಳ್ಳದ ದಂಡೆ ಮೇಲಿನ ಪಪ್ಪಾಯಿ ಬೆಳೆ ಹಾಳಾಗಿದೆ.

ಜಮಖಂಡಿ ಬಳಿಯಿರುವ ಹಳೆಯದಾದ ಸೇತುವೆ ಶಿಥಿಲಗೊಂಡ ಕಾರಣ ಪಕ್ಕದಲ್ಲಿ ಪೈಪ್ ಅಳವಡಿಸಿ ಇನ್ನೊಂದು ಚಿಕ್ಕ ಸೇತುವೆ ನಿರ್ಮಿಸಲಾಗಿತ್ತು. ಈಗ ಅದೇ ಸೇತುವೆ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದೆ.

ಬಸವಕಲ್ಯಾಣದಲ್ಲಿ 73 ಮಿ.ಮೀ. ನಾರಾಯಣಪುರದಲ್ಲಿ 68.5 ಮಿ.ಮೀ ಮತ್ತು ಹುಲಸೂರಿನಲ್ಲಿ 68.5 ಮಿ.ಮೀ. ಮಳೆ ದಾಖಲಾಗಿದೆ.

ಕರಾವಳಿಯಲ್ಲಿ ಉತ್ತಮ ಮಳೆ (ಮಂಗಳೂರು ವರದಿ): ಕರಾವಳಿ ಜಿಲ್ಲೆಗಳು ಹಾಗೂ ಮಲೆನಾಡಿನಲ್ಲಿ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗಿನವರೆಗೂ ನಿರಂತರ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಮನೆಗಳು ಪೂರ್ಣ ಹಾನಿಯಾಗಿವೆ. ಉಡುಪಿ ಜಿಲ್ಲೆಯಲ್ಲೂ ಹಲವೆಡೆ ಮನೆಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ಕಡೂರು ಭಾಗದಲ್ಲಿ ಭಾನುವಾರ ಮಧ್ಯಾಹ್ನ ಬಿರುಸಾಗಿ ಮಳೆ ಸುರಿದಿದೆ. ಮಲೆನಾಡು ಭಾಗದ ಹಳ್ಳ, ಝರಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಸಿಂಘು ಹತ್ಯೆ ಪ್ರಕರಣ ತನಿಖೆಗೆ ಎರಡು ಎಸ್‌ಐಟಿ

ಚಂಡೀಗಡ (ಪಿಟಿಐ): ಸಿಂಘು ಗಡಿಯಲ್ಲಿ ರೈತರ ಪ್ರತಿಭಟನಾ ಸ್ಥಳದ ಸಮೀಪ ನಡೆದ ದಲಿತ ಸಿಖ್ ವ್ಯಕ್ತಿಯ ಹತ್ಯೆ ಪ್ರಕರಣದಲ್ಲಿ ಬಂಧಿಸಲಾಗಿದ್ದ ಮೂವರನ್ನು, ಇಲ್ಲಿನ ನ್ಯಾಯಾಲಯವು ಆರು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಿದೆ. ಪ್ರಕರಣದ ತನಿಖೆಗೆ ಹರಿಯಾಣ ಸರ್ಕಾರವು ಎರಡು ವಿಶೇಷ ತನಿಖಾ ತಂಡಗಳನ್ನು (ಎಸ್‌ಐಟಿ) ರಚಿಸಿದೆ.

ಹತ್ಯೆಗೆ ಸಂಬಂಧಿಸಿದಂತೆ ಶುಕ್ರವಾರ ಸಂಜೆ ಒಬ್ಬ ಆರೋಪಿ ಸೋನಿಪತ್ ಪೊಲೀಸರಿಗೆ ಶರಣಾಗಿದ್ದ. ನ್ಯಾಯಾಲಯವು, ಆ ಆರೋಪಿಯನ್ನು ಈಗಾಗಲೇ ಪೊಲೀಸ್ ಬಂಧನಕ್ಕೆ ನೀಡಿದೆ. ಇನ್ನೂ ಇಬ್ಬರು ಆರೋಪಿಗಳು ಶನಿವಾರ ಪೊಲೀಸರಿಗೆ ಶರಣಾಗಿದ್ದರು. ಶನಿವಾರ ಸಂಜೆ ನಿಹಾಂಗರ ನಾಯಕ ನಾರಾಯಿಣ್ ಸಿಂಗ್‌ನನ್ನು ಪೊಲೀಸರು ಬಂಧಿಸಿದ್ದರು. ಈ ಮೂವರನ್ನೂ ಭಾನುವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು.

ಕೃತ್ಯವನ್ನು ಮರುಸೃಷ್ಟಿಸಲು ಮತ್ತು ಕೃತ್ಯದ ಸ್ಥಳದಲ್ಲಿನ ಸಾಕ್ಷ್ಯಗಳನ್ನು ಪತ್ತೆ ಮಾಡಲು ಆರೋಪಿಗಳು ಪೊಲೀಸರ ಬಂಧನದಲ್ಲಿರುವುದು ಅನಿವಾರ್ಯ. ಹೀಗಾಗಿ ಅವರನ್ನು ಪೊಲೀಸ್ ಬಂಧನಕ್ಕೆ ನೀಡುವಂತೆ ಪೊಲೀಸರು ನ್ಯಾಯಾಲಯವನ್ನು ಕೋರಿದ್ದರು. ಈ ಮನವಿಯನ್ನು ನ್ಯಾಯಾಲಯವು ಮಾನ್ಯ ಮಾಡಿದೆ.

2 ಕೋಟಿ ಮಂದಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದವರ ಸಂಖ್ಯೆ 2 ಕೋಟಿ ಗಡಿ ದಾಟಿದೆ.

ಈವರೆಗೆ 6.08 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿದೆ. 4.08 ಕೋಟಿ ಮಂದಿ ಮೊದಲ ಡೋಸ್ ಲಸಿಕೆಯನ್ನು ಪಡೆದುಕೊಂಡಿದ್ದಾರೆ. ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ಡೋಸ್‌ಗಳನ್ನು ವಿತರಿಸಿದ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಸೋನಿಯಾಗೆ ಸಿಧು ಪತ್ರ: ಭೇಟಿಗೆ ಅವಕಾಶ ಕೋರಿಕೆ

'ಪುನಶ್ಚೇತನಕ್ಕೆ ಕೊನೇ ಅವಕಾಶ'

ಚಂಡಿಗಡ (ಪಿಟಿಐ): ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದು, ರಾಜ್ಯ ಸರ್ಕಾರ ಈಡೇರಿಸಬೇಕಾದ ಜನರ ಆಶೋತ್ತರಗಳನ್ನು ಅದು ಒಳಗೊಂಡಿದೆ.

2022ರ ಪಂಜಾಬ್ ವಿಧಾನಸಭಾ ಚುನಾವಣಾ ಪ್ರಣಾಳಿಕೆಗೂ ಮುನ್ನ, ತಮ್ಮ 13 ಅಂಶಗಳ ಕಾರ್ಯಸೂಚಿಯನ್ನು ಅವರು ಪ್ರಕಟಿಸಿದ್ದಾರೆ. ಈ ಬಗ್ಗೆ ಚರ್ಚಿಸುವುದಕ್ಕಾಗಿ ಸೋನಿಯಾ ಗಾಂಧಿ ಭೇಟಿಗೆ ಅವಕಾಶ ಕೋರಿದ್ದಾರೆ.

ದೆಹಲಿಯಲ್ಲಿ ಪಕ್ಷದ ಹಿರಿಯ ನಾಯಕರನ್ನು ಭೇಟಿಯಾದ ಮರುದಿನ ಬರೆದಿರುವ ಪತ್ರದಲ್ಲಿ, 'ಇದು, ಪಂಜಾಬಿನಲ್ಲಿ ಪಕ್ಷದ ಪುನರುಜ್ಜೀವನಕ್ಕೆ ಇರುವ ಕೊನೆಯ ಅವಕಾಶ' ಎಂದು ಸಿಧು ಉಲ್ಲೇಖಿಸಿದ್ದಾರೆ.

ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸಿಧು, ತಮ್ಮ ಆತಂಕಗಳನ್ನು ಪರಿಹರಿಸಲಾಗಿದೆ ಎಂದು ಅಕ್ಟೋಬರ್ 15ರಂದು ಹೇಳಿದ್ದರು. ಸಿಧು ರಾಜ್ಯ ಘಟಕದ ಮುಖ್ಯಸ್ಥರಾಗಿ ಮುಂದುವರಿಯಲಿದ್ದಾರೆ ಎಂದು ಪಕ್ಷ ಹೇಳಿತ್ತು. ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ ನಂತರ ಈ ನಿರ್ಧಾರಕ್ಕೆ ಬರಲಾಗಿತ್ತು.

2017ರ ಚುನಾವಣಾ ಪ್ರಚಾರದ ವೇಳೆ ತಯಾರಿಸಿದ್ದ 18 ಅಂಶಗಳ ಕಾರ್ಯಸೂಚಿಯ ಅಂಶಗಳು ಹಾಗೂ ರಾಜ್ಯ ಸರ್ಕಾರ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ರಾಜ್ಯ ಸರ್ಕಾರವು ಆದ್ಯತೆಯ ಮೇರೆಗೆ ಈಡೇರಿಸಬೇಕು ಎಂದು ಸಿಧು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

2015ರಲ್ಲಿ ಫರೀದ್‌ಕೋಟ್‌ನ ಕೋಟ್ಕಾಪುರ ಮತ್ತು ಬೆಹ್ಬಾಲ್ ಕಲಾನ್‌ನಲ್ಲಿ ನಡೆದ ಪೊಲೀಸ್ ಗುಂಡಿನ ದಾಳಿ ವಿಚಾರವಾಗಿ, ಪಂಜಾಬ್ ಜನರು ನ್ಯಾಯ ಬಯಸುತ್ತಿದ್ದಾರೆ ಎಂದು ಸಿಧು ಹೇಳಿದ್ದಾರೆ.

'13 ಅಂಶಗಳ ಕಾರ್ಯಸೂಚಿಯು ಪಕ್ಷದ ಪ್ರಣಾಳಿಕೆಗಿಂತ ಭಿನ್ನವಾಗಿದ್ದು, ದೀರ್ಘಾವಧಿಯಲ್ಲಿ ಕಾರ್ಯಗತಗೊಳಿಸಬೇಕಾದ ಅಂಶಗಳನ್ನು ಒಳಗೊಂಡಿದೆ. ಇದು ಶಿಕ್ಷಣ ತಜ್ಞರು, ನಾಗರಿಕ ಸಮಾಜ, ಪಕ್ಷದ ಕಾರ್ಯಕರ್ತರೊಂದಿಗೆ ಹಲವು ವರ್ಷಗಳ ಸಮಾಲೋಚನೆ ಮತ್ತು ಪ್ರತಿಕ್ರಿಯೆಯ ಬಳಿಕ ರೂಪಿಸಲಾಗಿದೆ' ಎಂದು ಸಿಧು ವಿವರಿಸಿದ್ದಾರೆ.

ಪಂಜಾಬ್‌ನ ಜನರ ಹಿತಾಸಕ್ತಿಗಾಗಿ ತಕ್ಷಣವೇ ಕಾರ್ಯನಿರ್ವಹಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ನಾನು ವಿನಂತಿಸುತ್ತೇನೆ

ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ (ಸೋನಿಯಾಗೆ ಬರೆದ ಪತ್ರದಲ್ಲಿ)

ಸಿಧು ಪ್ರಸ್ತಾಪಿಸಿದ ಕೆಲವು ಅಂಶಗಳು

- ಎಸ್‌ಟಿಎಫ್ ವರದಿಯಲ್ಲಿ ಮಾದಕವಸ್ತು ಪ್ರಕರಣದ ದೊಡ್ಡ ವ್ಯಕ್ತಿಯ ಹೆಸರಿದ್ದು, ಅವರನ್ನು ತಕ್ಷಣ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು
- ರಾಜ್ಯ ಸರ್ಕಾರವು ಕೇಂದ್ರದ ಮೂರು ಕೃಷಿ ಕಾನೂನುಗಳನ್ನು ತಿರಸ್ಕರಿಸಬೇಕು ಮತ್ತು ಪಂಜಾಬ್‌ನಲ್ಲಿ ಯಾವುದೇ ಕಾರಣಕ್ಕೂ ಅವುಗಳನ್ನು ಜಾರಿಗೊಳಿಸುವುದಿಲ್ಲ ಎಂದು ಘೋಷಿಸಬೇಕು
- ವಿದ್ಯುತ್ ಖರೀದಿ ಒಪ್ಪಂದದ ಬಗ್ಗೆ ರಾಜ್ಯ ಸರ್ಕಾರ ಶ್ವೇತಪತ್ರ ಹೊರಡಿಸಬೇಕು

'ರಾಜೀ-ಸಂಧಾನವಷ್ಟೇ ಲೋಕ ಅದಾಲತ್ ಕೆಲಸ'

ನವದೆಹಲಿ: ಸಾಕ್ಷ್ಯಗಳ ಆಧಾರದಲ್ಲಿ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಅಧಿಕಾರ ಲೋಕ ಅದಾಲತ್‌ಗೆ ಇಲ್ಲ ಎಂದು ಸುಪ್ರೀಂ ಮಹತ್ವದ ತೀರ್ಪು ನೀಡಿದೆ.

ಮಧ್ಯಪ್ರದೇಶದಲ್ಲಿ ಈಚೆಗೆ ನಡೆದಿದ್ದ ಲೋಕ ಅದಾಲತ್‌ನಲ್ಲಿ ಆಸ್ತಿ ವ್ಯಾಜ್ಯವೊಂದನ್ನು ಸಾಕ್ಷ್ಯಗಳ ಆಧಾರದಲ್ಲಿ ಇತ್ಯರ್ಥಪಡಿಸಲಾಗಿತ್ತು. ಈ ನಿರ್ಧಾರದ ವಿರುದ್ಧ ವಾದಿಗಳೊಬ್ಬರು ಮಧ್ಯಪ್ರದೇಶ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್, ಲೋಕ ಅದಾಲತ್‌ನ ತೀರ್ಪನ್ನು ಎತ್ತಿಹಿಡಿದಿತ್ತು. ಹೀಗಾಗಿ ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಲೋಕ ಅದಾಲತ್ ಮತ್ತು ಮಧ್ಯಪ್ರದೇಶ ಹೈಕೋರ್ಟ್‌ನ ತೀರ್ಪನ್ನು ವಜಾ ಮಾಡಿದೆ.

'ರಾಜೀ- ಸಂಧಾನ ನಡೆಸಿ ವ್ಯಾಜ್ಯ ಇತ್ಯರ್ಥಪಡಿಸುವ ಅಧಿಕಾರವಷ್ಟೇ ಲೋಕ ಅದಾಲತ್‌ಗೆ ಇದೆ. ರಾಜಿ ಸಂಧಾನ ಸಾಧ್ಯವಾಗದೇ ಇದ್ದಲ್ಲಿ, ಪ್ರಕರಣದ ಕಡತವನ್ನು ಸಂಬಂಧಿತ ನ್ಯಾಯಾಲಯಕ್ಕೆ ವಾಪಸ್ ಮಾಡಬೇಕು' ಎಂದು ಸುಪ್ರೀಂ ತನ್ನ ತೀರ್ಪಿನಲ್ಲಿ ಹೇಳಿದೆ.

ಕೇಸರಿ ದಿರಿಸಿನಲ್ಲಿ ಪೊಲೀಸರು!

ಒಂದನೇ ಪುಟದಿಂದ

ಪೊಲೀಸರು ಹಿಂದುತ್ವ ಪರ ಸಂಘಟನೆಗಳಂತೆ ವರ್ತಿಸಿದ್ದಾರೆ ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವರು ಪೊಲೀಸರು ಕೇಸರಿ ವಸ್ತ್ರ ಧರಿಸಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

'ಗೊಂದಲಕ್ಕೆ ಒಳಗಾಗಬೇಡಿ...! ಇದು ಹಿಂದೂ ಸಂಘಟನೆ ಬೈಟಕ್ ಅಲ್ಲ. ಇದು ನಮ್ಮ ಪೊಲೀಸರ ತಂಡ. ಜೈ ಶ್ರೀರಾಮ್...' ಎಂಬ ಸಾಲುಗಳೊಂದಿಗೆ ಈ ಫೋಟೊಗಳನ್ನು ಹರಿಯಬಿಡಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಈ ಚಿತ್ರಗಳು ದಿನವಿಡೀ ಜೋರಾಗಿ ಸದ್ದು ಮಾಡಿದವು.

'ಆಯುಧ ಪೂಜೆ ಅಂಗವಾಗಿ ಪೊಲೀಸ್ ಠಾಣೆಗಳಲ್ಲಿ ಮೊದಲಿನಿಂದಲೂ ಶಸ್ತ್ರಾಸ್ತ್ರಗಳಿಗೆ ಪೂಜೆ ಸಲ್ಲಿಸುವುದು ಸಂಪ್ರದಾಯ. ಆ ಪ್ರಕಾರ ಅಂದು ವಿಜಯಪುರ ಗ್ರಾಮೀಣ ಠಾಣೆಯಲ್ಲೂ ಪೂಜೆ ನಡೆಯಿತು. ಈ ಕಾರ್ಯಕ್ರಮದಲ್ಲಿ ನಾನೂ ಪಾಲ್ಗೊಂಡಿದ್ದೇನೆ. ಇದರಲ್ಲಿ ತಪ್ಪೇನಿಲ್ಲ. ಮುಸ್ಲಿಮರು ಕರೆದರೂ ಹೋಗುವೆ, ನಮಾಜ್ ಮಾಡುವೆ. ನಾನು ಯಾವುದೇ ಆಚರಣೆಯ ವಿರೋಧಿಯಲ್ಲ' ಎಂದು ವಿಜಯಪುರ ಎಸ್‌ಪಿ ಆನಂದಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪ್ರಶ್ನೆಗಳ ಸುರಿಮಳೆ: ಪೊಲೀಸರು ಕೇಸರಿ ದಿರಿಸಿನಲ್ಲಿರುವ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಹಲವರು, ಪ್ರಶ್ನೆಗಳ ಸುರಿಮಳೆಗೈದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವ ಕಾರಣದಿಂದ ಪೊಲೀಸರು ಪ್ರಭಾವಿತರಾಗಿ ಈ ರೀತಿ ಮಾಡಿದ್ದಾರೆ ಎಂಬ ಆರೋಪವನ್ನೂ ಮಾಡಿದ್ದಾರೆ.

'ಪೊಲೀಸರ ಸಮವಸ್ತ್ರ ಬದಲಾಗಿದೆಯೆ?', 'ಪೊಲೀಸ್ ಇಲಾಖೆಯೇ ಕೇಸರಿ ಧರಿಸಿರುವುದು ಪೂರ್ವನಿಯೋಜಿತವೆ?' ಎಂಬ ಪ್ರಶ್ನೆಗಳನ್ನು ಕೇಳಿದ್ದಾರೆ.

ಉಡುಪಿ ಶಾಸಕ ಕೆ. ರಘುಪತಿ ಭಟ್, ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಸೇರಿದಂತೆ ಹಲವರು ಪೊಲೀಸರ ಬೆಂಬಲಕ್ಕೆ ನಿಂತಿದ್ದಾರೆ. ಕೇಸರಿ ವಸ್ತ್ರ ಧರಿಸಿದ್ದನ್ನು ಟೀಕಿಸಿರುವವರ ವಿರುದ್ಧ ಅವರು ಹರಿಹಾಯ್ದಿದ್ದಾರೆ.

ವಿಜಯಪುರ ಗ್ರಾಮೀಣ ಠಾಣೆಯ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಆಯುಧ ಪೂಜೆ ದಿನ ಈ ರೀತಿ ಕಾಣಿಸಿಕೊಂಡರು

ಮತ್ತಷ್ಟು ಫೋಟೊಗಳು ಬಹಿರಂಗ

ವಿಜಯಪುರ ಗ್ರಾಮೀಣ ಮತ್ತು ಕಾಪು ಠಾಣೆಗಳ ಪೊಲೀಸರು ಕೇಸರಿ ವಸ್ತ್ರ ಧರಿಸಿದ್ದ ಫೋಟೊಗಳು ಬಹಿರಂಗಗೊಂಡು, ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ರಾಜ್ಯದ ವಿವಿಧೆಡೆ ಪೊಲೀಸರು ಬಿಳಿ, ಹಸಿರು, ತಿಳಿಗೆಂಪು ಸೇರಿ ನಾನಾ ಬಣ್ಣಗಳ ದಿರಿಸಿ ಧರಿಸಿ ಆಯುಧ ಪೂಜೆ ಮಾಡಿರುವ ಫೋಟೊಗಳೂ ಬಹಿರಂಗವಾಗಿವೆ.

'ಹಳೇ ಸಂಪ್ರದಾಯ; ಹೊಸದೇನಲ್ಲ'

ಬೆಂಗಳೂರು: 'ಆಯುಧ ಪೂಜೆಯಂದು ಪೊಲೀಸ್ ಠಾಣೆಗಳಲ್ಲಿ ಶಸ್ತ್ರಾಸ್ತ್ರ ಹಾಗೂ ಇತರೆ ಪೂಜೆಗಳು ನಡೆಯುತ್ತವೆ. ಸಿಬ್ಬಂದಿ, ತಮ್ಮಿಷ್ಟದ ಬಟ್ಟೆಗಳನ್ನು ಧರಿಸಿಕೊಂಡು ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಇದು ಹಳೇ ಸಂಪ್ರದಾಯ, ಹೊಸದೇನಲ್ಲ' ಎಂದು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. 'ಕರ್ತವ್ಯದ ವೇಳೆ ಪೊಲೀಸ್ ಸಮವಸ್ತ್ರ ಧರಿಸುವುದು ಕಡ್ಡಾಯ. ಆದರೆ, ಆಯುಧ ಪೂಜೆ ದಿನದಂದು ಸಿಬ್ಬಂದಿಯೇ ತಮ್ಮಿಷ್ಟದ ಬಟ್ಟೆಗಳನ್ನು ಹಾಕಿಕೊಂಡು ಬರುತ್ತಾರೆ. ಕೇಸರಿ, ಹಸಿರು, ಹಳದಿ, ಬಿಳಿ ಸೇರಿ ಎಲ್ಲ ಬಣ್ಣದ ಬಟ್ಟೆಗಳನ್ನೂ ಹಾಕಿಕೊಂಡು ಫೋಟೊಗಳನ್ನು ತೆಗೆಸಿಕೊಳ್ಳುತ್ತಾರೆ. ಇದೀಗ ಅಂಥ ಫೋಟೊಗಳನ್ನೇ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ' ಎಂದರು. 'ಪೊಲೀಸರೂ ಮನುಷ್ಯರೇ. 24 ಗಂಟೆ ಜನರಿಗಾಗಿ ಕೆಲಸ ಮಾಡುವ ಅವರು, ಆಯುಧ ಪೂಜೆ ದಿನವೂ ಶ್ರದ್ಧೆಯಿಂದ ಸಾಂಪ್ರದಾಯಿಕ ಉಡುಗೆಯಲ್ಲಿ ತಮ್ಮ ಠಾಣೆಗಳಲ್ಲಿ ಪೂಜೆ ಮಾಡುತ್ತಾರೆ. ಅವರ ಬಟ್ಟೆಗಳ ಬಣ್ಣಗಳ ಆಧಾರದಲ್ಲಿ ಅಪಪ್ರಚಾರ ಮಾಡುವುದು ಸರಿಯಲ್ಲ' ಎಂದು ಈ ಅಧಿಕಾರಿ ಹೇಳಿದರು.

'ತ್ರಿಶೂಲ, ಹಿಂಸೆಯ ದೀಕ್ಷೆ ಕೊಟ್ಟುಬಿಡಿ'

ಒಂದನೇ ಪುಟದಿಂದ

'ಗೂಂಡಾಗಿರಿಯನ್ನು 'ಕ್ರಿಯೆಗೆ ಪ್ರತಿಕ್ರಿಯೆ' ಎಂದು ಸಮರ್ಥಿಸಿದ ಮುಖ್ಯಮಂತ್ರಿ ಕರೆಗೆ ಓಗೊಟ್ಟು ಪೊಲೀಸರು ನೆಲದ ಕಾನೂನನ್ನು ಠಾಣೆಯೊಳಗೆ ಕೂಡಿ ಹಾಕಿ, ಕಾಡಿನ ಕಾನೂನನ್ನು ಜಾರಿಗೆ ತರಲು ಬೀದಿಗಿಳಿದಂತಿದೆ.' ಎಂದು ಹೇಳಿದ್ದಾರೆ.

'ಇದು ಯೋಗಿ ಆದಿತ್ಯನಾಥರ ಉತ್ತರ ಪ್ರದೇಶದ ಜಂಗಲ್ ರಾಜ್ ಅಲ್ಲ. ಬಸವರಾಜ ಬೊಮ್ಮಾಯಿ ಅವರೇ, ಸಂವಿಧಾನಬದ್ಧವಾಗಿ ಆಡಳಿತ ನಡೆಸಲು ಸಾಧ್ಯವಾಗದಿದ್ದರೆ ದಯವಿಟ್ಟು ರಾಜೀನಾಮೆ ಕೊಟ್ಟು ಪ್ರಜಾಪ್ರಭುತ್ವ ಉಳಿಸಿ' ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

'ಹಿಂದೂ ಹಬ್ಬದ ಸಮಯದಲ್ಲಿ ಹಿಂದೂ ಸಾಂಪ್ರದಾಯಿಕ ಉಡುಗೆ, ಅದೂ ಕೇಸರಿ ಬಣ್ಣದ್ದು ತೊಟ್ಟಿದ್ದಕ್ಕೇ ಈ ಮಟ್ಟದ ಅಸಹನೆ ನಿಮಗೆ ಉಂಟಾಗುತ್ತದೆ ಎಂದಾದರೆ, ನೀವೊಬ್ಬ ಮತೀಯವಾದಿ.' ಎಂದು ಕೆಲವರು ಸಿದ್ದರಾಮಯ್ಯ ಅವರಿಗೆ ಟ್ವಿಟರ್‌ನಲ್ಲೇ ಪ್ರತಿಕ್ರಿಯಿಸಿದ್ದಾರೆ.

ಮ್ಯಾರಥಾನ್: ರೊಟಿಚ್, ಮೆಮುಯೆಗೆ ಪ್ರಶಸ್ತಿ

ಪ್ಯಾರಿಸ್ (ರಾಯಿಟರ್ಸ್): ಕೀನ್ಯಾದ ಎಲಿಶಾ ರೊಟಿಚ್ ಮತ್ತು ಇಥಿಯೋಪಿಯಾದ ಟಿಜಿಸ್ಟ್ ಮೆಮುಯೆ ಅವರು ಪ್ಯಾರಿಸ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಮ್ಯಾರಥಾನ್‌ನ ಪುರುಷರ ವಿಭಾಗದಲ್ಲಿ ರೊಟಿಚ್ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಎರಡು ತಾಸು ನಾಲ್ಕು ನಿಮಿಷ 21 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಕೂಟದಲ್ಲಿ ಈ ಹಿಂದಿನ ದಾಖಲೆ ಇಥಿಯೋಪಿಯಾದ ಕೆನೆನಿಸಾ ಬೆಕೆಲೆ (2 ತಾಸು, 5 ನಿಮಿ, 4 ಸೆಕೆಂಡು) ಅವರ ಹೆಸರಿನಲ್ಲಿತ್ತು.

ಇಥಿಯೋಪಿಯಾದ ಹೈಲೆಮರ್ಯಮ್ ಕಿರೋಸ್ ಮತ್ತು ಕೀನ್ಯಾದ ಹಿಲರಿ ಕಿಪ್ಸಾಂಬು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಮೆಮುಯೆ 2 ತಾಸು, 26 ನಿಮಿಷ, 12 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಇಥಿಯೋಪಿಯಾದವರೇ ಆದ ಯೆನೆನೇಶ್ ದಿಂಕೆಸ ಮತ್ತು ಫಂತು ಜಿಮ್ಮಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.



ಅಂತಿಮ ಗೆರೆಯತ್ತ ಧಾವಿಸಿದ ಟಿಜಿಸ್ಟ್ ಮೆಮುಯೆ– ಎಎಫ್‌ಪಿ ಚಿತ್ರ

ಯುವಿ ಬಂಧನ

ಹಿಸಾರ್ (ಪಿಟಿಐ): ಜಾತಿ ನಿಂದನೆ ಆರೋಪ ಎದುರಿಸುತ್ತಿರುವ ಕ್ರಿಕೆಟಿಗ ಯುವರಾಜ್ ಸಿಂಗ್ ಅವರನ್ನು ಹೈಕೋರ್ಟ್ ಆದೇಶದ ಮೇರೆಗೆ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಹರಿಯಾಣ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಯುವರಾಜ್

ಹೋದ ವರ್ಷ ಇನ್‌ಸ್ಟಾಗ್ರಾಂ ಸಂವಾದದಲ್ಲಿ ಯುವರಾಜ್ ಮತ್ತೊಬ್ಬ ಕ್ರಿಕೆಟಿಗನನ್ನು ನಿಂದಿಸಿದ ಆರೋಪ ಎದುರಿಸುತ್ತಿದ್ದಾರೆ.

ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಮತ್ತು ಭಾರತೀಯ ದಂಡಸಂಹಿತೆಯ ವಿವಿಧ ಕಲಂಗಳನ್ನು ಉಲ್ಲೇಖಿಸಿ ಹನ್ಸಿ ಠಾಣೆಯಲ್ಲಿ ರಜತ್ ಎಂಬುವವರು ದೂರು ನೀಡಿದ್ದರು. ಅದರ ಪ್ರಕಾರ ಯುವರಾಜ್ ಮೇಲೆ ಎಫ್‌ಐಆರ್ ದಾಖಲಿಸಲಾಗಿತ್ತು.

ಬೆಬೆ ರಿಕೊಗೆ ನೀರಜ್ ಪಂಚ್

ದುಬೈ(ಪಿಟಿಐ): ಭಾರತದ ನೀರಜ್ ಗೋಯತ್ ವೃತ್ತಿಪರ ಬಾಕ್ಸಿಂಗ್‌ನಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ. ಸೂಪರ್ ಬಾಕ್ಸಿಂಗ್ ಲೀಗ್‌ನ ಕ್ರಿಪ್ಟೊ ಫೈಟ್ ನೈಟ್‌ನಲ್ಲಿ ಅವರು ಕಾಂಗೊದ ಬೆಬೆ ರಿಕೊ ಶಿಬಾಂಗು ಅವರನ್ನು ಸೋಲಿಸಿದರು.

ನೀರಜ್ ಗೋಯತ್

ಬ್ರಿಟನ್‌ನ ಬಾಕ್ಸಿಂಗ್ ತಾರೆ ಅಮೀರ್ ಖಾನ್ ಈ ಲೀಗ್‌ಗೆ ನೆರವು ನೀಡಿದ್ದಾರೆ.

ಈ ಗೆಲುವಿನೊಂದಿಗೆ ವೆಲ್ಟರ್‌ವೇಟ್ ಬೌಟ್ ವಿಭಾಗದಲ್ಲಿ ನೀರಜ್ ಅವರ ಮೂರು ವರ್ಷಗಳ ಅಜೇಯ ಓಟ ಮುಂದುವರಿಯಿತು. ಈ ಬೌಟ್‌ನ ಬಳಿಕ ನೀರಜ್, ಅಮೀರ್ ಖಾನ್ ಅವರಿಗೆ ಮತ್ತೊಮ್ಮೆ ಸವಾಲೊಡ್ಡಿದರು.

ಆದರೆ ಇದಕ್ಕೆ ಖಾನ್ ಅವರು ಸ್ಪಷ್ಟ ಉತ್ತರ ನೀಡಲಿಲ್ಲ.

ಈ ಕುರಿತು ಪ್ರತಿಕ್ರಿಯಿಸಿರುವ ಖಾನ್ ' ಮಾಧ್ಯಮಗಳಲ್ಲಿ ಈ ಕುರಿತು ಚರ್ಚೆ ನಡೆದಿದೆ. ಈ ಬೌಟ್ ನಡೆದರೆ ಅಭಿಮಾನಿಗಳೂ ಖುಷಿಯಾಗುತ್ತದೆ. ಏಕೆಂದರೆ ಇದು ಬಹುನಿರೀಕ್ಷಿತ' ಎಂದಿದ್ದಾರೆ.

ನ. 1ರಿಂದ 1ರಿಂದ 5ನೇ ತರಗತಿ ಆರಂಭಿಸಲು ಶಿಕ್ಷಣ ಇಲಾಖೆ ಪ್ರಸ್ತಾವನೆ

21 ರಿಂದ ಮಧ್ಯಾಹ್ನದ ಬಿಸಿಯೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ. 1 ರಿಂದ ಪ್ರಾಥಮಿಕ ಹಂತದಿಂದಲೇ (1ರಿಂದ 5ರವರೆಗಿನ ತರಗತಿ) ಶಾಲೆಗಳನ್ನು ತೆರೆಯಲು ರಾಜ್ಯ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇದೇ 21ರಿಂದ ಮಧ್ಯಾಹ್ನದ ಬಿಸಿಯೂಟ ವಿತರಿಸಲು ನಿರ್ಧರಿಸಿದೆ.

2021-22ನೇ ಸಾಲಿನಲ್ಲಿ 'ಪಿಎಂ–ಪೋಷಣ್ ಶಕ್ತಿ ನಿರ್ಮಾಣ್' ಮಧ್ಯಾಹ್ನದ ಉಪಾಹಾರ ಯೋಜನೆಯಡಿ ಶಾಲೆಗಳಲ್ಲಿರುವ ಅಡುಗೆ ಕೇಂದ್ರಗಳಲ್ಲಿ ಬಿಸಿಯೂಟ ಸಿದ್ಧಪಡಿಸುವ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ಬಿಸಿಯೂಟ ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ವಿತರಿಸುವ ವೇಳೆ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಇಲಾಖೆ ಹೊರಡಿಸಿದೆ.

ಶಾಲೆಯ ಮುಖ್ಯಸ್ಥರು, ಅಡುಗೆ ಸಿಬ್ಬಂದಿ, ಎಸ್‌ಡಿಎಂಸಿ ಸದಸ್ಯರು ಮತ್ತು ತಾಯಂದಿರ ಸಮಿತಿಯ ಸದಸ್ಯರು, ಅಕ್ಷರ ದಾಸೋಹದ ಮೇಲ್ವಿಚಾರಣಾ ಅಧಿಕಾರಿಗಳು ಮತ್ತು ಸಿದ್ಧಪಡಿಸಿದ ಆಹಾರ ವಿತರಿಸುವ ಸ್ವಯಂಸೇವಾ ಸಂಸ್ಥೆಗಳ ಮುಖ್ಯಸ್ಥರು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಅಡುಗೆ ಕೋಣೆ, ಪಾತ್ರೆ ಪರಿಕರಗಳ ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಅಡುಗೆ ಮಾಡಲು ಅಗತ್ಯವಾದ ಸಿದ್ಧತೆ, ಕೋವಿಡ್ ಸೋಂಕು ಹರಡದಂತೆ ವಹಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಮಾರ್ಗಸೂಚಿಯಲ್ಲಿ ವಿವರವಾಗಿ ತಿಳಿಸಲಾಗಿದೆ.

ಅಡುಗೆ ಸಿಬ್ಬಂದಿ ಕಡ್ಡಾಯವಾಗಿ ಎರಡು ಡೋಸ್ ಕೋವಿಡ್ ಲಸಿಕೆ ಹಾಕಿಸಿಕೊಂಡಿರಬೇಕು, ಬಿಸಿಯೂಟಕ್ಕೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಶಾಲೆಯಲ್ಲಿಯೇ ದಾಸ್ತಾನು ಇಟ್ಟುಕೊಳ್ಳಬೇಕು, ಬಿಸಿಯೂಟ ಸಿದ್ಧಪಡಿಸಿ ವಿತರಿಸುವ ಸ್ವಯಂಸೇವಾ ಸಂಸ್ಥೆಗಳು ಕೂಡಾ ಅಡುಗೆ ಸಿದ್ಧತೆ ಮತ್ತು ವಿತರಣೆಯ ಸಂದರ್ಭದಲ್ಲಿ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಕಡ್ಡಾಯವಾಗಿ ಪಾಲಿಸಬೇಕು. ಇಲಾಖೆ ಸೂಚಿಸಿದಂತೆ ಆಹಾರ ಸೂಚಿತ ಪಟ್ಟಿಯನ್ನು (ವಾರದ ಮೆನು) ಪಾಲಿಸಬೇಕು ಎಂದೂ ಸ್ಪಷ್ಟವಾಗಿ ಸೂಚಿಸಲಾಗಿದೆ.

ಅಡುಗೆ ಸಿಬ್ಬಂದಿ ಶಾಲೆಗೆ ಪ್ರತಿದಿನ ಬೆಳಿಗ್ಗೆ 9 ಗಂಟೆಗೆ ಹಾಜರಿದ್ದು, ಸ್ವಯಂಸೇವಾ ಸಂಸ್ಥೆಗಳು ಪೂರೈಸುವ ಸಿದ್ಧಪಡಿಸಿದ ಬಿಸಿಯೂಟದ ಬಾಕ್ಸ್ ಸ್ವೀಕರಿಸಲು ಸಿದ್ಧರಿರಬೇಕು. ಯಾವುದೇ ವಿದ್ಯಾರ್ಥಿಗೆ ಬಿಸಿಯೂಟದಲ್ಲಿ ಕೊರತೆ ಆಗದಂತೆ ನೋಡಿಕೊಳ್ಳಬೇಕು ಎಂದೂ ಮಾರ್ಗಸೂಚಿಯಲ್ಲಿ ಸೂಚಿಸಲಾಗಿದೆ.

ಕಾಶ್ಮೀರ: ವಲಸೆ ಕಾರ್ಮಿಕರ ಹತ್ಯೆ

ಶ್ರೀನಗರ (ಪಿಟಿಐ): ಕಾಶ್ಮೀರದಲ್ಲಿ ಬೇರೆ ರಾಜ್ಯಗಳಿಂದ ಬಂದವರ ಮೇಲಿನ ದಾಳಿ ಮುಂದುವರಿದ್ದು, ಭಾನುವಾರ ಕುಲ್ಗಾಂನಲ್ಲಿ ಅಪರಿಚಿತ ಉಗ್ರರು ಇಬ್ಬರು ವಲಸೆ ಕಾರ್ಮಿಕರನ್ನು ಗುಂಡಿಕ್ಕಿ ಕೊಂದಿದ್ದಾರೆ. ಮೃತ ಕಾರ್ಮಿಕರನ್ನು ಬಿಹಾರದ ರಾಜ ದೇವ್ ಮತ್ತು ಚುನ್ ಚುನ್ ದೇವ್ ಎಂದು ಗುರುತಿಸಲಾಗಿದೆ.

ಶಬರಿಮಲೆ: ಮುಖ್ಯ ಅರ್ಚಕರ ಆಯ್ಕೆ

ತಿರುವನಂತಪುರಂ (ಪಿಟಿಐ): ಮಾವೆಲಿಕ್ಕರದ ಕಳಿಯಕ್ಕಲ್ ಮಠದ ಎನ್.ಪರಮೇಶ್ವರನ್ ನಂಬೂಥಿರಿ ಅವರನ್ನು ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಮುಖ್ಯ ಅರ್ಚಕರನ್ನಾಗಿ ಆಯ್ಕೆ ಮಾಡಲಾಗಿದೆ.

ಹೈದರಾಬಾದ್ ರೇಸ್

ಫ್ರಾನ್ಸಿಸ್ ಬೇಕನ್ ಗೆಲ್ಲುವ ನಿರೀಕ್ಷೆ

ಜಿ.ಸುಧಾಕರ್ ರೆಡ್ಡಿ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫ್ರಾನ್ಸಿಸ್ ಬೇಕನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಥ್ಯಾಂಕ್ಸ್ 10, ಕಾಸ್ಮಿಕೊ 2, ಸೀ ಆಫ್ ಕ್ಲಾಸ್ 5
2ನೇ ರೇಸ್: ಎನ್.ಆರ್.ಐ ಸಿಟಿ 2, ಸೋಲೊ ವಿನ್ನರ್ 1, ಸದರ್ನ್ ಲೇಡಿ 5,
3ನೇ ರೇಸ್: ಅನ್‌ಸಂಗ್ ಹೀರೊ 4, ಕ್ವಾಲಿಟಿ ವಾರಿಯರ್ 3, ವಿಶನರಿ 11
4ನೇ ರೇಸ್: ಎನ್.ಆರ್.ಐ ಸನ್ 2, ಜಮಜೆಂಟಾ 3, ಶೋ ಮೀ ಯುವರ್ ವಾಕ್ 6
5ನೇ ರೇಸ್: ಎನ್.ಆರ್.ಐ ಮ್ಯಾಜಿಕ್ 1, ಬ್ಲಿಸ್‌ಫುಲ್ 3, ಅಲ್ಲೂರೀಸ್ ಪ್ರೈಡ್ 6
6ನೇ ರೇಸ್: ಫ್ರಾನ್ಸಿಸ್ ಬೇಕನ್ 2, ಸಫ್ರೋನ್ ಆರ್ಟ್ 1, ಲಮ್ಹಾ 4
7ನೇ ರೇಸ್: ಬ್ರಿಲಿಯಂಟ್ ವ್ಯೂ 1, ಸ್ಟನ್ನಿಂಗ್ ಫೋರ್ಸ್ 2, ಆರ್ಟ್ ಇನ್ ಮೋಶನ್ 8
8ನೇ ರೇಸ್: ಸ್ಮಾರ್ಟ್ ಮನಿ 1, ಸೆರೆನ್‌ಡಿಪ್ 4, ಸ್ಪುಟ್ನಿಕ್ 6

ಉತ್ತಮ ಬೆಟ್: ಎನ್.ಆರ್.ಐ ಸನ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3	3,4,5	6,7,8

ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್: ಭಾರತ–ಇಂಗ್ಲೆಂಡ್ ಅಭ್ಯಾಸ ಪಂದ್ಯ ಇಂದು

ರಾಹುಲ್–ಇಶಾನ್ ಪೈಪೋಟಿ

ದುಬೈ (ಪಿಟಿಐ): ಸೋಮವಾರ ಇಂಗ್ಲೆಂಡ್ ವಿರುದ್ಧದ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯ ದಲ್ಲಿ ಕಣಕ್ಕಿಳಿಯಲಿರುವ ಭಾರತ ತಂಡದಲ್ಲಿ ರೋಹಿತ್ ಶರ್ಮಾ ಜೊತೆ ಕೆ.ಎಲ್. ರಾಹುಲ್ ಅಥವಾ ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ಎಲ್ಲ ಆಟಗಾರರು ತಂಡ ಸೇರಿಕೊಂಡಿದ್ದಾರೆ. ಆದ್ದರಿಂದ ಟೂರ್ನಿಗಾಗಿ ಬಹಳಷ್ಟು ಅಭ್ಯಾಸ ಲಭಿಸಿದಂತಾಗಿದೆ. ಆದರೆ, ಕಣಕ್ಕಿಳಿಯುವ ಹನ್ನೊಂದರ ಬಳಗದ ಆಯ್ಕೆಯ ಬಗ್ಗೆ ನಾಯಕ ವಿರಾಟ್ ಹೆಚ್ಚು ಯೋಚನೆ ಮಾಡಬೇಕಿದೆ.

ಅಕ್ಟೋಬರ್ 24ರಂದು ಪಾಕಿಸ್ತಾನದ ಎದುರು ತನ್ನ ಅಭಿಯಾನ ಆರಂಭಿಸಲಿರುವ ಭಾರತ ತಂಡವು ಹನ್ನೊಂದರ ಬಳಗವನ್ನು ನಿರ್ಧರಿಸಬೇಕಿದೆ. ಬುಧವಾರ ಆಸ್ಟ್ರೇಲಿಯಾ ವಿರುದ್ಧವೂ ಒಂದು ಅಭ್ಯಾಸ ಪಂದ್ಯವನ್ನು ಭಾರತ ಆಡಲಿದೆ. ಎರಡು ಪಂದ್ಯಗಳಲ್ಲಿ ಉತ್ತಮವಾಗಿ ಆಡುವವರಿಗೆ ಅವಕಾಶ ದೊರೆಯುವ ಸಾಧ್ಯತೆ ಹೆಚ್ಚು.

ಉಪನಾಯಕ ರೋಹಿತ್ ಶರ್ಮಾ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಆದರೆ ಅವರೊಂದಿಗೆ ರಾಹುಲ್ ಅಥವಾ ಇಶಾನ್ ಕಿಶನ್ ಅವರಲ್ಲಿ ಒಬ್ಬರು ಸ್ಥಾನ ಪಡೆಯಬಹುದು. ಐಪಿಎಲ್‌ನಲ್ಲಿ ರಾಹುಲ್ ಉತ್ತಮವಾಗಿ ಆಡಿದ್ದರು. 626 ರನ್‌ಗಳನ್ನು ಪೇರಿಸಿದ್ದರು. ಅಲ್ಲದೇ ಇಶಾನ್‌ಗಿಂತ ಹೆಚ್ಚು ಅನುಭವಿಯೂ ಆಗಿರುವ ಕನ್ನಡಿಗನಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿದೆ.

ಕಳೆದ ಕೆಲವು ಪಂದ್ಯಗಳಲ್ಲಿ ಮತ್ತು ಐಪಿಎಲ್‌ನಲ್ಲಿ ಲಯ ಕಳೆದುಕೊಂಡಿದ್ದ ಹಾರ್ದಿಕ್ ಪಾಂಡ್ಯ ಅವರಿಗೆ ಈ ಪಂದ್ಯ ಪರೀಕ್ಷಾ ಕಣವಾಗಬಹುದು. ರವೀಂದ್ರ ಜಡೇಜ ಮತ್ತು ವರುಣ್ ಚಕ್ರವರ್ತಿ ಕೂಡ ಸ್ಥಾನಕ್ಕಾಗಿ ಪೈಪೋಟಿ ನಡೆಸಬೇಕಾಗಬಹುದು.

ಮೂರನೇ ಸ್ಪಿನ್ನರ್ ಆಗಿ ಆರ್. ಅಶ್ವಿನ್ ಮತ್ತು ರಾಹುಲ್ ಚಾಹರ್ ಅವರಲ್ಲಿ ಒಬ್ಬರಿಗೆ ಅವಕಾಶ ಲಭಿಸಬಹುದು. ಜಸ್‌ಪ್ರೀತ್ ಬೂಮ್ರಾ ಜೊತೆಗೆ ಭುವನೇಶ್ವರ್ ಆಡುವ ಸಾಧ್ಯತೆ ಹೆಚ್ಚಿದೆ. ಶಾರ್ದೂಲ್ ಠಾಕೂರ್ ಇರುವುದರಿಂದ ಬೌಲಿಂಗ್ ಬಲ ಹೆಚ್ಚಿದೆ.

ಐಪಿಎಲ್‌ನಲ್ಲಿ ರನ್ನರ್ಸ್ ಆಪ್ ಆದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಏಯಾನ್ ಮಾರ್ಗನ್ ಇಂಗ್ಲೆಂಡ್ ಬಳಗವನ್ನು ಮುನ್ನಡೆಸಲಿದ್ದಾರೆ. ಬೆನ್ ಸ್ಟೋಕ್ಸ್ ಅಲಭ್ಯತೆಯು ತಂಡವನ್ನು ಕಾಡಬಹುದು. ಡೇವಿಡ್ ಮಲಾನ್, ಜೇಸನ್ ರಾಯ್ ತಮ್ಮ ಲಯಕ್ಕೆ ಮರಳಿದರೆ ಭಾರತದ ಬೌಲಿಂಗ್ ಪಡೆಗೆ ಕಷ್ಟವಾಗಬಹುದು.

ಭಾರತ ಕ್ರಿಕೆಟ್ ತಂಡದ ಮಾರ್ಗದರ್ಶಕರಾಗಿ (ಮೆಂಟರ್) ನೇಮಕವಾಗಿರುವ ಮಹೇಂದ್ರಸಿಂಗ್ ಧೋನಿ ಭಾನುವಾರ ದುಬೈನಲ್ಲಿ ತಂಡವನ್ನು ಸೇರಿಕೊಂಡರು. ಮುಖ್ಯ ಕೋಚ್ ರವಿಶಾಸ್ತ್ರಿ, ಬೌಲಿಂಗ್ ಕೋಚ್ ಭರತ್ ಅರುಣ್, ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಮತ್ತು ಫೀಲ್ಡಿಂಗ್ ಕೋಚ್ ಆರ್. ಶ್ರೀಧರ್ ಅವರೊಂದಿಗೆ ಸಮಾಲೋಚನೆ ನಡೆಸಿದರು –ಬಿಸಿಸಿಐ ಚಿತ್ರ

ಇಶಾನ್ ಕಿಶನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ICC MEN'S T20 WORLD CUP 2021

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ರವೀಂದ್ರ ಜಡೇಜ, ಆರ್. ಅಶ್ವಿನ್, ವರುಣ ಚಕ್ರವರ್ತಿ, ರಾಹುಲ್ ಚಾಹರ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಭುವನೇಶ್ವರ್ ಕುಮಾರ್, ಹಾರ್ದಿಕ್ ಪಾಂಡ್ಯ.

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಜೇಸನ್ ರಾಯ್, ಸ್ಯಾಮ್ ಬಿಲಿಂಗ್ಸ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಜೊಸ್ ಬಟ್ಲರ್ (ವಿಕೆಟ್‌ಕೀಪರ್), ಜಾನಿ ಬೆಸ್ಟೊ (ವಿಕೆಟ್‌ಕೀಪರ್), ಮೋಯಿನ್ ಅಲಿ, ಟಾಮ್ ಕರನ್, ಕ್ರಿಸ್ ಜೋರ್ಡಾನ್, ಡೇವಿಡ್ ವಿಲಿ, ಕ್ರಿಸ್ ವೋಕ್ಸ್, ಟೈಮಲ್ ಮಿಲ್ಸ್, ಆದಿಲ್ ರಶೀದ್, ಮಾರ್ಕ್ ವುಡ್.

ಪಂದ್ಯ ಆರಂಭ: ರಾತ್ರಿ 7.30

ಮಿಂಚಿದ ಆಕಿಬ್, ಜತಿಂದರ್ ಸಿಂಗ್, ಮಖ್ಸೂದ್

ಒಮನ್‌ಗೆ 10 ವಿಕೆಟ್ ಜಯ

ಮಸ್ಕತ್ (ಎಎಫ್‌ಪಿ): ನಾಯಕ ಜೀಶನ್ ಮಖ್ಸೂದ್ ನಾಲ್ಕು ವಿಕೆಟ್ ಉರುಳಿಸಿ ಮಿಂಚಿದರು. ಆರಂಭಿಕ ಬ್ಯಾಟರ್‌ಗಳಾದ ಆಕಿಬ್ ಇಲಿಯಾಸ್ ಮತ್ತು ಜತಿಂದರ್ ಸಿಂಗ್ ಭರ್ಜರಿ ಬ್ಯಾಟಿಂಗ್ ಮೂಲಕ ಎದುರಾಳಿ ತಂಡವನ್ನು ಕಾಡಿದರು. ಇದರ ಪರಿಣಾಮ ಒಮನ್ ತಂಡ ಭರ್ಜರಿ ಜಯ ಗಳಿಸಿತು.

ಭಾನುವಾರ ಇಲ್ಲಿನ ಅಲ್ ಅಮೆರತ್ ನಡೆದ ಟಿ20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಪಪುವಾ ನ್ಯೂಗಿನಿ ತಂಡವನ್ನು ಒಮನ್ 10 ವಿಕೆಟ್‌ಗಳಿಂದ ಮಣಿಸಿತು. ಮಖ್ಸೂದ್ 20 ರನ್‌ಗಳಿಗೆ ನಾಲ್ಕು ವಿಕೆಟ್ ಕಬಳಿಸಿದರೆ ಆಕಿಬ್ (50; 43 ಎಸೆತ, 5 ಬೌಂಡರಿ, 1 ಸಿಕ್ಸರ್) ಮತ್ತು ಜತಿಂದರ್ (73; 42ಎ, 7 ಬೌಂ, 4 ಸಿ) ಮುರಿಯದ ಮೊದಲ ವಿಕೆಟ್‌ಗೆ ಅಜೇಯ 131 ರನ್ ಸೇರಿಸಿದರು.

ಟಾಸ್ ಗೆದ್ದ ಒಮನ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಅರಂಭಿಕ ಬ್ಯಾಟರ್‌ಗಳಾದ ಟೋನಿ ಉರ ಮತ್ತು ಲೀಗಾ ಸಿಯಾಕ ಖಾತೆ ತೆರೆಯದೇ ವಾಪಸಾದರು. ತಂಡ ಶೂನ್ಯಕ್ಕೆ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಜೊತೆಗೂಡಿದ ನಾಯಕ ಆಜಾದ್ ವಲಾ (56; 43ಎ, 4 ಬೌಂ, 3 ಸಿ) ಅವರು ಚಾರ್ಲ್ಸ್ ಅಮಿನಿ (37; 26ಎ, 4 ಬೌಂ, 1 ಸಿ) ಜೊತೆಗೂಡಿ 81 ರನ್ ಕಲೆ ಹಾಕಿದರು.

ಇದರ ಪರಿಣಾಮ ಪಪುವಾ ನ್ಯೂಗಿನಿ ಒಂಬತ್ತು ವಿಕೆಟ್‌ಗಳಿಗೆ 129 ರನ್ ಗಳಿಸಿತು. ಗುರಿ ಬೆನ್ನತ್ತಿದ ಒಮನ್ 13.4 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ ಗೆಲುವಿನ ದಡ ಸೇರಿತು.

ಪಪುವ ನ್ಯೂಗಿನಿಯ ಅಗ್ರ ಕ್ರಮಾಂಕಕ್ಕೆ ಬಿಲಾಲ್ ಖಾನ್ ಮತ್ತು ಖಲೀಮುಲ್ಲ ಪೆಟ್ಟು ನೀಡಿದರು. ಚಾರ್ಲ್ಸ್ ಅಮನಿ ರನೌಟ್ ಆಗಿ ಮರಳಿದರು. ಈ ವೇಳೆ ದಾಳಿಗೆ ಇಳಿದ ಎಡಗೈ ಸ್ಪಿನ್ನರ್ ಮಖ್ಸೂದ್ ಒಂದೇ ಓವರ್‌ನಲ್ಲಿ ಮೂರು ವಿಕೆಟ್ ಸೇರಿದಂತೆ ನಾಲ್ಕು ವಿಕೆಟ್ ಕಬಳಿಸಿದರು. ಇದು ತಂಡಕ್ಕೆ ಭಾರಿ ಆಘಾತ ನೀಡಿತು. ಕೊನೆಯ ಆರು ಮಂದಿ ಎರಡಂಕಿ ಮೊತ್ತ ದಾಟಲಾಗದೆ ಮರಳಿದರು.

ವಿಶ್ವಕಪ್ ಕ್ರಿಕೆಟ್ ಟೂರ್ನಿಯೊಂದರಲ್ಲಿ ಮೊದಲ ಪಂದ್ಯ ಆಡಿದ ಪಪುವ ನ್ಯೂಗಿನಿ ತಂಡದ ಬೌಲರ್‌ಗಳು ಕೂಡ ವೈಫಲ್ಯ ಕಂಡರು. ಆಕಿಬ್ ಇಲಿಯಾಸ್ ಮತ್ತು ಜತಿಂದರ್ ಸಿಂಗ್ ಏಳು ಮಂದಿ ಬೌಲರ್‌ಗಳ ಎಸೆತಗಳನ್ನು ಅಂಗಣದ ಎಲ್ಲ ಕಡೆ ಅಟ್ಟಿದರು.

ಸಂಕ್ಷಿಪ್ತ ಸ್ಕೋರು: ಪಪುವ ನ್ಯೂಗಿನಿ: 20 ಓವರ್‌ಗಳಲ್ಲಿ 9ಕ್ಕೆ 129 (ಅಜಾದ್ ವಲಾ 56, ಚಾರ್ಲ್ಸ್ ಅಮಿನಿ 37, ಸೆಸೆ ಬವು 13; ಬಿಲಾಲ್ ಖಾನ್ 16ಕ್ಕೆ2, ಖಲೀಮುಲ್ಲ 19ಕ್ಕೆ2, ಜೀಶನ್ ಮಖ್ಸೂದ್ 20ಕ್ಕೆ4); **ಒಮನ್:** 13.4 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 131 (ಆಕಿಬ್ ಇಲಿಯಾಸ್ ಔಟಾಗದೆ 50, ಜತಿಂದರ್ ಸಿಂಗ್ ಔಟಾಗದೆ 73). ಫಲಿತಾಂಶ: ಒಮನ್ ತಂಡಕ್ಕೆ 10 ವಿಕೆಟ್‌ಗಳ ಜಯ.

ಜತಿಂದರ್ ಸಿಂಗ್ (ಎಡ) ಮತ್ತು ಆಕಿಬ್ ಇಲಿಯಾಸ್ –ಎಎಫ್‌ಪಿ ಚಿತ್ರ

ಸ್ಕಾಟ್ಲೆಂಡ್‌ಗೆ ಮಣಿದ ಬಾಂಗ್ಲಾ

ಅಲ್ ಅಮೆರತ್ (ಪಿಟಿಐ): ಅಮೋಘ ಆಟ ಪ್ರದರ್ಶಿಸಿದ ಸ್ಕಾಟ್ಲೆಂಟ್ ತಂಡ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಪ್ರಾಥಮಿಕ ಸುತ್ತಿನ 'ಬಿ' ಗುಂಪಿನ ಪಂದ್ಯದಲ್ಲಿ ಜಯ ಸಾಧಿಸಿತು.

ಭಾನುವಾರ ರಾತ್ರಿ ಸ್ಕಾಟ್ಲೆಂಡ್ ತಂಡ ಆರು ರನ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿತು. 141 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶಕ್ಕೆ 20 ಓವರ್‌ಗಳಲ್ಲಿ ಏಳು ವಿಕೆಟ್‌ಗಳಿಗೆ 134 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಬ್ರಾಡ್ ವ್ಹೀಲ್ ಮತ್ತು ಕ್ರಿಸ್ ಗ್ರೀವ್ಸ್ ದಾಳಿ ಮುಂದೆ ಮುಷ್ಫಿಕುರ್ ರಹೀಮ್ ಕೊಂಚ ಪ್ರತಿರೋಧ ಒಡ್ಡಿ ನಿಂತರು.

ಟಾಸ್ ಗೆದ್ದ ಬಾಂಗ್ಲಾದೇಶ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕ್ರಿಸ್ ಗ್ರೀವ್ಸ್ ಬ್ಯಾಟಿಂಗ್‌ನಲ್ಲೂ ಮಿಂಚಿದರು.

ಕೊನೆಯ ಹಂತದಲ್ಲಿ ಗ್ರೀವ್ಸ್ ಮತ್ತು ಮಾರ್ಕ್ ವಾಟ್ ನಡೆಸಿದ ಹೋರಾಟದ ಫಲವಾಗಿ ಸ್ಕಾಟ್ಲೆಂಡ್ ಗೌರವಾರ್ಹ ಮೊತ್ತ ಗಳಿಸಿತು. ಬಾಂಗ್ಲಾದೇಶ ತಂಡವು ಸ್ಕಾಟ್ಲೆಂಡ್ ತಂಡವನ್ನು ಅಲ್ಪಮೊತ್ತಕ್ಕೆ ಆಲ್‌ಔಟ್ ಮಾಡುವ ವಿಶ್ವಾಸದಲ್ಲಿತ್ತು. ಅದಕ್ಕೆ ತಕ್ಕಂತೆ ಮೆಹದಿ ಹಸನ್ (19ಕ್ಕೆ3) ಮತ್ತು ಶಕೀಬ್ ಅಲ್ ಹಸನ್ (17ಕ್ಕೆ2) ಉತ್ತಮವಾಗಿ ಬೌಲಿಂಗ್ ಮಾಡಿದರು. ಶಕೀಬ್, ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ದಾಖಲೆ ಬರೆದರು.

ಸ್ಕಾಟ್ಲೆಂಡ್ ತಂಡವು 53 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಜೊತೆಗೂಡಿದ ಕ್ರಿಸ್ ಗ್ರೀವ್ಸ್ (45; 28ಎ) ಮತ್ತು ಮಾರ್ಕ್ ವಾಟ್ (22; 17ಎ) ಏಳನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು.

ಅರ್ಧಶತಕದತ್ತ ದಾಪುಗಾಲಿಟ್ಟಿದ್ದ ಕ್ರಿಸ್ ಗ್ರೀವ್ಸ್ ಅವರ ವಿಕೆಟ್ ಕಬಳಿಸಿದ ಮುಸ್ತಫಿಜುರ್ ರೆಹಮಾನ್ ನಿಟ್ಟುಸಿರು ಬಿಟ್ಟರು. ಆದರೆ ಕೊನೆಯಲ್ಲಿ ತಲಾ ಒಂದು ಸಿಕ್ಸರ್ ಹೊಡೆದು ಮಿಂಚಿದ ಜೋಶ್ ಡೇವಿ ಮತ್ತು ಸಫಾಯನ್ ಶರೀಫ್ ತಂಡದ ಮೊತ್ತ ಹೆಚ್ಚಿಸಿದರು.

ಟಿ20 ಕ್ರಿಕೆಟ್‌ನಲ್ಲಿ ಹೆಚ್ಚು ವಿಕೆಟ್ ಪಡೆದ ಐವರು

ಬೌಲರ್	ದೇಶ	ಪಂದ್ಯ	ವಿಕೆಟ್
ಶಕೀಬ್ ಅಲ್ ಹಸನ್	ಬಾಂಗ್ಲಾದೇಶ	89	108
ಲಸಿತ್ ಮಾಲಿಂಗ	ಶ್ರೀಲಂಕಾ	84	107
ಟಿಮ್ ಸೌಥಿ	ನ್ಯೂಜಿಲೆಂಡ್	83	99
ಶಾಹಿದ್ ಅಫ್ರಿದಿ	ಪಾಕಿಸ್ತಾನ	99	98
ರಶೀದ್ ಖಾನ್	ಅಫ್ಗಾನಿಸ್ತಾನ	51	95

ಸ್ಕೋರ್ ಕಾರ್ಡ್

ಸ್ಕಾಟ್ಲೆಂಡ್ 9ಕ್ಕೆ 140 (20 ಓವರ್)
ಜಾರ್ಜ್ ಬಿ ಮೆಹಿದಿ 29 (23ಎ, 4X2, 6X2), ಕೈಲ್ ಬಿ ಸೈಫುದ್ದೀನ್ 0 (7ಎ), ಮ್ಯಾಥ್ಯು ಎಲ್‌ಬಿಡಬ್ಲ್ಯು ಮೆಹಿದಿ 11 (17ಎ, 4X1), ಬ್ಯಾರಿಂಗ್ಟನ್ ಸಿ ಅಫಿಫ್ ಬಿ ಶಕೀಬ್ 2 (5ಎ), ಕಾಲಮ್ ಬಿ ಮೆಹಿದಿ 5 (14ಎ), ಲೀಸ್ಕ್ ಸಿ ಲಿಟನ್ ಬಿ ಶಕೀಬ್ 0 (2ಎ), ಗ್ರೀವ್ಸ್ ಸಿ ಶಕೀಬ್ ಬಿ ಮುಸ್ತಫಿಜುರ್ 45 (28ಎ, 4X4, 6X2), ವ್ಯಾಟ್ ಸಿ ಸರ್ಕಾರ್ ಬಿ ಟಸ್ಕಿನ್ 22 (17ಎ, 4X2), ಜೋಶ್ ಬಿ ಮುಸ್ತಫಿಜುರ್ 8 (5ಎ, 6X1), ಸಫ್ಯಾನ್ ಔಟಾಗದೆ 8 (2ಎ, 6X1), ಬ್ರಾಡ್ ಔಟಾಗದೆ 1 (1ಎ).
ಇತರೆ (ಲೆಗ್‌ಬೈ 4, ನೋಬಾಲ್ 1, ವೈಡ್ 4) 9
ವಿಕೆಟ್ ಪತನ: 1–5 (ಕೈಲ್ ಕೊಯಿಟ್ಜರ್, 2.4), 2–45 (ಮ್ಯಾಥ್ಯು ಕ್ರಾಸ್, 7.2), 3–46 (ಜಾರ್ಜ್ ಮುನ್ಸಿ, 7.5), 4–52 (ರಿಚಿ ಬ್ಯಾರಿಂಗ್ಟನ್, 10.2), 5–52 (ಮೈಕೆಲ್ ಲೀಸ್ಕ್, 10.4), 6–53 (ಕಾಲಮ್ ಮೆಕ್‌ಲಾಯ್ಡ್, 11.3), 7–104 (ಮಾರ್ಕ್ ವ್ಯಾಟ್, 17.1), 8–131 (ಕ್ರಿಸ್ ಗ್ರೀವ್ಸ್, 19.2), 9–131 (ಜೋಶ್ ಡೆವಿ, 19.3).
ಬೌಲಿಂಗ್: ಟಸ್ಕಿನ್ ಅಹಮದ್ 3–0–28–1, ಮುಸ್ತಫಿಜುರ್ ರೆಹಮಾನ್ 4–1–32–2, ಮೊಹಮ್ಮದ್ ಸೈಫುದ್ದೀನ್ 4–0–30–1, ಶಕೀಬ್ ಅಲ್ ಹಸನ್ 4–0–17–2, ಮೆಹಿದಿ ಹಸನ್ 4–0–19–3, ಅಫಿಫ್ ಹುಸೇನ್ 1–0–10–0

ಬಾಂಗ್ಲಾದೇಶ 7ಕ್ಕೆ 134 (20 ಓವರ್)
ಲಿಟನ್ ಸಿ ಮುನ್ಸಿ ಬಿ ಬ್ರಾಡ್ 5 (7ಎ), ಸರ್ಕಾರ್ ಸಿ ಮುನ್ಸಿ ಬಿ ಡೆವಿ 5 (5ಎ, 4X1), ಶಕೀಬ್ ಸಿ ಮೆಕ್‌ಲಾಯ್ಡ್ ಬಿ ಗ್ರೀವ್ಸ್ 20 (28ಎ, 4X1), ಮುಷ್ಫಿಕರ್ ಬಿ ಗ್ರೀವ್ಸ್ 38 (36ಎ, 4X1, 6X2), ಮೆಹಮುದುಲ್ಲಾ ಸಿ ಮೆಕ್‌ಲಾಯ್ಡ್ ಬಿ ಬ್ರಾಡ್ 23 (22ಎ, 4X1, 6X1), ಅಫಿಫ್ ಸಿ ಡೆವಿ ಬಿ ವ್ಯಾಟ್ 18 (12ಎ, 4X2), ನೂರುಲ್ ಸಿ ಮೆಕ್‌ಲಾಯ್ಡ್ ಬಿ ಬ್ರಾಡ್ 2 (3ಎ), ಮೆಹಿದಿ ಔಟಾಗದೆ 13 (5ಎ, 4X1, 6X1), ಸೈಫುದ್ದೀನ್ ಔಟಾಗದೆ 5 (2ಎ, 4X1)
ಇತರೆ (ಲೆಗ್‌ಬೈ 2, ವೈಡ್ 3) 5
ವಿಕೆಟ್ ಪತನ: 1–8 (ಸೌಮ್ಯ ಸರ್ಕಾರ್, 1.3), 2–18 (ಲಿಟನ್ ದಾಸ್, 3.3), 3–65 (ಶಕೀಬ್ ಅಲ್ ಹಸನ್, 11.1), 4–74 (ಮುಶ್ಫೀಕರ್ ರಹೀಂ, 13.1), 5–106 (ಅಫಿಫ್ ಹುಸೇನ್, 17.3), 6–110 (ನೂರುಲ್ ಹಸನ್, 18.2), 7–116 (ಮೆಹಮುದುಲ್ಲಾ, 18.5).
ಬೌಲಿಂಗ್: ಬ್ರಾಡ್ ವೀಲ್ 4–0–24–3, ಜೋಶ್ ಡೆವಿ 4–0–24–1, ಸಫ್ಯಾನ್ ಶರೀಫ್ 3–0–26–0, ಮೈಕೆಲ್ ಲೀಸ್ಕ್ 2–0–20–0, ಮಾರ್ಕ್ ವ್ಯಾಟ್ 4–0–19–1, ಕ್ರಿಸ್ ಗ್ರೀವ್ಸ್ 3–0–19–2

ಫಲಿತಾಂಶ: ಸ್ಕಾಟ್ಲೆಂಡ್‌ಗೆ 6 ರನ್‌ಗಳ ಗೆಲುವು

ಶ್ರೀಲಂಕಾ–ನಮೀಬಿಯಾ ತಂಡಗಳ ಹಣಾಹಣಿ ಇಂದು

ಶನಕ ಪಡೆಗೆ ಶುಭಾರಂಭದ ನಿರೀಕ್ಷೆ

ಅಬುಧಾಬಿ (ಪಿಟಿಐ): ಮಾಜಿ ಚಾಂಪಿಯನ್ ಶ್ರೀಲಂಕಾ ತಂಡವು ಟಿ20 ವಿಶ್ವಕಪ್ ಅಭಿಯಾನವನ್ನು ನಮೀಬಿಯಾ ತಂಡವನ್ನು ಎದುರಿಸುವುದರ ಮೂಲಕ ಆರಂಭಿಸಲಿದೆ. ಉಭಯ ತಂಡಗಳ ನಡುವಣ ಅರ್ಹತಾ ಸುತ್ತಿನ ಪಂದ್ಯ ಸೋಮವಾರ ಇಲ್ಲಿ ನಿಗದಿಯಾಗಿದೆ.

2014ರ ಆವೃತ್ತಿಯಲ್ಲಿ ದ್ವೀಪರಾಷ್ಟ್ರ ತಂಡ ಶ್ರೀಲಂಕಾ ಚಾಂಪಿಯನ್ ಪಟ್ಟ ಅಲಂಕರಿಸಿತ್ತು.

ಆ ಬಳಿಕ ಪ್ರಮುಖ ಆಟಗಾರರು ಒಬ್ಬೊಬ್ಬರಾಗಿ ವಿದಾಯ ಹೇಳಿದ್ದು ತಂಡಕ್ಕೆ ಹೊಡೆತ ನೀಡಿತು. ಕುಮಾರ್ ಸಂಗಕ್ಕಾರ, ಮಹೇಲ ಜಯವರ್ಧನೆ, ತಿಲಕರತ್ನೆ ದಿಲ್‌ಶಾನ್, ರಂಗನಾ ಹೆರಾತ್, ಲಸಿತ್ ಮಾಲಿಂಗ, ನುವಾನ್ ಕುಲಶೇಖರ ಹಾಗೂ ತಿಸಾರ ಪೆರೇರ ನಿವೃತ್ತಿ ಘೋಷಿಸಿದ್ದರು.

ಚಾಂಪಿಯನ್ ಆಗಿದ್ದ ತಂಡವು ಈಗ ಅರ್ಹತಾ ಸುತ್ತಿನ ಮೂಲಕ ಸೂಪರ್ 12 ಹಂತಕ್ಕೆ ಪ್ರವೇಶ ಪಡೆಯಬೇಕಿದೆ. ಇಂಗ್ಲೆಂಡ್‌ನಲ್ಲಿ ಬಯೋಬಬಲ್ ನಿಯಮ ಉಲ್ಲಂಘಿಸಿ ಅಮಾನತುಗೊಂಡಿರುವ ನಿರೋಶನ್ ಡಿಕ್ವೆಲ್ಲಾ, ಕುಶಲ್ ಮೆಂಡಿಸ್, ಧನುಷ್ಕಾ ಗುಣತಿಲಕ ಅವರ ಅನುಪಸ್ಥಿತಿಯು ತಂಡವನ್ನು ಕಾಡುತ್ತಿದೆ.

ದಿನೇಶ್ ಚಾಂಡಿಮಲ್ ಮತ್ತು ಕುಶಲ್ ಪೆರೇರ ಸದ್ಯ ತಂಡದಲ್ಲಿರುವ ಅನುಭವಿ ಆಟಗಾರರು. ವನಿಂದು ಹಸರಂಗ ಬೌಲಿಂಗ್ ಹಾಗೂ ಬ್ಯಾಟಿಂಗ್‌ನಲ್ಲಿಯೂ ಮಿಂಚಬಲ್ಲರು.

ನಮೀಬಿಯಾ 2003ರ ಬಳಿಕ ಇದೇ ಮೊದಲ ಬಾರಿ ವಿಶ್ವಕಪ್ ಹಂತದ ಸ್ಪರ್ಧೆಗೆ ಸಜ್ಜಾಗಿದೆ.

ಉತ್ತಮ ಸಾಮರ್ಥ್ಯದ ಮೂಲಕ ವಿಶ್ವಕಪ್ ಅರ್ಹತಾ ಟೂರ್ನಿಗೆ ಪ್ರವೇಶ ಗಿಟ್ಟಿಸಿರುವ ತಂಡವು ಗೆರಾರ್ಡ್ ಎರಾಸ್ಮಸ್ ನಾಯಕತ್ವದಲ್ಲಿ ಸೂಪರ್ 12 ಹಂತಕ್ಕೆ ಪ್ರವೇಶ ಪಡೆಯುವ ತವಕದಲ್ಲಿದೆ.

ತಂಡಗಳು: ನಮೀಬಿಯಾ: ಗೆರಾರ್ಡ್ ಎರಾಸ್ಮಸ್ (ನಾಯಕ), ಸ್ಟೀಫನ್ ಬಾರ್ಡ್, ಕಾರ್ಲ್ ಬರ್ಕಿನ್‌ಸ್ಟಾಕ್, ಮಿಚಾ ಡು ಪ್ರೀಜ್, ಜಾನ್ ಫ್ರಿಲಿಂಚ್, ಜೇನ್ ಗ್ರೀನ್, ನಿಕೋಲ್ ಲೋಫಿ ಈಟನ್, ಬೆರಾರ್ಡ್ ಸ್ಕಾಲ್ಟ್ಸ್, ಬೆನ್ ಶಿಕೊಂಗೊ, ಜೆಜೆ ಸ್ಮಿಟ್, ರುಬೆನ್ ಟ್ರಂಪಲ್‌ಮನ್, ಮೈಕೆಲ್ ವಾನ್ ಲಿಂಗೆನ್, ಡೇವಿಡ್ ವೈಸ್, ಕ್ರೇಗ್ ವಿಲಿಯಮ್ಸ್, ಪಿಕ್ಕಿ ಯಾ ಫ್ರಾನ್ಸ್.

ಶ್ರೀಲಂಕಾ: ದಸುನ್ ಶನಕ (ನಾಯಕ), ಕುಶಲ್ ಜನಿತ್ ಪೆರೇರ, ದಿನೇಶ್ ಚಾಂಡಿಮಲ್, ಧನಂಜಯ ಡಿಸಿಲ್ವಾ, ಪಾತುಮ್ ನಿಸಂಕಾ, ಚರಿತ ಅಸಲಂಕ, ಆವಿಷ್ಕಾ ಫರ್ನಾಂಡೊ, ಭಾನುಕಾ ರಾಜಪಕ್ಷ, ಚಾಮಿಕಾ ಕರುಣಾರತ್ನೆ, ವನಿಂದು ಹಸರಂಗ, ದುಷ್ಮಂತ ಚಮೀರ, ಲಾಹಿರು ಕುಮಾರ್, ಮಹೀಶ್ ತೀಕ್ಷನ, ಅಖಿಲ ಧನಂಜಯ, ಬಿನುರಾ ಫರ್ನಾಂಡೊ.

ಪಂದ್ಯ ಆರಂಭ: ಸಂಜೆ 7.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಪಾಕ್ ಎದುರಿನ ಪಂದ್ಯಕ್ಕೆ ವಿರೋಧ

ಬೆಂಗಳೂರು: ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಆಡಬಾರದು ಮತ್ತು ಪಾಕ್ ತಂಡವನ್ನು ಉಚ್ಚಾಟಿಸಬೇಕು ಎಂದು ಟ್ವಿಟರ್‌ನಲ್ಲಿ ಅಭಿಯಾನ ಆರಂಭಿಸಲಾಗಿದೆ.

ಹ್ಯಾಷ್‌ಟ್ಯಾಗ್ ಬ್ಯಾನ್ ಪಾಕ್ ಕ್ರಿಕೆಟ್ ಎಂಬ ಅಭಿಯಾನದಲ್ಲಿ ಹಲವರು, 'ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರನ್ನು ಪಾಕ್ ನುಗ್ಗಿಸುತ್ತಿದೆ. ಆದ್ದರಿಂದ ಆ ದೇಶದ ಜೊತೆಗೆ ಯಾವುದೇ ಸಂಬಂಧ ಬೇಡ. ಕ್ರಿಕೆಟ್ ಕೂಡ ಬೇಡ' ಎಂದು ಟ್ವೀಟ್‌ಗಳನ್ನು ಮಾಡಿದ್ದಾರೆ.

ವಿಶ್ವದ ನಂ. 1
100% ಮೂಲಿಕೆ
ಬಿಳಿ ಮಚ್ಚೆ

ಹೊಸದಾಗಿ ಕಂಡುಹಿಡಿದ ಔಷಧಿಗಳನ್ನು ಬಳಸಿದ ನಂತರ ಬಿಳಿ ಮಚ್ಚೆಗಳು 5-6 ಗಂಟೆಗಳಲ್ಲಿ ದೇಹದ ನೈಸರ್ಗಿಕ ಬಣ್ಣಕ್ಕೆ ತಿರುಗುತ್ತವೆ. ಮತ್ತು ಸಂಪೂರ್ಣವಾಗಿ ಗುಣಪಡಿಸಲು ಪರಿಣಾಮಕಾರಿ ಚಿಕಿತ್ಸೆಗಾಗಿ ಕರೆಮಾಡಿ.
09708473255, 09835860484

ಐರ್ಲೆಂಡ್‌ಗೆ ನೆದರ್ಲೆಂಡ್ಸ್ ಎದುರಾಳಿ

ಅಲ್ ಅಮೆರತ್, ಒಮನ್ (ಪಿಟಿಐ): ಐರ್ಲೆಂಡ್ ತಂಡವು ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ. 'ಎ' ಗುಂಪಿನ ಈ ಹಣಾಹಣಿಯ ಮೂಲಕ ಸೂಪರ್ 12 ಹಂತಕ್ಕೆ ಅರ್ಹತೆ ಗಳಿಸುವ ತಮ್ಮ ಪ್ರಯತ್ನಕ್ಕೆ ಮುನ್ನುಡಿ ಬರೆಯಲು ಸಜ್ಜಾಗಿವೆ.

ಐರ್ಲೆಂಡ್ ಎದುರು ಆಡಿರುವ 12 ಟಿ20 ಪಂದ್ಯಗಳ ಪೈಕಿ ಏಳರಲ್ಲಿ ಜಯ ಸಾಧಿಸಿರುವ ನೆದರ್ಲೆಂಡ್ಸ್ ಸಹಜವಾಗಿಯೇ ಆತ್ಮವಿಶ್ವಾಸದಲ್ಲಿದೆ.

ಐರ್ಲೆಂಡ್ ತಂಡಕ್ಕೂ ವಿಶ್ವಕಪ್ ಟೂರ್ನಿಯಲ್ಲಿ ಪ್ರಮುಖ ತಂಡಗಳನ್ನು ಮಣಿಸಿದ ಇತಿಹಾಸವಿದೆ. ಪಾಕಿಸ್ತಾನ (2007), ಇಂಗ್ಲೆಂಡ್ (2011), ಜಿಂಬಾಬ್ವೆ (2015) ಹಾಗೂ ಬಾಂಗ್ಲಾದೇಶ (2009ರ ಟಿ20 ವಿಶ್ವಕಪ್) ತಂಡಗಳು ಐರ್ಲೆಂಡ್ ಎದುರು ಆಘಾತ ಅನುಭವಿಸಿದ್ದವು. ಹೀಗಾಗಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಿರೀಕ್ಷಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕೋಚ್ ಹುದ್ದೆಗೆ ಬಿಸಿಸಿಐ ಅರ್ಜಿ ಆಹ್ವಾನ

ನವದೆಹಲಿ (ಪಿಟಿಐ): ರಾಹುಲ್ ದ್ರಾವಿಡ್ ಅವರನ್ನು ತರಬೇತುದಾರ ಸ್ಥಾನಕ್ಕೆ ಮನವೊಲಿಸಿದ ಎರಡು ದಿನಗಳ ಬಳಿಕ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಭಾನುವಾರ ಭಾರತ ತಂಡದ ಮುಖ್ಯ ಕೋಚ್ ಹಾಗೂ ಮೂವರು ಸಹಾಯಕ ಕೋಚ್‌ಗಳ ಹುದ್ದೆಗಳಿಗೆ ಔಪಚಾರಿಕವಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರ ಶಿಫಾರಸುಗಳ ಮೇರೆಗೆ ರೂಪಿಸಿದ ನಿಯಮಗಳನ್ವಯ ಬಿಸಿಸಿಐ ಈ ಅರ್ಜಿಗಳನ್ನು ಆಹ್ವಾನಿಸಿದೆ.

ಏನಾದರೂ ಪವಾಡ ನಡೆಯದಿದ್ದರೆ, ಪ್ರಸ್ತುತ ಎನ್‌ಸಿಎ ಮುಖ್ಯಸ್ಥರಾಗಿರುವ ಮತ್ತು ಭಾರತ 'ಎ' ಮತ್ತು 19 ವರ್ಷದೊಳಗಿನವರ ತಂಡಗಳ ಮಾರ್ಗದರ್ಶಕ ಶಕ್ತಿಯಾಗಿರುವ ದ್ರಾವಿಡ್ ಅವರು ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗಿದೆ.

ಐಪಿಎಲ್ ಟೂರ್ನಿಯ ಫೈನಲ್ ಸಂದರ್ಭದಲ್ಲಿ ದುಬೈನಲ್ಲಿ ನಡೆದ ಬಿಸಿಸಿಐನ ಉನ್ನತ ಅಧಿಕಾರಿಗಳ ಜೊತೆಗಿನ ಚರ್ಚೆಯಲ್ಲಿ ದ್ರಾವಿಡ್ ಈಗಾಗಲೇ ಹುದ್ದೆ ವಹಿಸಿಕೊಳ್ಳಲು ಅನೌಪಚಾರಿಕವಾಗಿ ಒಪ್ಪಿಕೊಂಡಿದ್ದಾರೆ. ಆದಾಗ್ಯೂ, ಬಿಸಿಸಿಐ, ಕ್ರಿಕೆಟ್ ಸಲಹಾ ಸಮಿತಿಯ(ಸಿಎಸಿ) ಮೂಲಕ ಅಪೆಕ್ಸ್ ಸಮಿತಿಗೆ ಈ ಕುರಿತು ಔಪಚಾರಿಕ ಶಿಫಾರಸು ಮಾಡಬೇಕಾಗುತ್ತದೆ. ಎಲ್ಲಾ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಕ್ಟೋಬರ್ 26 ಕೊನೆಯ ದಿನವಾಗಿದೆ.

2023ರ ವಿಶ್ವಕಪ್ ಅಂದರೆ ಎರಡು ವರ್ಷಗಳ ಅವಧಿಗೆ ಮುಖ್ಯ ಕೋಚ್, ಬೌಲಿಂಗ್, ಬ್ಯಾಟಿಂಗ್ ಮತ್ತು ಫೀಲ್ಡಿಂಗ್ ತರಬೇತುದಾರರ ಹುದ್ದೆಗಳಿಗೆ ಬಿಸಿಸಿಐ ಅರ್ಜಿಗಳನ್ನು ಆಹ್ವಾನಿಸಿದೆ.

ಸದ್ಯ ಬ್ಯಾಟಿಂಗ್ ಕೋಚ್ ಆಗಿರುವ ವಿಕ್ರಂ ರಾಥೋಡ್ ಮತ್ತೊಮ್ಮೆ ಅರ್ಜಿ ಸಲ್ಲಿಸಿದರೆ ಅವರ ಅವಧಿಯನ್ನು ವಿಸ್ತರಿಸುವ ಸಾಧ್ಯತೆಯಿದೆ.

ಬೌಲಿಂಗ್ ತರಬೇತುದಾರರ ಹುದ್ದೆಗೆ ಪಾರಸ್ ಮಾಂಬ್ರೆ ಆಯ್ಕೆಯಾಗುವ ನಿರೀಕ್ಷೆಯಿದೆ.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಬೇಕಾದ ಕ್ರೀಡಾ ವಿಜ್ಞಾನ ಮತ್ತು ವೈದ್ಯಕೀಯ ವಿಭಾಗದ ಮುಖ್ಯಸ್ಥ ಹುದ್ದೆಗೂ ಬಿಸಿಸಿಐ ಅಭ್ಯರ್ಥಿಗಳ ಶೋಧ ನಡೆಸಿದೆ. ಈ ಹುದ್ದೆಯಲ್ಲಿದ್ದ ಆಶಿಶ್ ಕೌಶಿಕ್ ಇತ್ತೀಚೆಗೆ ಸ್ಥಾನ ತ್ಯಜಿಸಿದ್ದರು.

ರಾಹುಲ್ ದ್ರಾವಿಡ್

ವಿಕ್ರಂ ರಾಥೋಡ್– ಪಿಟಿಐ ಚಿತ್ರಗಳು

ಬೈಕ್ ರೇಸ್: ಶಿವಮೊಗ್ಗದ ರಾಜೇಂದ್ರಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಹೊಸ ಹಂಪಿ ಹೊರವಲಯದಲ್ಲಿ ಭಾನುವಾರ ನಡೆದ 'ಉತ್ಸವ್ ದಿ ಹಂಪಿ' ರಾಷ್ಟ್ರೀಯ ಬೈಕ್ ರೇಸ್ ಚಾಂಪಿಯನ್‌ಷಿಪ್‌ನಲ್ಲಿ ಶಿವಮೊಗ್ಗದ ರಾಜೇಂದ್ರ ಅವರು ಅತ್ಯುತ್ತಮ ಸಾಧನೆ ತೋರಿ ಸಮಗ್ರ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಕೇರಳದ ಸ್ಯಾಮುವೆಲ್ ಜೇಕಬ್ ಎರಡನೇ ಮತ್ತು ಮೈಸೂರಿನ ಅಬ್ದುಲ್ ವಾಹೀದ್ ತನ್ವೀರ್ ಮೂರನೇ ಸ್ಥಾನ ಗಳಿಸಿದ್ದಾರೆ.

ಒಂಬತ್ತು ಜನ ಯುವತಿಯರು ಸೇರಿದಂತೆ ದೇಶದ ನಾನಾ ಭಾಗಗಳ 84 ಬೈಕ್ ರೇಸರ್ ಗಳು ಪಾಲ್ಗೊಂಡಿದ್ದರು. ಪ್ರವಾಸೋದ್ಯಮ ಇಲಾಖೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಎಂಆರ್‌ಎಫ್, ಮೋಟಾರ್ ಸ್ಪೋರ್ಟ್ಸ್ ಅಕಾಡೆಮಿ ವಿಜಯನಗರ ಹಂಪಿ ಸಹಭಾಗಿತ್ವದಲ್ಲಿ ಆಯೋಜಿಸಲಾಗಿತ್ತು.

ಹೊಸಪೇಟೆ ತಾಲ್ಲೂಕಿನ ಹೊಸ ಹಂಪಿಯಲ್ಲಿ ನಡೆದ ಬೈಕ್ ರೇಸ್‌ನಲ್ಲಿ ಸ್ಪರ್ಧಿಯೊಬ್ಬರು ಮುನ್ನುಗ್ಗಿದ ಪರಿ

ಬೆಂಗಳೂರು ರೇಸ್ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ತಿಂಗಳ 21ರಂದು ಪ್ರಾರಂಭವಾಗಬೇಕಾಗಿದ್ದ ಬೆಂಗಳೂರು ಚಳಿಗಾಲದ ರೇಸ್‌ಗಳನ್ನು ಪ್ರತಿಕೂಲ ಹವಾಮಾನದ ಕಾರಣ ಅಕ್ಟೋಬರ್ 31ಕ್ಕೆ ಮುಂದೂಡಲಾಗಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

• ಕಜ್ಜಿ • ಗಜಕರ್ಣ • ಒಣ ಇಸುಬು
ಮುಂತಾದ ಸಮಸ್ಯೆಗಳಿಂದ ಚರ್ಮವನ್ನು ರಕ್ಷಿಸಿ

ಹೌದು! ನೀವು ಕೂಡ ಗಜಕರ್ಣ, ತುರಿಕೆ, ತ್ವಚೆಯ ಉರಿತ, ಚರ್ಮ ಸಮಸ್ಯೆ, ಉರ್ಟಿಕೇರಿಯಾ, ಒಣ ಇಸಬು ಸಮಸ್ಯೆಗಳಿಂದ ಬಳಲುತ್ತಿದ್ದರೆ ಚಿಂತಿಸದಿರಿ. ಏಕೆಂದರೆ, ಇವೆಲ್ಲ ಸಮಸ್ಯೆಗಳ ಉಪಶಮನಕ್ಕೆ 'ಇಚ್ಗಾ' ಆಯುರ್ವೇದಿಕ ಮಲ್ಹಮ್ ಒಂದು ಉಪಯುಕ್ತ ಔಷಧಿಯಾಗಿದೆ. 'ಇಚ್ಗಾ' ಮಲ್ಹಮ್‌ನ್ನು ಪರಿಶುದ್ಧ ಗಂಧಕ, ಸ್ಫಟಿಕ ಭಸ್ಮ, ತಂಕಣ ಭಸ್ಮ, ರಾಳ ಇತ್ಯಾದಿಗಳಿಂದ ತಯಾರಿಸಲಾಗಿದೆ. ಇದೊಂದು ಅಧಿಕೃತ ಆಯುರ್ವೇದಿಕ ಔಷಧಿಯಾಗಿದೆ.

Dr. Juneja's ಇಚ್ಗಾರ್ಡ್®
ಆಯುರ್ವೇದಿಕ ಮಲ್ಹಮ್
• ಮೊದಲ ದಿನದಿಂದಲೇ ಫಲಿತಾಂಶ ಕಾಣುವಿರಿ
• ಅಂಟಿಕೊಳ್ಳದು, ಕಲೆ & ಗೀಚು ಮಾಡದು
Just ₹25* Only
*12g